[illegible] ಕಿರಣ ೧

ತಪ್ಪಿದ ಹೆಜ್ಜೆ

ಹೇಮಂತ

★

ಜನವರಿ
೧೯೫೨



ಬೆಲೆ : ಒಂದು ರೂಪಾಯಿ



"ತಪ್ಪಿದ ಹೆಜ್ಜೆ" ಇದು

"Oscar Wilde" ರ "Ideal Husband"

ಎಂಬ ನಾಟಕವನ್ನು ಆಧರಿಸಿದುದು.

—ಹೇಮಂತ

ಮುದ್ರಕರು ಹಾಗು ಪ್ರಕಾಶಕರು

ಭಾಲಚಂದ್ರ ಘಾಣೇಕರ, ಪ್ರತಿಭಾ ಮುದ್ರಣ, ಧಾರವಾಡ

ಪ್ರಕಾಶಕರ ಮಾತು

ವೈವಿಧ್ಯತೆಯೇ ನಮ್ಮ ಮಾಲೆಯ ಈ ವರುಷದ ವಿಶೇಷತೆಯಾಗಿದೆ ಎಂದು ತಿಳಿಸಲು ಸಮಾಧಾನವೆನಿಸುತ್ತದ ಸಣ್ಣ ಕಥೆಗಳ ಪ್ರಾತಿನಿಧಿಕ ಸಂಕಲನವೊಂದಾದರೆ, ಪ್ರೇಮಸಮಸ್ಯಾತ್ಮಕವಾದ ಸಾಮಾಜಿಕ ಕಾದಂಬರಿ ಒಂದಾಯಿತು, ಆಮೇಲೊಂದು ಶೃಂಗಾರ ರಸಾವೇಶವಾದ ಭಕ್ತಿಕಾವ್ಯವಾದರೆ, ಇನ್ನೊಂದು ಅಶ್ರದ್ಧೆ ಮತ್ತು ಸ್ವಾರ್ಥಪರತೆಯಿಂದ ಸಾಗುವ ಇಂದಿನ ಸಾರ್ವಜನಿಕ ಜೀವನವನ್ನು, ತಾರುಣ್ಯದ ಭಾವುಕನೇವಾಬುದ್ಧಿಯಿಂದ ಚರ್ಚಿಸುವ ಕಥನಾತ್ಮಕಕಾದಂಬರಿಯಾಗಿದೆ 'ಅಪರಾಧಿ ನಾನಲ್ಲ'

ಇದೀಗ ಕೊಡುತ್ತಿರುವ 'ತಪ್ಪಿದ ಹೆಜ್ಜೆ' ಉತ್ತಮ ಪಾಶ್ಚಾತ್ಯ ಕೃತಿಯೊಂದನ್ನು, ಅಲ್ಲಿಯ ಆವರಣ-ರೀತಿನೀತಿಗಳನ್ನು ಇಲ್ಲಿಯವಾಗುವಂತೆ ರೂಪಿಸಿದ ಸುಂದರ ನಾಟಕವಾಗಿದೆ ನಾಟಕ ಪರಕೀಯ ಕೃತಿಯದಾಗಿದೆಯೆಂದು ಕ್ಷಣಮಾತ್ರ ಎನಿಸಬಹುದಾದರೂ, ಸುಶಿಕ್ಷಿತವಾದ—ಪಾಶ್ಚಾತ್ಯ ಸಂಸ್ಕೃತಿಯ ತನಗೂಳ್ಳಿಯನುಂಪೆಸಿಸುವ ಕೆಲವೊಂದಂಶಗಳನ್ನು ಆತ್ಮಸಾತ್ ಮಾಡಿಕೊಂಡಿರುವ - ಸಮಾಜ ನಮ್ಮ ಕಣ್ಣೆದುರಿಗೇ ಇರುವುದರಿಂದ ಈ ನಾಟಕದಲ್ಲಿ ಅಸ್ವಾಭಾವಿಕತೆ ಅಥವಾ ವಿಸಂಗತಿ ತೋರುವುದಿಲ್ಲ ಎನ್ನಬಹುದು ಆ ರೀತಿ, ನಾಟಕ ಪರಿವರ್ತನೆಯಲ್ಲಿ ಲೇಖಕರು ದಕ್ಷತೆಯಿಂದ ಕೆಲಸ ಮಾಡಿದ್ದಾರೆ ಈ ಕೃತಿಯನ್ನು ನಮ್ಮ ಮಾಲೆಗೆ ಕೊಟ್ಟುದಕ್ಕಾಗಿ ಶ್ರೀ ಹನುಮಂತರಿಗೆ ನಾವು ಚಿರಋಣಿ ಇನ್ನು ನಾಟಕದ ಮುಂದಿನ ಪ್ರಕಟನೆ ಪ್ರೊ ಬ ಹ ಶ್ರೀಧರರ 'ಹೊಸಗನ್ನಡ ಸಾಹಿತ್ಯಶೈಲಿ' ವಿಮರ್ಶಾಗ್ರಂಥವಾಗಿದೆ

ನಮ್ಮ ಮಾಲೆಯ ಮೂಲಕ, ಬಹುಮಟ್ಟಿಗೆ ವಾಚನಾಭಿರುಚಿ ಹೆಚ್ಚಿರುವ ಜನರಲ್ಲಿ, ವಿವಿಧ ಪರಿಜ್ಞಾನವೂ ಉಂಟಾಗಲಿ ಎಂಬಣಿಕೆಯಿಂದ ನಾನಾ ಬಗೆಯ ಪ್ರಕಟನೆಗಳ ಯೋಜನೆ ಮಾಡಿದ್ದೇವೆ ಇಂತಹ ವೈವಿಧ್ಯ - ಸಾಹಿತ್ಯ, ಶಾಸ್ತ್ರ, ಕಾವ್ಯ ಇ —ಜನರಿಗೆ ಎಷ್ಟರಮಟ್ಟಿಗೆ ಸೇರುವುದೋ ಎಂಬ ಸಂದೇಹ ನಮಗೆ ಬಲವಾಗಿಯೇ ಇದೆ ಆದರೆ, ಬರೀ ಕಥೆ ಕಾದಂಬರಿಗಳನ್ನೇ ಕೊಟ್ಟು ಎಷ್ಟು ಮಾಲೆಗಳು ನಿಂತಿವೆ, ಎಷ್ಟು ಹಾಳಾಗಿ ಹೋಗಿವೆ ಎಂಬುದನ್ನು ನೆನೆದಾಗ, ಇಂತಹ ಅನಿವಾರ್ಯ ವೈವಿಧ್ಯದಿಂದ ಹೊಸ ಪ್ರವೃತ್ತಿ ಜನ ಓದುಗರು ಬೇಸರಗೊಂಡಾರು ಏನೆ ಎಂದು ತೋರಿತು ಅಂತೆಯೇ ಈ ಬಗೆಯ ಪ್ರಕಟನೆಗಳ ಕೈಯಿಕ್ಕುವ ಸಾಹಸ ಮಾಡಿದ್ದೇವೆ

ಈ ನಮ್ಮ ಕಾರ್ಯಕ್ಕೆ ಪ್ರೋತ್ಸಾಹನೆ ದೊರೆಯುವುದು, ಚಂದಾದಾರರಿಂದಲೋ ಬಿಡಿ ಓದುಗರಿಂದಲೋ, ಸಾರ್ವಜನಿಕ ವಾಚನಾಲಯಗಳಿಂದಲೋ-ಯಾವುದೂ ಗೊತ್ತಿಲ್ಲ. ಆದರೂ ಯಶಸ್ವಿಯಾಗುವ ಆಶಯದ

೧೦–೧-೧೯೫೨ ಬಾಲಚಂದ್ರ ಘಾಣೇಕರ

ಪಾತ್ರವಿವರ



೧. ಅವಿನಾಶ—ರಾಜ್ಯದ ಉದ್ಯೋಗ ಮಂತ್ರಿ.

೨. ಶೇಖರ—ಅವಿನಾಶನ ಮಿತ್ರ.

೩. ರಾಮರಾಯರು—ಶೇಖರನ ತಂದೆ.

೪. ಸುಧಾ—ಅವಿನಾಶನ ಪತ್ನಿ.

೫. ಮಂದಾ—ಅವಿನಾಶನ ತಂಗಿ.

೬. ಲಲಿತಾ—ರಾಜಕೀಯ ಜೀವನದ ವಿಷಚಕ್ರದಲ್ಲಿ
ಹೊಕ್ಕು ಸಾಹಸಕ್ಕೆ ನಿಂತ ಒಬ್ಬ ನೀತಿಯ
ನಿಬಂಧದಾಚೆಗಿರುವ ಆಧುನಿಕ ಸ್ತ್ರೀ !

೭. ಕಲ್ಲಳ್ಳಿಯ ಗೌಡರು

ಅಲ್ಲದೆ ಲೇಖಕ, ಪ್ರಾಧ್ಯಾಪಕ, ಸೇವಕರು, ಇತ್ಯಾದಿ, ಇತ್ಯಾದಿ.

ಕಾಲ : ಆಧುನಿಕ.

ಸ್ಥಳ : ರಾಜ್ಯದ ರಾಜಧಾನಿಯೊಂದು.

ಪ್ರವೇಶ ೧

[ಅ[illegible]ನಾ[illegible]ರ "ಮುಂಕ್ರಿಸಿವಾಸ" ಅಪ್ಪಟನ ಅನನಸೌಂದರ್ಯಗಳಿಂದ ಕಲಾ ಸೌಂದರ್ಯದಿಂದ ಸುಶೋಭಿತವಾದ ದಿವಾಣಖಾನೆ

ಕಾಲ ಸಾಯಂಕಾಲ

ಮುಂದಾ ಹಾಡುತ್ತಿದ್ದಾಳೆ. ಕೆಲವು ಆಮಂತ್ರಿತ ಅತಿಥಿಗಳು (ಲೇಖಕ, ಪ್ರಾಧ್ಯಾಪಕ ಮುಂತಾದವರು) ಅಲ್ಲಲ್ಲಿ ಹಾಯಾಗಿ ಕುಳಿತುಕೊಂಡಿದ್ದಾರೆ. ಹಾಡು ಮುಗಿದ ನಂತರ '[illegible]' ಎಂದು [illegible] ಸೇವಕನು ಮಾತುಗಳಿಂದ [illegible] ಅವನ [illegible] visiting [illegible] ಮುಂದಾಳ [illegible]]

ಮುಂದಾ— ಯಾರಂತೆ? ಓಹೋ, ಕೃಷ್ಣಯ್ಯ ಗೌಡರು? ಅವ[illegible] ಕಾರ್ಡ್ [illegible] ಬೇಕು? ಅವರನ್ನು ಹಾಗೇ ಕರಕೊಂಡು ಬರಬಾರದೇನು? ಹೋಗು.

ಸೇವಕ— ಅವರೇ ಹೇಳಿದರು, ಕಾರ್ಡ್ ತೋರಿಸು ಅಂತ

[ಹೋಗುತ್ತಾನೆ]

ಮುಂದಾ— ಇವರು, ಇವರೂ ಹೇಗೇನೂ ಸಂಶಯ ಇಲ್ಲ [illegible] ಸಹಜವಾಗಿಯೂ ನೋಡಲು [illegible] ಬಂಗಾರದ [illegible], [illegible] ಬಣ್ಣದ [illegible] ಗೊಂಚಲು, —

ಲೇಖಕ — ನಮ್ಮ [illegible] ಗೌಡರು! [[illegible]].

ಮುಂದಾ— ಹೂ! ಬಂದರಂತೆ [illegible] [[illegible]] ಬನ್ನಿ ಗೌಡರ!

[ಗೌಡರ ಪ್ರವೇಶ]

ಗೌಡರು [illegible] ಕಾರ್ಡ್ [illegible], ಮುಂದಾ?

ಮುಂದಾ— ಚೆಂದದ! ಆದರ, ಗೌಡರೆ, ಇಷ್ಟು ಪರಿಚಯವಿದ್ದರೂ ನೀವು ನಮ್ಮ ಮನೀ ಒಳಗ ಕಾರ್ಡ ಕಳಿಸಬೇಕೇನು ?

ಗೌಡರು— ಕಾರ್ಡ ಕೊಟ್ಟರ ಬಾಗಿಲದೊಳಗಿನ ಜವಾನಗನನ್ನುದ, ಇವರು ಯಾರೋ ದೊಡ್ಡವರಿದ್ದಾರಂತ ಇಲ್ಲದಿದ್ದರ ಅಂವ ನಮಗ ಒಳಗ ಬಿಡೋದೇ ಇಲ್ಲ! ಎಲ್ಲಿ ಹೋದರೂ ನಮಗೆ ಇದೇ ಅನುಭವ ಬರಲಕ್ಕ ಹತ್ತಿತು 'ಒಳಗ ಬಿಡೋ ಮಹಾರಾಯ' ಅಂದರ ಉರ್ದೂದೊಳಗ ಏನೋ ಮಾತಾಡಿ ಬಿಡ್ತಾನ! ಅವನ ಉರ್ದು ನಮಗ ಶೂನ್ಯ, ನಮ್ಮ ಕನ್ನಡ ಅಂವಗ ವರ್ಜ್ಯ! ಅದಕ್ಕ ನಾ ಹೇಳೋದು ಕರ್ನಾಟಕ ಸ್ವತಂತ್ರ ಪ್ರಾಂತ ಆಗ ಬೇಕೂ ಅಂತ

ಲೇಖಕ— ಇಷ್ಟು ದೊಡ್ಡ ಕಾರಣ ಇದ್ದಬಳಿಕ ಅದಕ್ಷನಷ್ಟು ತಡ, ಗೌಡರೆ ?

ಮುಂದಾ— ಅದಿರಲಿ, ಗೌಡರೆ, ನೀವು ಊರಿಗೆ ಯಾವಾಗ ಬಂದಿರಿ ?

ಗೌಡರು— ಬಂದು ಎರಡು ದಿವಸಾತು

ಮುಂದಾ— ಆದರ ಇಂದಿನ ತನಕ ನಿಮಗ ನಮ್ಮ ನೆನಪಾಗಲಿಲ್ಲೇನು?

ಗೌಡರು— ನೆನಪಾಗಲೇನು ? ಈ ಊರಿಗೆ ಬಂದಮ್ಯಾಲೆ ಮೊದಲು ನೆನಪಾಗೋದು ನಿಂದೇ ನೋಡು, ಮುಂದಾ! ಆದರ ಇಲ್ಲಿ ಬರಲಿಕ್ಕೆ ನನಗ ಸವುಡೇ ಆಗಲಿಲ್ಲ, ನೋಡು ಹೊಲಮನೆಗಳ ವ್ಯವಹಾರ ಒಂದು ಬೆನ್ನಿಗೆ ಬಿದ್ದಿದೆಯಲ್ಲ? ಈಗಂತೂ ಆ 'ಟೆಂಡನ್ಸೀ' ಕಾಯದೆ ಬಂದಾಗಿನಿಂದ ನಮ್ಮ ಪ್ರಾಣ ಹೋಗುವ ಪ್ರಸಂಗ ಬಂದಿದೆ

ಮುಂದಾ— 'ಟೆಂಡನ್ಸೀ' ಕಾಯದೆ ? ಅಂದರೇನು ಗೌಡರೆ ?

ಗೌಡರು— ಅಂದರ ನಮ್ಮ ಇಂಗ್ಲೀಶು ತಪ್ಪಿಸ್ತ್ಯಾದಲ್ಲೋ ? ಹೋಗಲಿ, ಈ ನಾಲಗ್ಗೆ ಇಂಗ್ಲೀಶೇ ಹಾಯೂದುಲ್ಲ ಆ ಕಾಯದೇತ್ಕ ಸಂಸಾರ, ಮುಂದಾ ? ರೈತರು, ಮಾಲಕರು ಇವರ ನಡುವ ವ್ಯಾಜ್ಯಾ ಹುಟ್ಟಿಸಿದ ಆ ಕಾಯದೆ—ನಮ್ಮ ವಕೀಲರು ದಿವಸಕ್ಕ ಸಾವಿರ ಸಲ ಅದರ ಜಪ ಮಾಡ ತಿರತಾರ!

ಲೇಖಕ— ಮುಂದಾ, ಗೌಡರು ಹೇಳೋದು, 'ಟೆನನ್ಸಿ' ಕಾಯದೆ ಅಂತ ಕಾಣಸ್ತದ

ಮುಂದಾ— ಓಹೋ, 'ಟೆನನ್ಸಿ'! ಅದಕ್ಕೆ ಟೆನನ್ಸಿ ಕಾಯದೆ ಅಂತಾರ ಗೌಡರೆ, ಟೆಂಡನ್ಸಿ ಅಲ್ಲ!

ಗೌಡರು— ಏನಂತಾರೋ ಏನೋ, ಆದರ ನನ್ನ ಪ್ರಾಣ ಮಾತ್ರ ಒಂದಾರ!

ಮುಂದಾ— ನಿಮ್ಮ ಪ್ರಾಣ ಅಂದರ ಹಣ, ಅಲ್ಲೇನ ಗೌಡರ?

ಗೌಡರು— ಹಣ ಅಂದರ ನನ್ನದೊಂದೇ ಪ್ರಾಣ ಯಾಕ? ಪ್ರಪಂಚದ ಪಂಚಪ್ರಾಣ ಆಗೇದಲ್ಲ, ಹಣ!

ಲೇಖಕ— ಗೌಡರು ಹೇಳೋದು, ಅಕ್ಷರಶಃ ಖರೆ ನೋಡು ಮುಂದಾ! ನೀನು ಭೂಗೋಲ ಕಲಿಯುವಾಗ ಓದಿರಬಹುದು— ಈ ಪೃಥ್ವಿ ಸೂರ್ಯನ ಸುತ್ತಲೂ ತಿರುಗುತ್ತಿದೆಯೆಂದು. ಆದರ ಅದು ಸುಳ್ಳು ಎಂದು ನಾವು ನಾನಿನ್ನೇ ಹೇಳಾಗಿದ. ಈ ಜಗತ್ತು ನಿಜವಾಗಿಯೂ ತಿರುಗುತ್ತಿರುವುದು ಆ ನಾಣ್ಯ ಘಣಘಣಿಸುವ ಬೆಳ್ಳಿ ರೂಪಾಯಿಯ ಸುತ್ತಲೂ. ಅದೇ ಅದರ ಸೂರ್ಯಗೋಲ—ಅದರ ಪ್ರಾಣ ಗೋಲ!

ಮುಂದಾ— ಆಹಾ! ಎಷ್ಟು ಸುಂದರವಾದ ಕಲ್ಪನೆ!

ಲೇಖಕ— ಸುಂದರವಾಗಿದ್ದರೂ ಸತ್ಯವಾಗಿದೆ, ಮುಂದಾ!

ಪ್ರಾಧ್ಯಾಪಕ— ಅದು ಸತ್ಯವೆಂದು ತಿಳಿದವರೇ ನಮ್ಮ ಸಂಸ್ಕೃತಿಯನ್ನು ಹಾಳು ಮಾಡಿದರು.

ಲೇಖಕ— ಈ ಮತವನ್ನು ಕೇಳಿ ಕೇಳಿ ಕಿವಿಗೆ ಕಸಬಿದ್ದಿದೆ, ಪ್ರೊಫೆಸರ ಸಾಹೇಬ. ಹಣದಿಂದ ಸಂಸ್ಕೃತಿ ಹಾಳಾಗಲಿಲ್ಲ, ಮಾನವ ಸಂಸ್ಕೃತಿಯು ಬೆಳೆದದ್ದೇ ಹಣದಿಂದ. ಹಣವಿಲ್ಲದವರು ತಾಜಮಹಲನ್ನು ಕಟ್ಟಬಹುದಾಗಿತ್ತೇ? ಹಣವೆಂದರ ಕವಿಯ ಕನಸನ್ನು ನನಸಾಗಿಸುವ ದಿವ್ಯ ಮಂತ್ರ!

ಮುಂದಾ— ಹಿಯರ್, ಹಿಯರ್!

ಗೌಡರು— ಹಣಾ ಇದ್ದರ ಬೇಕಾದ್ದು ಮಾಡಬಹುದು, ಮುಂದಾ!

ಪ್ರಾಧ್ಯಾಪಕ— ಆದರ ಮನುಷ್ಯನ ಸುಖಕ್ಕೆ ಬೇಕಾಗುವ ಎಲ್ಲಾ ವಸ್ತುಗಳೂ ಅಂಗಡಿಯಲ್ಲಿ ಮಾರಲಿಕ್ಕೆ ಇಟ್ಟಿರೋದಿಲ್ಲ.

ಲೇಖಕ— ಅಂಗಡಿಯಲ್ಲಿ ಇಟ್ಟಿರದಿದ್ದರೂ ಎಲ್ಲ ಮಾರಾಟಕ್ಕೆ ಸಿಗುವ ವಸ್ತುಗಳೇ!

ಪ್ರಾಧ್ಯಾಪಕ-- ಅದು ಹೇಗೆ?

ಲೇಖಕ— ನಿಮಗೆ ಇಂದಿನ ವ್ಯವಹಾರೀ ಜಗತ್ತಿನ ಪರಿಚಯವಿಲ್ಲ, ಪ್ರೊಫೆಸರರೇ! ಹಣದಿಂದ ನಾವು ಗುಣವನ್ನು ಪಡೆಯಬಹುದು, ಸುಳ್ಳಿಗೆ ಸತ್ಯದ ಕವಚವನ್ನೇರಿಸಬಹುದು. ಕಾಂಚಾಣದ ಕುಣಿತಕ್ಕೆ ಸೌಂದರ್ಯ ಕಾಲಿಗೆ ಬಂದು ನಮಸ್ಕಾರ ಹಾಕಬಹುದು. ಹಣದಿಂದ ಮಾನವನಿಗೆ ಸಿಗಲಾರದ ವಸ್ತು ಯಾವುದು?

ಮಂದಾ-- ಅದರಿಂದ ಸ್ವರ್ಗನೂ ಸಿಗಬಹುದು.

ಪ್ರಾಧ್ಯಾಪಕ— ನಿಮಗೆ ಗೊತ್ತಿಲ್ಲ ಮಂದಾ, ಅವರು ಸ್ವರ್ಗದಲ್ಲಿ ತಮ್ಮ ಸೀಟು ರಿಝರ್ವ ಮಾಡಿಸಿದ್ದಾರೆ!

ಲೇಖಕ— ಸ್ವರ್ಗದ ಬಾಗಿಲಿಗೆ ಬಂಗಾರದ ಬೀಗಮುದ್ರೆ, ಮಂದಾ!

ಪ್ರಾಧ್ಯಾಪಕ— ಆದರೆ ಕ್ರಿಸ್ತ ಹೇಳಿದ್ದು ನಿಮಗೆ ನೆನಪಿದಯೇನು? ಸೂಜಿಯ ಮೂಗಿನೊಳಗಿಂದ ಒಂಟ ಹಾಯಬಹುದಂತೆ! ಆದರ ಸ್ವರ್ಗದ ಬಾಗಿಲೊಳಗಿಂದ ಸಿರಿವಂತ ಹಾಯಲಾರ!

ಗೌಡರು— ಅವಿನಾಶರಾಯರು ಎಲ್ಲಿ ಕಾಣಸೂದಿಲ್ಲ, ಮನಯೊಳ ಗಿಲ್ಲೇನು?

ಮಂದಾ— ಮನೆಯೊಳಗೇ ಇದ್ದಾರ. ಒಳಗಿನ ಕೋಣೆಯಲ್ಲಿ ರಾಜಕಾರಣದ ಭೀಕರ ಚರ್ಚೆ ನಡೆದಿದೆ. ಆ ಚರ್ಚೆಗೆ ಎರಡನೇ ಮಹಾಯುದ್ಧದ ಸ್ವರೂಪ ಬಂದಕೂಡಲೆ ನಾವು ಒಬ್ಬೊಬ್ಬರಾಗಿ ಅಲ್ಲಿಂದ ಎದ್ದುಬಂದೆವು.

ಗೌಡರು— ಆದರ ಇಲ್ಲಿಯೂ ಅದೇ ಸ್ವರೂಪ ಬರುವಹಾಂಗ ಕಾಣಸ್ತದ.

ಮಂದಾ— ಅಂದರ ನಾವು ಇಲ್ಲಿಂದಲೂ ಕಾಲು ಕಿತ್ತಬೇಕಂತೀರೇನು?

ಗೌಡರು— ಮಂದಾ, ರಾಜಕಾರಣಕ್ಕ ಹೀಂಗ ಹೆದರಿದರ ಹ್ಯಾಂಗ?

ಪ್ರಾಧ್ಯಾಪಕ— ಈಗಿನ ಸಾಲೆಯ ಹುಡುಗರೂ, ವಿದ್ಯಾರ್ಥಿನಿಯರೂ, ರಾಜಕಾರಣದೊಳಗ ನುಗ್ಗಿ ಹೋಗ್ಯಾರ!

ಗೌಡರು— ಎಲ್ಲಾರೂ, ಎಲ್ಲಿ ಹೋದರೂ, 'ರಾಜಕಾರಣ' 'ರಾಜಕಾರಣ' ಅಂತ ವಾದ ಹಾಕತಿರತಾರ. ಅದಕ್ಕಾಗಿ ನೋಡು, ಮಂದಾ, ನಾನೂ ರಾಜಕಾರಣದ ಅಭ್ಯಾಸ ಮಾಡಲಿಕ್ಕೆ ಹತ್ತೀನಿ. ನಮ್ಮ ಸರಕಾರ

ನನಗ [illegible] 'ಹಿಂಯಿಸ್ಸು' [illegible] ಅವರ ಅರ್ಥ ಒಡದ [illegible] ಈಗ ನನಗೂ ರಾಜಕಾರಣ [illegible] ಮೋಜ [illegible] ಕಾಣ್ತದೆ

ಲೇಖಕ — ಮೋಜ [illegible] ಹಸ್ತೇವು ' ಗೌಡರೆ, ರಾಜಕಾರಣ ಅಂದರೆ ಮೋಜು [illegible]!

ಪ್ರಾಧ್ಯಾಪಕ — [illegible] ಜಾನ್ಸನ್ ಅವನ್ಹೇ ಹೇಳಿದ "Politics is the last resort of scoundrels."

ಲೇಖಕ—ಭಾರತ [illegible] ನೋಡಿದವರಂತೂ ಇದು ಸತ್ಯ [illegible] ಸಂಪಾದಿತ [illegible] ಕೂಡುವ [illegible] ಸಂಸ್ಥೆಯ [illegible]!

ಮಂದಾ [illegible]?

ಲೇಖಕ [illegible]

ಗೌಡರು — [illegible]

ಪ್ರಾಧ್ಯಾಪಕ [illegible] ಪಕ್ಷ [illegible]!

ಗೌಡರು — [illegible] ಯಾವ [illegible]

ಮಂದಾ ನನಗಂತೂ [illegible] ಅಂತ [illegible]

ಲೇಖಕ [illegible]!

ಮಂದಾ [illegible]

ಲೇಖಕ [illegible] ಗೌಡರೇ, [illegible].

ಗೌಡರು— ಏನು ? ಅವಿನಾಶರು ಹೆಚ್ಚೋ, ಸುಧಾಬಾಯಿ ಹೆಚ್ಚೋ ?- ಉಂಹುಂ—ನಾನಂತೂ ಯಾರು ಹೆಚ್ಚು ಎಂಬುದನ್ನು ಹೇಳಲಾರೆ !

ಪ್ರಾಧ್ಯಾಪಕ- - ಇಬ್ಬರಲ್ಲಿ ಯಾರು ಹೆಚ್ಚು, ಯಾರು ಕಡಿಮೆಯೆಂಬು ದನ್ನು ನಿಶ್ಚಯಿಸುವುದೇ ಸಾಧ್ಯವಿಲ್ಲ. ಅವರಿಬ್ಬರ ಜೀವನವೆಂಬುದು ಸದ್ಗುಣ ಗಳ ಸವಿಯಾದ ಸಂಗಮವಾಗಿದೆ

ಲೇಖಕ— ಅಹುದು, ಅವರು ಆದರ್ಶ ದಂಪತಿಗಳೆಂಬುದರಲ್ಲಿ ಯಾವ ಸಂಶಯವೂ ಇಲ್ಲ ಅವರ ಉದಾತ್ತ ಜೀವನವು ನಮ್ಮಂತಹ ಸಾಮಾನ್ಯರಿಗೆ ನಿಲುಕದ ಬಾನು !

ಪ್ರಾಧ್ಯಾಪಕ— ಹೌದು, ನಾನು ನಿಮ್ಮ ಹಾಗೆ ಲೇಖಕನಾಗಿದ್ದರೆ, ಆದರ್ಶ ಜೀವನವನ್ನು ಚಿತ್ರಿಸುವ ಒಂದು ಕಾದಂಬರಿಯನ್ನೇ ಬರೆಯುತ್ತಿದ್ದೆ ಅವಿನಾಶರೇ ಆ ಕಾದಂಬರಿಯ ಧೀರೋದಾತ್ತ ನಾಯಕರಾಗುತ್ತಿದ್ದರು

[ಸುಧಾಳ ಪ್ರವೇಶ]

ಸುಧಾ—ಅವಿನಾಶರು ನಾಯಕರಾದ ಕಾದಂಬರಿಯಲ್ಲಿ ನನಗೆ ಯಾವ ಸ್ಥಾನವೂ ಇಲ್ಲವೇನು ?

ಪ್ರಾಧ್ಯಾಪಕ—ಇಲ್ಲವೇಕೆ? ಅವಿನಾಶರಿಗಿಂತ ನಿಮಗೇ ಹೆಚ್ಚಿನ ಸ್ಥಾನ ಸಿಗಬೇಕೆಂದು ಗೌಡರು ಹೇಳುತ್ತಿದ್ದರು

ಸುಧಾ—ಓಹೋ, ನಮಸ್ಕಾರ ಗೌಡರೇ, ನೀವು ಯಾವಾಗ ಬಂದಿರಿ ?

ಗೌಡರು— ನಾನು ಇದೇ ಬಂದೆ, ನಿಮ್ಮ ದಾರಿಯನ್ನೇ ಕಾಯುತ್ತಿದ್ದೆ ನಾನು ನೀವು ವೇಳೆಗೆ ಸರಿಯಾಗಿ ಬಂದಿರಿ, ಸುಧಾಬಾಯಿ, ಇನ್ನು ಇವರಿಗೆ ಎರಡು ಕೈ ತೋರಿಸಲಿಕ್ಕೆ ಯಾವ ಅಡ್ಡಿಯೂ ಇಲ್ಲ

ಸುಧಾ— ಅಂದರೇನು ? ಇಲ್ಲಿ ಮುಷ್ಟಿಯುದ್ಧ ನಡೆದಿದೆಯೇನು ?

ಗೌಡರು— ಹಾಗೇನೂ ಇಲ್ಲ ಆದರೆ ಇವರು ರಾಜಕಾರಣದ ಮೇಲಿನ ನುಳ್ಳು ಆಪಾದನೆಗಳನ್ನು ಹೊರಿಸುತ್ತಿದ್ದಾರೆ

ಸುಧಾ— ಎಂತಹ ಆಪಾದನೆ, ಗೌಡರೆ ?

ಗೌಡರು— ಇವರೆಂತಾರೆ, ರಾಜಕಾರಣ ಎಂದ್ರೆ ಕತ್ತಲೆ ಕಾರಸ್ಥಾನ ಅಂತ

ಮಂದಾ— ಎಷ್ಟು ಸುಂದರನಾಗಿದೆಯಲ್ಲನೆ ವಿಚಾರ ?

ಸುಧಾ— ಹೌದು ಮಂದಾ, ಈಗ ಎಲ್ಲರೂ ಸುಳ್ಳು ಅಡಗಿಸಲಿಕ್ಕೆ ಸೌಂದರ್ಯದ ಉಪಯೋಗ ಮಾಡುವರು !

ಮಂದಾ — ಅಂದ್ರೆ, ಆ ಮಾತು ಸುಳ್ಳೇನು ?

ಸುಧಾ— ಸುಳ್ಳಂದರೆ ನಾನಿದ ನಲ ಸುಳ್ಳು ! ನನಗಂತೂ ರಾಜಕಾರಣ ವೆಂದರೆ ದೇವರ ದೇವಾಲಯವೆಂದೆನಿಸುತ್ತದೆ ದೇವರ ಗುಡಿಯಲ್ಲಿ ಭಕ್ತರು ಸೇರುವಂತೆ ಕಳ್ಳರೂ ಸೇರುತ್ತಾರೆ ಅಷ್ಟಕ್ಕೆ ದೇವರ ಗುಡಿಯನ್ನು ಕಳ್ಳರ ತವರೆಂದು ಕರೆಯಬಹುದೆ ? ಕಳ್ಳರಾಕರಿಗೆ ಗುಡಿಯಲ್ಲಿ ಪ್ರವೇಶವಿದೆಯೆಂದು ಗುಡಿಯ ಪಾವಿತ್ರ್ಯಕ್ಕೆ ಭಂಗ ಬರಬಹುದೆ ? ನನಗನಿಸುವುದು ಹೀಗೆ ರಾಜಕಾರ ಣವು ಸಮಾಜ ಸುಧಾರಣೆಯ ಒಂದು ಉತ್ತಮವಾದ ಸಾಧನವಾಗಿದೆ ರಾಜ ಕಾರಣವೊಂದು ಬಲಶಾಲಿಯಾದ ನಂದ ! ಅದರಿಂದ ದುಷ್ಟರ ದಾನವನನ್ನೂ, ಶಿಷ್ಟರ ಪರಿಪಾಲನೆಯನ್ನೂ ಮಾಡಲಿಕ್ಕೆ ಬರುತ್ತದೆ ಅದನ್ನು ನಾವು ಹೀಯಾ ಳಿಸಬಹುದೆ ?

ಲೇಖಕ— ನೀವು ವರ್ಣಿಸುತ್ತಿರುವುದು ಆದರ್ಶ ರಾಜಕಾರಣ, ಸುಧಾ ಬಾಯಿ ! ನಿಜವಾದ ಪರಿಸ್ಥಿತಿ ಮಾತ್ರ ಅದರ ವಿರುದ್ಧವಾಗಿರುತ್ತದೆ ನಿಮ್ಮ ಆದರ್ಶ ರಾಜಕಾರಣವನ್ನು ನಾವು ಕಾಣುವುದು ಕವಿಯ ಕಲ್ಪನೆಯಲ್ಲಿ, ಮುಂದಾಳುಗಳ ಮಾತಿನಲ್ಲಿ ! ಆದರೆ ಆದರ್ಶವೆಂಬುದು ನಮ್ಮ ಕೈಗೆ ಸಿಲುಕದ ಬಾನು !

ಸುಧಾ ಈ ತರಹದ ಇಂದಿನ ನಿರಾಶಾವಾದವೇ ನಮ್ಮ ಹಾನಿಗೆ ಕಾರಣವಾಗಿದೆ ರಾಜಕೀಯ ಆದರ್ಶ ಕೈಗೆ ಸಿಲುಕದ ಬಾನಲ್ಲ, ಅದು ನಿಮ್ಮ ಸೇವೆ ಗಳ ಕೈಗೆ ಸಿಕ್ಕುವ ಹಣ್ಣು ಬಾನು ! ಇಂದು ಅನೇಕ ರಸ್ತೆಗಳ ರಾಜಕಾರಣ ನೋಡುವ ಮಾರ್ಗವಾಗಿರಬಹುದು ಆದರೆ ಭಾರತದ ರಾಜಕಾರಣಕ್ಕೆ ನೀತಿಯ ನೆಲವಿದೆ, ಅದಕ್ಕೆ ಧರ್ಮಸ್ಥಂತಲೂ ಹೆಚ್ಚಿನ ಬಲವಿದೆ. ಗಾಂಧೀಜಿಯವರ ನಾಯಕತ್ವದಲ್ಲಿ ಈ ವಿಷಯವಲ್ಲ ನಂಬಿಯಾದರು ರಸು.

ಪ್ರಾಧ್ಯಾಪಕ – ನೀವು ಹೇಳುವುದು ನಿಜ, ಸುಧಾಬಾಯಿ. ಭಾರ ತೀಯ ರಾಜಕಾರಣದ ಅಧ್ಯಯನ ಮಾಡುವವರಿಗೆ ಇದು ಸ್ಪಷ್ಟವಾಗಿ ಕಾಣು ತ್ತದೆ. ಭಾರತದ ಮಹಾಪುರುಷರೆಲ್ಲ ಜಗತ್ತಿನ ಕಲ್ಯಾಣಕ್ಕಾಗಿಯೇ ರಾಜ

ಕಾರಣದ ರಕ್ಷಾಯುಧವನ್ನು ಎತ್ತಿಕೊಂಡರು ಮಹಾತ್ಮಾ ಗಾಂಧೀ, ಗೌತಮಬುದ್ಧ, ಬಸವೇಶ್ವರ, ಶ್ರೀಕೃಷ್ಣ —

ಮಂದಾ - ಶ್ರೀಕೃಷ್ಣ? ಶ್ರೀಕೃಷ್ಣನ ಕೃಷ್ಣಕಾರಸ್ಥಾನದಿಂದ ಸತ್ಯದ ಇತಿಶ್ರೀ ಆಯಿತೆಂದು ಹೇಳಿರಿ, ಬೇಕಾದರ!

ಪ್ರಾಧ್ಯಾಪಕ— ಆದರೆ, ಮಂದಾ, ಕೃಷ್ಣನ ಕಾರಸ್ಥಾನ ಸತ್ಯವನ್ನು ರಕ್ಷಿಸಿತು, ಅಸತ್ಯವನ್ನು ಜಯಿಸಿತು! ಅವನ ಗೀತೆ ಗಾಂಧೀಜಿಯವರ ಜೀವನದ ಸೂತ್ರವಾಯಿತು!

ಸುಧಾ— ಆದರೆ ಅದೇ ರಾಜಕಾರಣವನ್ನು ದುಷ್ಟರು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ ಇದೀಗ ಅವಿನಾಶರು ಹೇಳುತ್ತಿದ್ದರು, "ನವಭಾರತ ಕಾರ್ಪೋರೇಶನ" ಎಂಬ ಹೆಸರಿನ ಕಂಪನಿ ತೆಗೆದು ಕೆಲವು ಧೂರ್ತರು ಜನರನ್ನು ಮೋಸಗೊಳಿಸುವ ಹೊಂಚುಹಾಕುತ್ತಿದ್ದಾರೆಂದು

ಗೌಡರು—[ಗಾಬರಿಯಾಗಿ] ಏನಂದ್ರಿ, ಸುಧಾಬಾಯಿ? ನೀವು ಹೇಳು ವುದು ನಿಜವೆ? ಆ ಕಂಪನಿಯ ನೂರು ಶೇರ್ಸ ನಾನು ಕೊಂಡುಕೊಂಡಿದ್ದೇನ

ಸುಧಾ— ನೀವು ಮೋಸಹೋದಿರಿ, ಗೌಡರ?

ಗೌಡರು-- ಶಿವಶಿವಾ! ನಾ ಇನ್ನೇನು ಮಾಡಲ್ರಿ?

ಸುಧಾ— ಅದರ ಅಂತಸ್ಥ ವಿಷಯವೆಲ್ಲ ಅವಿನಾಶರಿಗೆ ಗೊತ್ತಾಗಿದೆ. ಬಡವರನ್ನು ಮೋಸಗೊಳಿಸಿ, ಶ್ರೀಮಂತರಿಗೆ ಸುಳ್ಳು ಆಮಿಷ ತೋರಿಸಿ, ಸ್ವಾರ್ಥ ಸಾಧಿಸಿಕೊಳ್ಳಲು ಹೊರಟಿರುವ ಕಳ್ಳರ ಕಂಪನಿಯಿಂದು ಅವರು ಅದನ್ನು ವರ್ಣಿಸುತ್ತಿದ್ದರು

ಗೌಡರು—ಅವಿನಾಶರೇ ಹೇಳುತ್ತಿದ್ದರೇನು? ಆ ವಿಷಯವಾಗಿ ಅವರು ಇನ್ನೇನು ಮಾಡುವವರಿದ್ದಾರೆ?

ಸುಧಾ— ಶಾಸನ ಸಭೆಯಲ್ಲಿ ಅದರ ಪ್ರಸ್ತುತನವನ್ನು ಹೊರಗೆದು ದೇಶಕ್ಕೆ ಎಚ್ಚರಿಕೆ ಕೊಡುವವರಿದ್ದಾರೆ

ಗೌಡರು— ಬಡವರನ್ನು ಕಾಯುವವರೆಂದರ ಅವರೊಬ್ಬರೇ! ಮತ್ತಾರಾವರೂ ಆಗಿದ್ದರೆ ಲಕ್ಷಾವಧಿ ರೂಪಾಯಿ ತಿಂದು ಸುಮ್ಮನಿರುತ್ತಿದ್ದರು

ಲೇಖಿಕೆ— ಅವಿನಾಶರಂಥವರಿಂದಲೇ ರಾಜಕಾರಣ ಇನ್ನೂ ಸಮಾಜ ಕಲ್ಯಾಣದ ಸಾಧನವಾಗಿ ಉಳಿದಿದೆ

ಸುಧಾ — ತನ್ನ ಮನರಂಜನೆಯನ್ನು ಬಾರ್ ನಾಟಕಾದಿಗಳು ಅವರೂ ಅವಿನಾಶರು ತಮ್ಮ ಐಯ್ ಸಿ. ಎಸ್ ದ ನೌಕರಿಯನ್ನು ಬಿಡುವ ಸಾಹಸ ಮಾಡದ ಪರಿಸ್ಥಿತಿಯೇ ಸಮಾಧಾನ ಕಂಡು ಇರುತ್ತಿದ್ದರ —

ಮಂದಾ— ನೀನು ಚಿಣ್ಣನೊಡನೆ ಹುಚ್ಚಿಯಾಗುತ್ತಿರುವೆ, ಹೌದಲ್ಲವೆ?

ಸುಧಾ — ಹಾಗೆಂದರೂ ತಪ್ಪಿಯಿಲ್ಲ ಅವರ ಧೈರ್ಯ ನನ್ನ, ನೀವಾ ಬಲ್ಲಿ — ಇದೇ ನನ್ನ ಮನಸ್ಸನ್ನು ನಿಶ್ಚಯಿಸಿಂಬುದರಲ್ಲಿ ಯಾವ ಸಂದೇಹವೂ ಇಲ್ಲ ನಮ್ಮ ದಾಂಪತ್ಯಜೀವನವನ್ನು ಸತ್ಯ ಸೇವೆಗಳ ಆದರ್ಶದ ಮೇಲೆ ಕಟ್ಟಬೇಕೆಂಬುದೇ ನನ್ನ ಹವ್ಯಾಸವಾಗಿತ್ತು ಇಂತಹದೇ ಅವರ ನಾಜೂಕಯ್ಯ ನನ್ನ ನವವಧು ಅವರು ಐಯ್ ಸಿ ಎಸ್ ದ ಸಣ್ಣ ಸಂಬಳವನ್ನು ಮುಂದು ಹೊರಗೆ ಬರದೇ ಇದ್ದರೆ, ದೇಶಸೇವೆಯನ್ನು ಮಾಡುವ ಈ ಸಂಧಿ ಅವರಿಗೆ ಲಭಿಸುತ್ತಿರಲಿಲ್ಲ ಸ್ವಾಮಿ ನಾಯಕರಾಗಿ ಜನತೆಯ ಸಾಮು ಪಲ್ಲ ನಮಿರುವನಾಗುವ ಈ ಸೌಭಾಗ್ಯ ಅವರಿಗೆ ಲಭಿಸುತ್ತಿರಲಿ

ಮಂದಾ — ಕಾಕಾಸಾಹೇಬ ಬಂದ್ರು ನಾವೆಲ್ಲರೂ ನಿನ್ನ ದಾರಿಯನ್ನೇ ಕಾಯುತ್ತಿದ್ದೇವೆ

[ರಾಮರಾಯರ ಪ್ರವೇಶ]

ರಾಮು — ನನಗೆ ಬರಲಿಕ್ಕೆ ಸ್ವಲ್ಪ ತಡವಾಯಿತು [ಸುತ್ತಲೂ ನೋಡಿ] ಅಂ, ಶೇಖರ — ನನ್ನ ನಿಮ್ಮಿಬ್ಬರಿಗೆ ನಿರುದ್ಯೋಗಿ ಚಿಂತೆಯವರು ಎಲ್ಲ ಕಾಣಿಸುವದಿಲ್ಲ?

ಮಂದಾ - ಯಾಕೆ, ಕಾಕಾಸಾಹೇಬ, ನೀವು ಯಾವಾಗಲೂ ... ರನ್ನು ದಣಿಕೆ ಬಯಸುತ್ತೀರಿ? ... ಅಂತಹ ತಪ್ಪು ...

ರಾಮು - ತಪ್ಪು ... ಮಾತಲ್ಲ, ನನ್ನ ತಪ್ಪು ... ಅವನಿಗೆ ... ಕೊಟ್ಟೆ.

ಮಂದಾ - ... ಹೋಗಿ ... ಬಂದ ... ಇಂಥ ಮಾತ ಗಳನ್ನಾಡುತ್ತೀರಿ?

ರಾಮು ... ಹೋಗಲಿ, ... ಹೋಗಲಿ, ... ಬರಲಾಗುವದಿಲ್ಲ ...

ದಿವಸ ಆದವ್ರು, ಅವನ ಭೆಟ್ಟಿಯಾಗಬೇಕೊಂದ್ರ ಆಗಲೊಲ್ಲದು ಎಲ್ಲಿರತಾನೋ, ಏನ ಮಾಡತಾನೊ ಯಾರಿಗೆ ಗೊತ್ತು

ಮಂದಾ— ಮಹತ್ವದ ಕೆಲಸಕ್ಕ ಹೊರಗ ಹೋಗತಿರಬೇಕು

ರಾಮು— ಅವನ ಬಾಜೂ ಹಿಡಿದು ಮಾತಾಡುವ ವಕೀಲ ಅಂದ್ರ, ನೀನು ಮೊದಲಿನವಳು ನೋಡು

ಮಂದಾ— ಮನೀ ಹಿಡದ ಕೂಡಲಿಕ್ಕೆ ಅವರೇನ ಹೆಂಗಸರೆ? ನನಗ ಕೇಳಿದರ ಹೆಂಗಸು ಮನೀಹೊರಗ ಹೋಗಬಾರದು, ಗಂಡಸು ಮನೀ ಹಿಡದು ಕೂಡಬಾರದು

ರಾಮು— ಮಂದಾ, ನೀನು ಕಾಲೇಜಿಗೆ ಹೋಗಿ ಕಲತದ್ದು ವ್ಯರ್ಥ ನೋಡು. ನೀ ಹೇಳೋ ಮಾತು ನಮ್ಮ ಅಜ್ಜೀ ಕಾಲಕ್ಕ ಯೋಗ್ಯ ಅನಿಸ ತಿತ್ತು ನಿಮ್ಮ ಪ್ರೊಫೆಸರ ಸಾಹೇಬರಿಗೆ ಕೇಳು ಬೇಕಾದರ, ಆಧುನಿಕ ಸ್ತ್ರೀಯ ಆದರ್ಶ ಏನು ಅಂತ. ಮನೆಯ ಹೊರಗೆ ಬಿದ್ದವಳೆ ಆದರ್ಶ ಸ್ತ್ರೀಯಂದು ಅವರು ಹೇಳಬಹುದು

ಪ್ರಾಧ್ಯಾಪಕ— ರಾಮುರಾವ, ನೀವು ವರ್ಣಿಸುವ ಆದರ್ಶ ಸ್ತ್ರೀಯರನ್ನು ನಾವು ಬರಿ ಕಾದಂಬರಿಗಳಲ್ಲಿ ಕಾಣಬಹುದು. ಜೀವನ ಮತ್ತು ಕಲೆ ಇವು ಗಳನ್ನು ಜೋಡಿಸುವ ಸೇತುವೆಯನ್ನು ನಾವಿನ್ನೂ ಕಟ್ಟಬೇಕಾಗಿದೆ

ರಾಮು— ನೀವು ಹೇಳುವುದು ನಿಜವಾಗಿರಬಹುದು. ಆದರೆ ನಿನ್ನೆ ಕಲೆ ಯಾಗಿ ರೂಪಗೊಂಡಿದ್ದು ಇಂದು ಜೀವನದಲ್ಲಿ ಸಾಕಾರಗೊಳ್ಳುತ್ತದೆ ಹತ್ತು ವರ್ಷಗಳ ಹಿಂದೆ ಪುಸ್ತಕದ ಹಾಳೆಗಳಲ್ಲಿ ಸುಳಿದಾಡುವ ಚಿತ್ರಗಳನ್ನು ನಾವಿಂದು ಬೀದಿಗಳಲ್ಲಿ ಓಡಾಡುವದನ್ನು ನೋಡುತ್ತೇವೆ

ಸುಧಾ— ಕಾಕಾಸಾಹೇಬ, ಅವಿನಾಶರು ನಿಮ್ಮ ದಾರಿ ಕಾಯುತ್ತಿದ್ದಾರೆ. ಯಾವುದೋ ಮಹತ್ವದ ವಿಷಯವಾಗಿ ನಿಮ್ಮೊಡನೆ ಮಾತಾಡಬೇಕಾಗಿದೆಯಂತೆ !

ಗೌಡರು—ವಕೀಲಸಾಹೇಬ, ನಾವೂ ನಿಮ್ಮನ್ನು ಭೆಟ್ಟಿಯಾಗಬೇಕೆಂದು ಮಾಡಿದ್ದೆವು ಆ . .ಆ . ಟೆಂಡನ್ನು ಕಾಯಿಸೇದ ಸಲುವಾಗಿ

ರಾಮು— ಗೌಡರೇ, ನೀವೀ ಟೆಂಡನ್ನು ಬಿಟ್ಟುಬಿಟ್ರನ್ನ. ನಿಮಗ ವಕೀಲರು ಯಾವ ಸಹಾಯವನ್ನೂ ಮಾಡಲಾರರು. ನಿಮ್ಮ ಭೂಮಿಯು ದಾನ

ಮಾಡಿ ವಿನೋಬಾಜಿಯವರ ಆಶೀರ್ವಾದ ಪಡೆಯಿರಿ ಇದೇ ಈ ಹೊತ್ತು ಸ್ವರ್ಗ ವನ್ನು ನಡೆಯುವ ಮಾರ್ಗ !

ಲೇಖಕ — ರಾಮರಾಯರು ಹೇಳಿದ್ದು ಖರೇ ನೋಡ್ರಿ ! ಭೂಮಿಯ ದಾನವೇ ಸ್ವರ್ಗದ ದಾರಿ !

ಗೌಡರು — ಹೌದು ನೋಡ್ರಿ, ಭೂಮಿಯ ದಾನಮಾಡಿ ಉಪವಾಸ ಬೀಳಬೇಕು. ಆಮೇಲೆ ಸ್ವರ್ಗಕ್ಕೆ ಹೋಗಲಿಕ್ಕೆ ಎಷ್ಟು ಹೊತ್ತು ? ಮಾಡ್ರಿ, ಎಷ್ಟು ಮಾಡತೀರಿ ಮಾಡ್ರಿ, ಮುದುಕನ ಚಾಷ್ಟಿ! ಮುಂದಾ, ನೀ ಆದ್ರೂ ಹೇಳಪ್ಪ, ನಾ ಏನ ಮಾಡಬೇಕು ?

ಮುಂದಾ - ಗೌಡರೇ, ರಾಜಕಾರಣದಲ್ಲಿ ಸೇರಿರಿ, ಇಹಪರಗಳ ಸುಖ ದಿಂದ ಇರಬೇಕನ್ನುವವರಿಗೆ ಒಮ್ಮೊಂದೇ ರಾಜಮಾರ್ಗ

[ನಗು. ಗೌಡರು ಬಗೆಯ ಎವರು ಬರುತ್ತ ಕೋಟಿನ ಮೇಲ ಏರಿಗಿಕೊಳ್ಳುತ್ತಾರೆ.]

[ಲಲಿತಾ ಸುಧಾ ಪ್ರವೇಶ]

ಲಲಿತಾ— ನಮಸ್ತೇ !

ಸುಧಾ-- ನಮಸ್ತೇ !

[ಮುಂದಾ ಅವರನ್ನ ಪರಿಚಯ ಮಾಡಿಕೊಡುತ್ತಾನೆ.]

ಲಲಿತಾ — ಲಲಿತಾ ದೇಸಾಯಿ ನನ್ನ ಹೆಸರು

ಗೌಡರು—[ಒಮ್ಮೆಲೆ ಎದ್ದು ಬರುತ್ತಾರೆ, ಕೈ ಕುಲುಕಲು ಕೈ ಮುಂದೆ ಮಾಡುತ್ತಾರೆ ಲಲಿತಾ ದೂರದಿಂದಲೇ ನಮಸ್ಕಾರ ಮಾಡುತ್ತಾಳೆ] ಸುಧಾ ಬಾಯಿ, ನಿಮಗ ಇವರ ಪರಿಚಯ ಇಲ್ಲೇನು ? ಲಲಿತಾ ದೇಸಾಯಿ ಇವರ ಹೆಸರನ್ನ ಕೇಳಿಲ್ಲ ? ದಿಲ್ಲಿಯಲ್ಲಿ ಇವರಷ್ಟು ಪ್ರಸಿದ್ಧ ವ್ಯಕ್ತಿ ಮತ್ತೊಬ್ಬರೂ ಇರಲಿಕ್ಕಿಲ್ಲ !

ಸುಧಾ — ನನಗೆ ಇವರ ಪರಿಚಯ ಸಾಕಷ್ಟಿದೆ ಗೌಡರೆ ! ಆದರೆ ಇವರು ಮಾತ್ರ ತಮ್ಮ ಬಾಲ್ಯದ ದಿನಗಳನ್ನು ಮರೆತಹಾಗೆ ಕಾಣುತ್ತದೆ.

ಲಲಿತಾ ಬಾಲ್ಯದ ದಿನಗಳು ?

ಸುಧಾ — ನಾವಿಬ್ಬರೂ ಒಂದೇ ಸಾಲೆಯಲ್ಲಿ ಕಲಿಯುತ್ತಿದ್ದೆವು; ನಿನಗೆ ನೆನಪಿಲ್ಲವೆ ?

ಲಲಿತಾ— ನಾನಂತೂ ನನ್ನ ಶಾಲೆಯ ಜೀವನವನ್ನು ಮರೆತುಬಿಟ್ಟಿದ್ದೇನೆ.

ಸುಧಾ— ನೀವು ನುಡಿತಿರುವುದು ಸ್ವಾಭಾವಿಕವಾಗಿದೆ.

ಲಲಿತಾ—ನನಗನಸ್ತದ, ನಾವು ಶಾಲೆಯಲ್ಲಿ ಏನನ್ನೂ ಕಲಿಯುವುದಿಲ್ಲ ವೆಂದು. ನಮ್ಮ ಜೀವನದಲ್ಲಿ ಉಪಯುಕ್ತವಾದ ವಿಷಯಗಳನ್ನೆಲ್ಲ ನಾವು ಶಾಲೆಯನ್ನು ಬಿಟ್ಟಬಳಿಕ ಕಲಿಯಲು ಪ್ರಾರಂಭ ಮಾಡುತ್ತೇವ ಆದರೆ, ಪ್ರೊಫೆಸರ ಸಾಹೇಬರ ವಿಚಾರ ಮಾತ್ರ ಬೇರೆಯಾಗಿರಬೇಕು.

ಪ್ರಾಧ್ಯಾಪಿಕೆ— ನನ್ನದೂ ನಿಮ್ಮ ಹಾಗೆ ಮತ[illegible] ತುಂಬುವುದು ಹೇಗೆ? ಲಲಿತಾಬಾಯಿ, ಹುಡುಗರು [illegible] ಕಲಿಯು ತ್ತಾರೋ ಇಲ್ಲವೋ ಗೊತ್ತಿಲ್ಲ; ಆದರೆ ಶಿಕ್ಷಕರು ಮಾತ್ರ [illegible] ಕಲಿಯುತ್ತಾರೆ

ಸುಧಾ— ಪ್ರೊಫೆಸರಸಾಹೇಬ, ಶಾಲೆಗೆ [illegible] ಕಲಿಯುವುಕ್ಕೆ ಬರುತ್ತಾರೆ, ಎಂಬುದರ ಮೇಲೆ ಈ ಪ್ರಶ್ನೆಯ [illegible] ಕೆಲವರು ಕಲಿಯಬೇಕೆಂದು ಮಾಡಿರುವ ವಿಷಯಗಳು [illegible] ಲಿಕ್ಕೆ ಬರುವದಿಲ್ಲ ಅದು ನಾಳೆಯ [illegible] ಹುಡುಗರ [illegible]!

ಲಲಿತಾ— ಅದಿರಲಿ ಸುಧಾದೇವಿ, ನಾನೇಕೆ [illegible] ಅವಿನಾಶರನ್ನು ಕಾಣಲು ಬಂದಿದ್ದೇನೆ ಇಂದಿನ [illegible] ಅವರ ಹೆಸರೇ ಮುಂದಾಗಿದೆ. ಹೀಗಿರೆಯೇ ಅವರ ಪರಿಚಯ [illegible] ಬೇಕೆಂಬ ಲವಲವಿಕಯಿಂದ ಬಂದಿದ್ದೇನೆ.

[ಸೇವಕ ಬಂದು ನಿಂತಿದ್ದಾನೆ]

ಸುಧಾ— ಏನೋ ಅದು ?

ಸೇವಕ— ಚಹಾ ತಯಾರಾಗೇದ !

ಸುಧಾ— ಒಳಗೆ ಹೋಗೋಣ ನಡೀರಿ ಎಲ್ಲರೂ ನಡೀರಿ ಗೌಡರ, ನಡೀರಿ ಲಲಿತಾಬಾಯಿ, ಅವಿನಾಶರು ಅಲ್ಲಿಯೇ ಬರುವವರಿದ್ದಾರೆ

[ಮಂದಾನ ಹೊರತಾಗಿ ಎಲ್ಲರೂ ಹೋಗುತ್ತಾರೆ ಶೇಖರ ನೇತಿರುತ್ತಾನೆ]

ಮಂದಾ— ಈಗಲಾದರೂ ಬಂದಿರಾ, ಮುದ್ದಣರೇ ?

ಶೇಖರ— ಯಾಕೆ, ಬರಬಾರದಾಗಿತ್ತೇನು ?

ಮಂದಾ — ಇಷ್ಟು ತಡಮಾಡಿ ಬಂದರ, ಬರುವ [illegible] ಯಾತಕ್ಕೆ ?

ಶೇಖರ— ವೇಳೆಗೆ ಸರಿಯಾಗಿ ಬಂದು ಮಾಡುವುದಾದರೂ ಏನು ?

ಮಂದಾ—ವೇಳೆಗೆ ಸರಿಯಾಗಿ ಬಂದರೆ, ಮುಂದಿಗೆ ದಾರಿ ಕಾಯಬೇಕಾ ಗುವದಿಲ್ಲ.

ಶೇಖರ— ಮುಂದಿ ಹಿಂದರೆ ಮುಂದಾಕಿನಿಷೇಧಿಯೆಂದರೇನು ?

ಮಂದಾ – ಛೇ !

ಶೇಖರ— ಮತ್ತಾರು ದಾರೀ ಕಾಯುತ್ತಿದ್ದರು ?

ಮಂದಾ- ಯಾರು ದಾರಿ ಕಾಯ್ತಾರ' ನೀವೇನ ಅಂಥಾ ದೊಡ್ಡವರು?

ಶೇಖರ— ಹಾಂಗಿದ್ದರ ನಾನು ವೇಳೆಗೆ ಸರಿಯಾಗಿ ಬರಬೇಕಾಗಿತ್ತು ಮುಂದಿ ದಾರಿ ಕಾಯುತ್ತಿದ್ದರ ತಡ ಮಾಡಬೇಕು.

ಮಂದಾ— ಅಂದರ ?

ಶೇಖರ ಯಾರಾದರೂ ನನ್ನ ಸಲುವಾಗಿ ದಾರಿಕಾಯುತ್ತ ಕೂತಿದ್ದರ ನನಗ ಆನಂದ ಆಗತದ

ಮಂದಾ ನೀನಿಷ್ಟು ದುಷ್ಟನಿರಬಹುದೆಂದು ನಾನು ತಿಳಿದಿರಲಿಲ್ಲ

ಶೇಖರ ನಾ ಬಹಳ ದುಷ್ಟ ಇದ್ದೇನಿ, ಮಂದಾ !

ಮಂದಾ— ನಿನ್ನ ದೋಷಗಳನ್ನು ನೀವು ನನಗ್ಯಾಕ ಹೇಳತೀರಿ ?

ಶೇಖರ-- ನನ್ನ ದೋಷ ಎಲ್ಲಾ ನಿನಗ ಗೊತ್ತಾಗಲಿ ಅಂತ.

ಮಂದಾ -- ನಿನ್ನ ಎಲ್ಲಾ ದೋಷಗಳನ್ನು ನನಗೆ ಹೇಳಿಬಿಟ್ಟೀರೇನು ?

ಶೇಖರ -- ಛೆ, ಇಲ್ಲ. ಅವುಗಳನ್ನು ನಿನಗೆ ತಿಳಿಸುವ ಧೈರ್ಯ ನನ ಗಿನ್ನೂ ಬಂದಿಲ್ಲ.

ಮಂದಾ - ಅಷ್ಟು ಭಯಂಕರ ಇವ ಏನು, ನಿಮ್ಮ ದೋಷಗಳು?

ಶೇಖರ— ಅಹುದು, ಬಹಳೇ ಭಯಂಕರ ! ರಾತ್ರಿ ನನಗೆ ನಿದ್ರೆ ಬರ ಲಿಲ್ಲವೆಂದರೆ ನಾನು ಅವುಗಳನ್ನು ನೆನೆಯುತ್ತೇನೆ ನನಗೆ ಒಮ್ಮೆಲೆ ನಿದ್ರೆ ಬಂದುಬಿಡತದ. ಮಂದಾ, ಒಳಗ ಚಹಾ ನಡದದ ಅಂತ ಕಾಣಸ್ತದ. ನೀ ಯಾಕೆ ಒಬ್ಬಳೇ ಇಲ್ಲಿ ಕೂತಿದ್ದೀ ?

ಮಂದಾ— ನಾ ಇಲ್ಲಿ ಒಬ್ಬಳೇ ಇದ್ದದ್ದು ನೋಡಿ ನಿಮಗ ಬಹಳ ಕೆಟ್ಟ ಅನಿಸ್ತದ ಏನು ?

ಶೇಖರ – ಹೆಂಗಸು ಒಬ್ಬಳೇ ಇದ್ದದ್ದನ್ನು ನೋಡಿ ಯಾವ ಗಂಡಸಿಗೆ ಕೆಟ್ಟ ಅನಿಸೀತು, ಮಂದಾ ?

ಮಂದಾ— ಇಪ್ಪತ್ತನೆಯ ಶತಮಾನದ ವೇಷ ಹಾಕಿಕೊಂಡು ಮಧ್ಯ ಯುಗದ ವಿಚಾರಗಳನ್ನು ಹೇಳತೀರಿ!

ಶೇಖರ— ಅದು ಖರೆ ನೋಡು ಮಂದಾ! ಸುಧಾರಣೆಯಿಂದ ಒದಲಾದದ್ದು ಬರೀ ವೇಷ. ವೇಷವನ್ನು ಬಿಟ್ಟರೆ ಇಪ್ಪತ್ತನೆಯ ಶತಮಾನದ ಮನುಷ್ಯನಿಗೂ ಪಾಷಾಣ ಯುಗದ ಮನುಷ್ಯನಿಗೂ ಯಾವ ಅಂತರವೂ ಇಲ್ಲ.

ಮಂದಾ— ಆದರೆ ಸ್ತ್ರೀಯರ ಕಡೆಗೆ ಕೆಟ್ಟ ದೃಷ್ಟಿಯಿಂದ ನೋಡುವುದು ಒಳ್ಳೆಯದೇನು?

ಶೇಖರ— ಸ್ತ್ರೀಯರ ಕಡೆಗೆ ನೋಡುವ ಪುರುಷನ ದೃಷ್ಟಿ ಒಂದೇ ಇರತದ. ಅವರನ್ನು ಒಳ್ಳೆಯ ದೃಷ್ಟಿಯಿಂದ ನೋಡುವುದಂದರ ಅವರ ಸೌಂದರ್ಯದ ಅಪಮಾನ ಮಾಡಿದ ಹಾಗೆ. ನಾವು ಕೆಟ್ಟ ದೃಷ್ಟಿಯಿಂದ ನಿಮ್ಮನ್ನು ನೋಡಿದರೆ ನಿಮಗೆ ಆನಂದ ಆಗೂದಿಲ್ಲೇನು?

ಮಂದಾ— ಹುಚ್ಚುಚ್ಚಾಗಿ ಏನಾದರೂ ಹರಟಬೇಡ್ರಿ.

ಶೇಖರ—ಆಗಲಿ, ಇಂದಿನ ಯುಗ ಅಂದ್ರ ಅಪ್ರಾಮಾಣಿಕತನದ ಯುಗ. ನಿನ್ನದಾದರೂ ಏನು ತಪ್ಪು! ಒಳಗೆ ಇರುವ ವಿಚಾರ ಒಂದು, ಹೊರಗೆ ತೋರಿಸುವ ವೇಷ ಮತ್ತೊಂದು. ಅದಿರಲಿ ಮಂದಾ, ನಮಗ ಚಹಾ ಕೊಡೂದಿಲ್ಲ ಏನು?

ಮಂದಾ— ಇಲ್ಲ!

ಶೇಖರ— ಯಾಕೆ?

ಮಂದಾ— ನಿಮಗ ೫ ಗಂಟೆಗೆ ಬರಲಿಕ್ಕೆ ಹೇಳಿತ್ತು, ಈಗ ಏಳು ಹೊಡೆದುಹೋಗಿದೆ. ನೀವು ಬಂದಾಗ ಚಹಾ ಕೊಡಲಿಕ್ಕೆ ಇದೇನು ಹೋಟೆಲೇನು?

ಶೇಖರ— ಮಂತ್ರಿಯ ಮನೆ ಅಂದರೆ ಹೋಟಲಲ್ಲದೆ ಮತ್ತೇನು?

ಮಂದಾ— ಹಾಗಿತ್ತಂದ್ರ ಒಳಗ ಹೋಗಿ ಬೇಡ್ರಿ, ಸಿಕ್ಕರ ಕುಡೀರಿ.

ಶೇಖರ— ವೇಟ್ರೆಸ್ ಇಲ್ಲೇ ಇದ್ದಾಗೂ ಅಂತ ಕೇಳಿದ ತಪ್ಪ!

ಮಂದಾ— ನಾ ಇನ್ನ ಸಿಟ್ಟಿಗೆ ಬರ್ತೀನಾ?

ಶೇಖರ— ಬಹಳ ಚಲೋದು. ಸಿಟ್ಟಿಗೆ ಬಂದಾಗಲೇ ಹೆಂಗಸಿನ ಸೌಂದರ್ಯ ಒಡೆದು ಕಾಣಿಸುತ್ತದೆ ಅಂತ ತಿಳಿದವರು ಅಂತಾರ.

ಮಂದಾ— ನನ್ನ ಸೌಂದರ್ಯ ಒಡೆದು ಕಾಣಿಸಲಿಕ್ಕಿಲ್ಲ, ಆದರ ನಿಮ್ಮ ತಲೀ ಒಡದಗ್ಟು ಮಾತ್ರ ಕಾಣಿಸಬಹುದು

ಶೇಖರ — ವಾಃ, ಇರಲಿಕ್ಕನಸಬೇಕು, ಆಧುನಿಕ ಸ್ತ್ರೀ !

ಮಂದಾ— ನಾ ಒಳಗ ಹೋಗಿಬಿಡತೀನಿ, ನೀವು ಕೂತಿರ್ರಿ ಇಲ್ಲೇ !

ಶೇಖರ— ನಾನೂ ಒಳಗ ಬರತೀನಿ, ನಿನ್ನ ಜೋಡಿ

ಮಂದಾ— ನೀವೇನು ವಿಧಿಪೆಯಾದ ಗಂಡ ಅಲ್ಲ, ನನ್ನ ಜೋಡಿ ಬರಲಿಕ್ಕೆ

ಶೇಖರ— ಅಂದರೆ ? ಎಷ್ಟು ಹಳೆಯ ಕಾಲದವಳು ನೀನು ಮಂದಾ ! ನಿನಗ ಆಧುನಿಕ ಸ್ತ್ರೀ ಅಂತ ಕರೆದದ್ದೇ ತಪ್ಪಾಯಿತು

ಮಂದಾ — ನಾನೆಲ್ಲಿ ಇದ್ದೇನಿ ಆಧುನಿಕ ಸ್ತ್ರೀ ? ನಿಮಗ ಆಧುನಿಕ ಸ್ತ್ರೀ ಬೇಕಾಗಿದ್ದರ, ಒಳಗ ಹೋಗ್ರಿ ಇದ್ದಾಳ

ಶೇಖರ — ಯಾರು ?

ಮಂದಾ— ಬಾಯಿಗೆ ನೀರು ಬಿಟ್ಟಿರೇನು ? ಹೇಳತೀನಿ, ಕೇಳ್ರಿ ದಿಲ್ಲಿ ಯಿಂದ ಇಲ್ಲಿಗೆ ಅವತರಸ್ಯಾಳ, ಲಲಿತಾ ದೇಸಾಯಿ ಅಂತ.

ಶೇಖರ— ಲಲಿತಾ ದೇಸಾಯಿ ?

ಮಂದಾ — ಹೌದು. ನಿಮ್ಮ ಪರಿಚಯ ಅದ ಏನು ?

ಶೇಖರ— ಹುಂ ಸ್ವಲ್ಪ ಸ್ವಲ್ಪ ಇದೆ.

ಮಂದಾ — ನಿಮಗಂತೂ ಎಲ್ಲಾ ಸ್ತ್ರೀಯರ ಪರಿಚಯ ಇದ್ದಹಾಂಗ ಕಾಣಸ್ತದ

ಶೇಖರ-- ಅದಿರಲಿ, ಇಲ್ಲ್ಯಾಕ ಬಂದಾಳಂತ ಆಕಿ ?

ಮಂದಾ— ಅಣ್ಣಾನ ಭೆಟ್ಟಿಯಾಗಬೇಕೂಂತ ಅಂತ. ಹ್ಯಾಂಗಿದ್ದಾಳ ಆ ಹೆಂಗಸು ?

ಶೇಖರ- -ಹ್ಯಾಂಗಿದ್ದಾಳ ? ನಿನ್ನೆದುರಿಗೆ ಆವಳ ವರ್ಣನೆಯನ್ನು ಮಾಡ ಬಾರದು, ಮಂದಾ ? ಆವಳು ಹಗಲು ಧ್ಯಾನಸಾಧನೆ ಮಾಡುವ ವಿದುಷಿಯಾಗಿ ದ್ದರೆ, ಇರುಳು ಸೌಂದರ್ಯಪ್ರಸಾಧನೆಯನ್ನು ಮಾಡುವ ರಮಣಿಯಾಗಿದ್ದಾಳೆ.

ಮಂದಾ – ಅಂದರೆ ಆವಳು ನಮ್ಮ ಮನೆಗೆ ಸಂಜೆಯ ಹೊತ್ತು ಬಂದದ್ದು ಬಹಳ ಒಳ್ಳೆಯದಾಯಿತು. ಈಗ ಆಕ ವಿದುಷಿಯೂ ಅಲ್ಲ ರಮ ಣಿಯೂ ಅಲ್ಲ

ಶೇಖರ— ಇರುಳು ಕವಿಯತೊಡಗಿದೆಯಲ್ಲ !

ಮಂದಾ-- ಇರಲಿ ನಡೀರಿ, ಮಾತ ಆದಿ, ಆಡಿ ಬಾಯಿ ಒಣಗಿರಬೇಕು ಚಹಾ ಕುಡದೀರಂತ ಅಂ ಏನಿದು ? ರತ್ನದ ಉಂಗುರ ? ಯಾರ ಬೆರಳಿನಿಂದಲೋ ಜಾರಿ ಬಿದ್ದಿರಬೇಕು

ಶೇಖರ— ಹೆಂಗಸರು ತಮ್ಮ ಬೆಲೆಯುಳ್ಳ ವಸ್ತುಗಳನ್ನು ಕಳೆದುಕೊಳ್ಳು ವದರಲ್ಲಿ ಧುರೀಣರು

ಮಂದಾ--ಇದ ನೋಡಿರಿ, ಉಂಗುರದ ಮೇಲೆ ಸುಂದರವಾದ ಸರ್ಪಾ ಕೃತಿಯಿದೆ

ಶೇಖರ— ಅದರ ಹೆಡೆಯಲ್ಲಿ ನೀಲಮಣಿಯಿದೆಯೇನು ?

ಮಂದಾ-- ಹೌದು.

ಶೇಖರ— ಸ್ವಲ್ಪ ನೋಡೋಣ, ಕೊಡು

[ನೋಡಿ ಕಿಸೆಯಲ್ಲ ಹಾಕಿಕೊಳ್ಳುತ್ತಾನೆ]

ಮಂದಾ—ನಿಮ್ಮದೇ ಆಗಿರುವಂತೆ ಇದನ್ನ ಕಿಸೆಗೆ ಹಾಕಿಕೊಂಡಿರಲ್ಲ ?

ಶೇಖರ— ಮಂದಾ, ನಿನಗೊಂದು ವಿನಂತಿಯಿದೆ

ಮಂದಾ-ಏನದು? ನಿಮಗೆ ಆ ಉಂಗುರವನ್ನು ಕೊಟ್ಟು ಬಿಡಬೇಕೇನು?

ಶೇಖರ— ಅಲ್ಲ, ಈ ಉಂಗುರದ ವಿಷಯ ಯಾರಿಗೂ ಹೇಳಬಾರದು. ಕಳೆದುಕೊಂಡವರು ಇದರ ಶೋಧ ಮಾಡಲಿಕ್ಕೆ ಬಂದರೆ, ನನಗೆ ಫೋನ ಮಾಡಿ ತಿಳಿಸು.

ಮಂದಾ— ಇಷ್ಟ್ಯಾಕೆ ಪ್ರೇಮ ಈ ಉಂಗುರದ ಮ್ಯಾಲೆ ?

ಶೇಖರ— ನನ್ನ ಪ್ರೇಮದ ವ್ಯಕ್ತಿಗೆ ನಾನಿದನ್ನು ಕಾಣಿಕೆಯಾಗಿ ಕೊಟ್ಟಿದ್ದೆ

ಮಂದಾ— [ಸಿಟ್ಟಿನಿಂದ] ಹಿಂಗೇನು ? ನೀವಿಲ್ಲೇ ಕೂತಿರ್ರಿ, ನಾ ಹೋಗತೇನಿ

ಶೇಖರ— ನಾನಿಲ್ಲಿ ಒಬ್ಬನೆ ಕೂಡಲ ?

ಮಂದಾ— ನನಗೇನ ಹೇಳ್ತೀರಿ. ನಿಮ್ಮ ಪ್ರೇಮದ ವ್ಯಕ್ತಿ ? ಅವಳ ಜಪ ಮಾಡಿಕೋತ ಕೂಡ್ರಿ.

ಶೇಖರ— ಒಳ್ಳೇದು. ನಾ ಹೇಳಿದ್ದು ಮಾತ್ರ ಮರೀಬ್ಯಾಡ.

ಮಂದಾ— ನೀವೇನ ಹೇಳಿದ್ದಿರಿ ಮತ್ತೆ?

ಶೇಖರ—ಇಷ್ಟರೊಳಗೆ ಮರೆತುಬಿಟ್ಟಿಯೇನು? ಈ ಉಂಗುರದ ವಿಷಯ ವನ್ನು ಯಾರಿಗೂ ಹೇಳಬೇಡ.

[ಮಂದಾ ಹೋಗುತ್ತಾಳೆ ಲಲಿತಾ ಅವಿನಾಶರ ಪ್ರವೇಶ]

ಲಲಿತಾ— ನೀನಿಷ್ಟು ನನ್ನ ಪ್ರಶಂಸೆಯನ್ನು ಮಾಡುವ ಕಾರಣವಿಲ್ಲ

ಅವಿನಾಶ— ಇದು ಪ್ರಶಂಸೆಯಲ್ಲ, ಲಲಿತಾಬಾಯಿ, ಇದು ವಸ್ತುಸ್ಥಿತಿಯ ವರ್ಣನೆ

ಲಲಿತಾ— ಅದೇನೇ ಇರಲಿ ಹೀಗೆ ಪ್ರಶಂಸೆಯಿಂದ ಪ್ರಾರಂಭವಾದ ಪರಿಚಯ, ಗಾಢವಾದ ಗೆಳೆತನದಲ್ಲಿ ಪರಿಣಮಿಸುತ್ತದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ ನಮ್ಮ ಪರಿಚಯವೇನೂ ಹೊಸದಲ್ಲ

ಅವಿನಾಶ— ಅಂದರೆ?

ಲಲಿತಾ— ನಮ್ಮದು ಬಹಳ ಹಳೆಯ ಸಂಬಂಧವೆಂಬುದನ್ನು, ನಿಮ್ಮ ಶ್ರೀಮತಿಯವರೇ ಹೇಳಿಕೊಟ್ಟರು. ನಾನೂ ಅವರೂ ಒಂದೇ ಶಾಲೆಯಲ್ಲಿ ಕಲಿತಿದ್ದೇವೆ

ಅವಿನಾಶ— ಹೌದೇನು? ಅಂದರೆ ಅದು ರಕ್ತಸಂಬಂಧಕ್ಕಿಂತಲೂ ಹೆಚ್ಚು ನಿಕಟವಾದದ್ದು ಶಾಲೆಯ ಗೆಳೆತನವೆಂದರೆ ಸಾಯದ ಗೆಳೆತನ!

ಲಲಿತಾ— ನನಗೀಗ ಎಲ್ಲವೂ ನೆನಪಿಗೆ ಬರತೊಡಗಿದ. ಶಾಲೆಯಲ್ಲಿ ನಿಮ್ಮ ಶ್ರೀಮತಿಯವರಿಗೆ ಒಳ್ಳೆಯ ವರ್ತನದ ಸಲುವಾಗಿ ಯಾವಾಗಲೂ ಮೊದಲನೆ ಬಹುಮಾನ ಸಿಗುತ್ತಿತ್ತು ನನಗೆ ಮಾತ್ರ ಅಂತಹ ಬಹುಮಾನ ಎಂದಿಗೂ ಸಿಗಲಿಲ್ಲ

ಅವಿನಾಶ— ನಿಮಗೆ ಸೌಂದರ್ಯದ ಸಲುವಾಗಿ ಬಹುಮಾನ ಸಿಗಬೇಕಾಗಿತ್ತು.

ಲಲಿತಾ— ಸೌಂದರ್ಯಕ್ಕೆ ಬಹುಮಾನವೆ? ನಮ್ಮ ನಾಡಿನಲ್ಲಿ ಸೌಂದರ್ಯಕ್ಕೆ ಸಿಗುವುದು ಬಹುಮಾನವಲ್ಲ, ಶಿಕ್ಷೆ!

[ಅವಿನಾಶ ಶೇಖರನನ್ನು ನೋಡುತ್ತಾನೆ]

ಅವಿನಾಶ—ಹಲ್ಲೊ ಶೇಖರ, ನೀನಿಲ್ಲಿ ಒಬ್ಬನೇ ಕುಳಿತುಕೊಂಡು ಏನು ಮಾಡುತ್ತಿದ್ದೀಯಾ? ಚಹಕ್ಕೆ ಒಳಗೆ ಬರಲೇ ಇಲ್ಲ?

ಶೇಖರ— ಇಲ್ಲ, ನಾನೊಬ್ಬ ಗೆಳೆಯನ ಮನೆಗೆ ಚಹಕ್ಕೆ ಹೋಗಿದ್ದೆ.

ಅವಿನಾಶ—ಇವನು ನನ್ನ ಮಿತ್ರ ಶೇಖರ. ಇವರು ಲಲಿತಾದೇಸಾಯಿ

ಲಲಿತಾ— ನಾನು ಇವರನ್ನು ಬಲ್ಲೆ ಅವಿನಾಶ! ಇವರು ಮಾತ್ರ ನನ್ನನ್ನು ಮರೆತಹಾಗೆ ಕಾಣಿಸುತ್ತದೆ.

ಶೇಖರ— ಛೇ, ಛೇ! ಸುಂದರ ಸ್ತ್ರೀಯರನ್ನು ಮರೆಯುವಷ್ಟು, ನಾನೇನೂ ಮುದುಕನಲ್ಲ.

ಲಲಿತಾ— ಸೌಂದರ್ಯವನ್ನು ಮರೆಯಲಿಕ್ಕೆ ಮುದುಕನಾಗಬೇಕು, ಇಲ್ಲದಿದ್ದರೆ ಮದಿವೆಯಾಗಬೇಕು.

ಶೇಖರ— ಅಂಥಾ ದುರ್ಧರ ಪ್ರಸಂಗ ನನ್ನ ಮೇಲೆ ಇನ್ನೂ ಬಂದಿಲ್ಲ, ಲಲಿತಾಬಾಯಿ!

ಲಲಿತಾ— ಮದಿವೆಯೆಂದರೆ ದುರ್ಧರ ಪ್ರಸಂಗವೆ?

ಶೇಖರ— ಹೌದು ಗಂಡು ಹೆಣ್ಣು ಇಬ್ಬರಿಗೂ ಅದೊಂದು ದುರಂತ. ಮದಿವೆಯಿಂದ ಗಂಡಸು ತನ್ನ ಬುದ್ಧಿಯನ್ನು ಕಳಕೊಳ್ಳುತ್ತಾನೆ, ಹೆಂಗಸು ತನ್ನ ಸೌಂದರ್ಯವನ್ನು ಕಳೆದುಕೊಳ್ಳುತ್ತಾಳೆ

ಲಲಿತಾ— ಇದು ನಿಮ್ಮ ನವ ಯುವಕರ ನವ ನೀತಿಯೆಂದು ಕಾಣಿಸುತ್ತದೆ. ಆದರೆ ನಿಮ್ಮ ಈ ಕೀಳುಮತ, ಅವಿನಾಶರಿಗೆ ಸರಿಯೆನಿಸುತ್ತದೆಯೆ?

ಅವಿನಾಶ— ಇಲ್ಲ, ಹಾಗಿದ್ದರೆ, ನಾನು ಮದಿವೆಯಾಗುತ್ತಿರಲಿಲ್ಲ, ನನಗಂತೂ ಮದಿವೆಯೆಂಬುದು ಸ್ತ್ರೀ ಪುರುಷರ ಜೀವನದಲ್ಲಿ ಅವಶ್ಯಕವಾದ ಒಂದು ಸಂಸ್ಕಾರ ಮದಿವೆಯಿಂದಲೇ ಮನುಷ್ಯನ ವ್ಯಕ್ತಿತ್ವಕ್ಕೆ ಪೂರ್ಣತೆ ಬರುತ್ತದೆ. ಗಂಡಸಿನ ಬುದ್ಧಿಗೆ ಭಾವನೆಯ ಸಾಹಚರ್ಯವನ್ನು ತಂದುಕೊಡುತ್ತದೆ. ಹೆಂಗಸಿನ ಸೌಂದರ್ಯಕ್ಕೆ ತಾಯ್ತನದ ಆಭರಣವನ್ನು ತೊಡಿಸುತ್ತದೆ. ಜೀವನದ ಅತ್ಯುಚ್ಚ ಆದರ್ಶವಾದ ಸಾಮರಸ್ಯವನ್ನು ಮದಿವೆ ಕಲಿಸಿಕೊಡುತ್ತದೆ

ಲಲಿತಾ— ಹಿಯರ್, ಹಿಯರ್! ಶೇಖರ, ನಿಮ್ಮ ಮಿತ್ರರಿಂದ ನೀವು ಏನನ್ನೂ ಕಲಿತಹಾಗೆ ತೋರುವದಿಲ್ಲ

ಶೇಖರ— ಅವಿನಾಶನ ಜೀವನವೆಂದರೆ ಶಾಲೆಯಲ್ಲಿ ಕಲಿಯಬಹುದಾದ ನೀತಿಯ ಪಾಠವಲ್ಲ! ಅದೊಂದು ಹಿಮಾಲಯ ಪರ್ವತದ ಅಜೇಂಕ್ಯವಾದ ಆದರ್ಶವಾಗಿದೆ.

ಲಲಿತಾ— ಹಿಮಾಲಯದ ಶಿಖರ ಅಜಿಂಕ್ಯವಾಗಿಲ್ಲ, ಶೇಖರ!

ಶೇಖರ— ಹಿಮಾಲಯದ ಶಿಖರವನ್ನು ನಾವು ಮುಟ್ಟಬಹುದು, ಆದರೆ ಅವಿನಾಶನ ಆದರ್ಶ ಜೀವನವನ್ನು ಪಡೆಯುವದು ಸಾಧ್ಯವಿಲ್ಲ. ಅವನಂಥ ವರಿಗೆ ಅದು ಪರ್ವತ ಶಿಖರ, ನಮ್ಮಂಥವರಿಗೆ ಅದು ನಿಲುಕದ ಬಾನು! ಅದನ್ನು ನೋಡಿ ಆನಂದಪಡೆಯಬಹುದು, ಆದರ ಪಡೆದು ಆನಂದಿಸುವದು ಸಾಧ್ಯವಿಲ್ಲ.

ಅವಿನಾಶ--ಇದೇನು ಶೇಖರ, ಬಹಳ ಪ್ರಶಂಸೆ ಮಾಡತೊಡಗಿರುವೆ?

ಶೇಖರ—ಇದು ಪ್ರಶಂಸೆಯಲ್ಲ, ಅವಿನಾಶ! ನನ್ನ ಹೃದಯದ ಪ್ರತೀತಿ! ಹುಂ ಇರಲಿ, ನಾನು ಒಳಗೆ ಹೋಗಬೇಕು. ನಮ್ಮ ತಂದೆಯವರು ಬಂದಿದ್ದಾರಂತೆ, ಭೆಟ್ಟಿಯಾಗೋಣ ಇಲ್ಲದಿದ್ದರ ಸಿಟ್ಟಿಗೇಳಬಹುದು. ಲಲಿತಾಬಾಯಿ, ನೀನಿನ್ನೂ ಎಷ್ಟು ದಿವಸ ಇರಬೇಕು ಸನ್ನಿಂಗಾರದಲ್ಲಿ?

ಲಲಿತಾ— ನಾನು ಇರಬೇಕೋ, ಹೋಗಬೇಕೋ, ಎಂಬುದನ್ನು ಇವರೇ ಗೊತ್ತುಮಾಡಬೇಕು!

ಅವಿನಾಶ – ನಾನೇ? ನಾನೇನು ಮಾಡಲಿ?

ಲಲಿತಾ—ನಾನು ಬಂದದ್ದೇ ನಿಮ್ಮ ಕಡೆಗೆ, ನಿಮ್ಮ ಕಡೆಗೆ ನನ್ನದೊಂದು ಮಹತ್ವದ ಕೆಲಸವಿದೆ.

ಶೇಖರ— ಅಚ್ಛಾ, ನಾನು ಹೊರಡುತ್ತೇನೆ. [ನಿಷ್ಕ್ರಮಣ].

ಅವಿನಾಶ— ಮಹತ್ವದ ಕೆಲಸವೇ? ಹೇಳಿ ಏನದು?

ಲಲಿತಾ—' ನವಭಾರತ ಕಾರ್ಪೋರೇಶನ'ದ ಬಗ್ಗೆ ನಿಮ್ಮೊಡನೆ ಚರ್ಚೆ ಮಾಡಬೇಕಾಗಿದೆ.

ಅವಿನಾಶ – ಎಂಥಾ ನೀರಸ ವಿಷಯ, ಲಲಿತಾಬಾಯಿ?

ಲಲಿತಾ – ವಿಷಯ ನೀರಸವಾಗಿರುವದಿಲ್ಲ, ಅವಿನಾಶ, ವ್ಯಕ್ತಿ ನೀರಸವಾಗಿರುತ್ತವೆ. ವಿಷಯ ಎಷ್ಟು ನೀರಸವಾಗಿದ್ದರೂ ಅದನ್ನು ರಸಪೂರ್ಣ ಮಾಡುವ ಶಕ್ತಿ ಮನುಷ್ಯನಲ್ಲಿರಬೇಕು.

ಅವಿನಾಶ – ಇರಲಿ, ಆದರೆ ನೀವ್ಯಾಕೆ ' ನವಭಾರತ'ವನ್ನು ಕುರಿತು ನನ್ನೊಡನೆ ಚರ್ಚೆ ಮಾಡಬೇಕು?

ಲಲಿತಾ— ಯಾಕಂದರೆ, ಅದರಲ್ಲಿ ನಾನು ಹಣವನ್ನು ಹಾಕಿದ್ದೇನೆ.

ಅವಿನಾಶ – ನೀವು? ನೀವು ದೊಡ್ಡ ತಪ್ಪು ಮಾಡಿದ್ದೀರಿ, ಲಲಿತಾ ದೇವಿ!

ಲಲಿತಾ— ಯಾಕೆ ? ಹಾಗೇಕಂತೀರಿ ?

ಅವಿನಾಶ-ಯಾಕೆಂದರೆ, ಅದೊಂದು ಮೋಸದ ಜಾಲವಾಗಿದೆಯೆಂದು. ಈ ಕಾರ್ಪೊರೇಶನ್ನದ ಬಗ್ಗೆ ಸವಿಸ್ತರವಾದ ಎಲ್ಲ ವಿವರಗಳೂ ನನ್ನ ಕೈಗೆ ಬಂದಿವೆ. ಇನ್ನೂ ವರೆಗೆ ಅಲ್ಲಿ ಯಾವ ಕೆಲಸವೂ ಆರಂಭವಾಗಿಲ್ಲ, ಆರಂಭ ವಾಗುವ ಲಕ್ಷಣವೂ ಇಲ್ಲ. ಆದರೂ ಇಷ್ಟು ದಿವಸದ ವರೆಗೆ ಕೂಡಿದ ಲಕ್ಷಾ ವಧಿ ಶೇಅರ ಹಣ ಏನಾಗಿದೆಯೆಂಬುದರ ಪತ್ತೆಯೇ ಇಲ್ಲ, ಇಂದಿನತನಕ. ಅವರು ಸರಕಾರವನ್ನೂ ಅದೇ ಮೋಸದ ಬಲೆಯಲ್ಲ ಎಳೆಯಬೇಕೆಂಬ ಹೊಂಚು ಹಾಕಿದ್ದಾರೆ. ಅದು ಸರ್ವಥಾ ಸಾಧ್ಯವಿಲ್ಲ.

ಲಲಿತಾ— ಇದೆಲ್ಲ ಸುಳ್ಳು, ಅವಿನಾಶ !

ಅವಿನಾಶ— ನನಗನಿಸುತ್ತ ಮಟ್ಟಿಗೆ ನೀವೇ ಇವರಲ್ಲಿ ಮೋಸಹೋಗಿ ದ್ದೀರಿ.

ಲಲಿತಾ— ನನಗಂತೂ ಹಾಗನಿಸುವದಿಲ್ಲ. ನನಗೆ ಸಲಹೆ ಕೊಟ್ಟವರ ಮಾತಿನಲ್ಲಿ ನನಗೆ ತುಂಬಾ ವಿಶ್ವಾಸವಿದೆ

ಅವಿನಾಶ— ಯಾರವರು ನಿಮಗೆ ಈ ಸಲಹೆ ಕೊಟ್ಟವರು ?

ಲಲಿತಾ - ಅವರು ನಿಮಗೂ ಗೆಳೆಯರಾಗಿದ್ದರು

ಅವಿನಾಶ— ಯಾರವರು ?

ಲಲಿತಾ— ರಾವಬಹದ್ದೂರ ನಾಡಕರ್ಣಿಯವರು

ಅವಿನಾಶ— ನಾಡಕರ್ಣಿಯವರೆ ? ಹೂಂ ! ಸಾಯುವ ಕಾಲಕ್ಕೆ ಈ ಸಂಸ್ಥೆಯಲ್ಲಿ ಅವರು ತಮ್ಮ ಮನಸ್ಸನ್ನು ಹಾಕಿದ್ದರೆಂದು ಕೇಳಿದ್ದೆ

ಲಲಿತಾ— ಅವರೇ ನನಗೆ ಸಲಹೆ ಕೊಟ್ಟರು ಅವರ ಮೇಲೆ ವಿಶ್ವಾಸ ವಿಟ್ಟು ನಾನು ಈ ಸಾಹಸದಲ್ಲಿ ಧುಮುಕಿದ್ದೇನೆ ಈ ಹೊತ್ತು ನಿಮ್ಮ ಸಹಾಯ ವನ್ನು ಕೇಳಲಿಕ್ಕೆ ಬಂದಿದ್ದೇನೆ.

ಅವಿನಾಶ— ಲಲಿತಾಬಾಯಿ, ನೀವು ನನ್ನನ್ನು ಕ್ಷಮಿಸಬೇಕು ಈ ವಿಷಯದಲ್ಲಿ ಯಾವ ಸಹಾಯವೂ ನಿಮಗೆ ಸಿಗಲಾರದು [ಮೌನ]

ಲಲಿತಾಬಾಯಿ, ನೀವು ನಮ್ಮ ವಾಚನಾಲಯವನ್ನು ನೋಡಲಿಕ್ಕಿಲ್ಲ. ಅದರ ವಿಷಯಕ್ಕೆ ನಿಮ್ಮ ಗೆಳತಿಗೆ ಬಹಳ ಅಭಿಮಾನ. ನಿಮಗೆ ತೋರಿಸುತ್ತೇನೆ ನಡೆಯಿರಿ.

ಲಲಿತಾ— ನನಗಿಲ್ಲಿಂದ ಏಳುವ ಮನಸ್ಸೇ ಇಲ್ಲ, ಅವಿನಾಶ ನಾನು ದಿಲ್ಲಿಯಿಂದ ಇಲ್ಲಿಯವರೆಗೆ ನಿಮ್ಮ ವಾಚನಾಲಯವನ್ನು ನೋಡಲಿಕ್ಕೆ ಬಂದಿಲ್ಲ. ನನಗೆ ಗೊತ್ತಿದೆ, ನೀವು ಮನಸ್ಸು ಮಾಡಿದರೆ ಈ ಸಾಹಸಕ್ಕೆ ಯಶಸ್ಸು ನಿಶ್ಚಿತವಾಗಿ ದೊರಿಯುವದೆಂದು

ಅವಿನಾಶ-- ಅದೇನೋ ಖರೆ ಸರಕಾರದ ಪ್ರೋತ್ಸಾಹದ ಮೇರ ಅದರ ಯಶಸ್ಸು ನಿಂತಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ ಆದರ ಆ ಪ್ರೋತ್ಸಾಹ ಅದಕ್ಕೆ ದೊರಕುವದು ಸಾಧ್ಯವಿಲ್ಲ ನಾಳೆ ನಾನು ಲೋಕ ಸಭೆಯಲ್ಲಿ ನಿಮ್ಮ ಕಂಪನಿಯ ವ್ಯವಹಾರವನ್ನು ಖಂಡಿಸುವವನಿದ್ದೇನ

ಲಲಿತಾ— ಹಾಗೆ ನನಗೂ ತಿಳಿಯಿತು ಅಂತೆಯೇ ನಾನು ಇಲ್ಲಿಗೆ ಬಂದದ್ದು ಅವಿನಾಶ, ನಾಳೆ ನೀವು ಆ ಭಾಷಣವನ್ನು ಮಾಡಬಾರದು

ಅವಿನಾಶ - ಯಾಕ ?

ಲಲಿತಾ — ಅದರಿಂದ ನನಗೆ ಲಾಭವಾಗುವದು, ಅಷ್ಟೇಕೆ ನಿಮಗೂ ಕಲ್ಯಾಣವಾಗುವದು

ಅವಿನಾಶ— ನನಗೆ ಕಲ್ಯಾಣ ? ನೀವು ಏನ್ನುವದಾದರೂ ಏನು ಲಲಿತಾಬಾಯಿ ?

ಲಲಿತಾ — ನಿಮ್ಮೊಡನೆ ಸ್ಪಷ್ಟವಾಗಿ ಮಾತಾಡಲು ಯಾವ ಭೀತಿಯೂ ಇಲ್ಲ. ಕೇಳ್ರಿಲ್ಲಿ ನವಭಾರತ ಕಾರ್ಪೋರೇಶನ್ನಿನ ಬಗ್ಗೆ ನೀವು ತಯಾರು ಮಾಡಿದ ಮಸೂದೆಯನ್ನು ಒಂದಕ್ಕೆ ತೆಗೆದುಕೊಳ್ಳಬೇಕು ಅದರ ಬಗ್ಗೆ ಪುನ ವಿಚಾರಣೆಯಾಗುವುದಕ್ಕಾಗಿ ಒಂದು ಹೊಸ ಸಮಿತಿ ನೇಮಕವಾಗುವ ಹಾಗೆ ನೀವು ಸರಕಾರಕ್ಕೆ ಸಿಫಾರಸು ಮಾಡಬೇಕು. ಸ್ವತಂತ್ರ ಭಾರತದ ಔದ್ಯೋಗಿಕ ಧೋರಣೆಯ ಅನುಸಾರವಾಗಿ ನಮ್ಮೀ ಸಾಹಸಕ್ಕೆ ಸಂಪೂರ್ಣ ಸಹಕಾರ ಸಂರಕ್ಷಣೆಗಳು ದೊರೆಯಬೇಕು. ಅಂದರೆ —

ಅವಿನಾಶ— ಅಂದರೆ, ಏನಾಗುವದು ಲಲಿತಾಬಾಯಿ ?

ಲಲಿತಾ— ನಾನು ಹೇಳಿದ ಮಾತನ್ನು ನೀವು ನಡೆಸಿಕೊಟ್ಟರೆ, ನೀವು ಬೇಡಿದಷ್ಟು ಹಣವನ್ನು ನಾನು ನಿಮಗೆ ಕೊಡುತ್ತೇನೆ.

ಅವಿನಾಶ ನೀವು ವ್ಯರ್ಥವಾಗಿ ಕಾಲಹರಣ ಮಾಡುತ್ತಿದ್ದೀರಿ.

ಲಲಿತಾ— ಕಾಲಹರಣ ಮಾಡಿ ಲಾಭ ಪಡೆಯುವ ಹಾಗಿದ್ದರೆ, ನಾನು ಬೇಕಾದಷ್ಟು ವೇಳೆಯನ್ನು ಕಳೆದುಕೊಳ್ಳಲು ಸಿದ್ಧಳಿದ್ದೇನೆ.

ಅವಿನಾಶ— ನೀವು ಹೆಂಗಸು, ನನ್ನ ಹೆಂಡತಿಯ ಬಾಲ್ಯದ ಗೆಳತಿ, ಎಂದು ನಾನು ಸುಮ್ಮನೆ ಕೂಡಬೇಕಾಗಿದೆ. ಇಲ್ಲದಿದ್ದರೆ ನಿಮ್ಮನ್ನು ಈ ಮೊದಲೇ ಮನೆಯಿಂದ ಹೊರಗೆ ಹಾಕಿಸಬಹುದಾಗಿತ್ತು

ಲಲಿತಾ— ಹೀಗೆ ಸಿಟ್ಟಿಗೇಳಬೇಡಿರಿ, ಅವಿನಾಶ! ಈ ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿಗೂ ಬೆಲೆಯಿದೆ, ಪ್ರತಿಯೊಂದು ವ್ಯಕ್ತಿಗೂ ಅವನವನ ಯೋಗ್ಯತೆಯಂತೆ ಬೆಲೆಯಿದೆ. ಹಣವೇ ಇಂದಿನ ಜೀವನದ ಮೂಲ್ಯ.

ಅವಿನಾಶ— ಎಷ್ಟು ಹೀನವಾದ ತತ್ವಜ್ಞಾನ! ಬ್ಲ್ಯಾಕ್ ಮಾರ್ಕೆಟಿನಲ್ಲಿ ಕೂತ ಮಾರವಾಡಿ ಈ ಮಾತನ್ನು ಹೇಳಿದ್ದರೆ ನನಗೆ ಆಶ್ಚರ್ಯವಾಗುತ್ತಿರಲಿಲ್ಲ ಆದರೆ ನಿಮ್ಮಂತಹ ಸುಸಂಸ್ಕೃತ ಹೆಂಗಸು ಇಂಥ ಮಾತುಗಳನ್ನಾಡುವದೆಂದರೆ, ಅದು ಸ್ತ್ರೀಜಾತಿಗೇ ಅವಮಾನ!

ಲಲಿತಾ— ಮಾನಾಪಮಾನದ ಮಾತು ನನಗೆ ಗೊತ್ತಿಲ್ಲ, ಅವಿನಾಶ! ನನಗೆ ವ್ಯವಹಾರವೊಂದೇ ತಿಳಿಯುತ್ತದೆ ನನ್ನ ದೃಷ್ಟಿಯಿಂದ ಇದೊಂದು ಸಾಮಾನ್ಯ ವ್ಯವಹಾರ! ವ್ಯವಹಾರದಲ್ಲಿ ನೀತಿಯ ತೊಡಕು ನಿರ್ಮಾಣವಾಗಬಾರದು ಅವಿನಾಶ, ನೀವು ಸ್ವಲ್ಪ ಶಾಂತಚಿತ್ತದಿಂದ ವಿಚಾರ ಮಾಡಿರಿ. ನಿಮ್ಮ ಮೇಲೆಯೂ ಸಂಸಾರದ ಜವಾಬ್ದಾರಿಯಿದೆ. ಹೀಗೆ ಬಾಗಿಲವರೆಗೆ ನಡೆದುಬಂದ ಲಕ್ಷ್ಮಿಯನ್ನು ಒದ್ದು ಕಳಿಸಬಾರದು.

ಅವಿನಾಶ— ಮನೆಗೆ ಬಂದ ಲಕ್ಷ್ಮಿ ಗರತಿಯಾಗಿ ಬರಬೇಕು, ಸೂಳೆಯಾಗಿ ಬರಬಾರದು ಲಲಿತಾಬಾಯಿ, ನನಗೆ ಅಂಥ ಹಣದ ಅವಶ್ಯಕತೆಯಿಲ್ಲ ನೀವಿನ್ನು ಹೊರಡಬಹುದು. ನೀವು ಯಾರ ಸಂಗಡ ಮಾತಾಡುತ್ತಿದ್ದೀರಿ ಎಂಬುದರ ಅರಿವು ನಿಮಗಿಲ್ಲ!

ಲಲಿತಾ-- ನಾನು ಯಾರ ಸಂಗಡ ಮಾತಾಡುತ್ತಿದ್ದೇನೆಂಬುದರ ಸಂಪೂರ್ಣ ಅರಿವು ನನಗಿದೆ. ಕ್ಯಾಬಿನೆಟ್ಟಿನ ಗೌಪ್ಯ ಸ್ಫೋಟ ಮಾಡಿ ಹಣವನ್ನು ಗಳಿಸಿದ ಆಯ್ ಸಿ. ಎಸ್. ಅವಿನಾಶರ ಎದುರಿಗೆ ನಾನು ನಿಂತಿದ್ದೇನೆಂಬುದನ್ನು ನಾನು ಮರೆತಿಲ್ಲ, ಅವಿನಾಶ!

ಅವಿನಾಶ-- [ಸಿಟ್ಟಿನಿಂದ ಚೀರುತ್ತಾನೆ] ಲಲಿತಾಬಾಯಿ!

ಲಲಿತಾ— [ಶಾಂತಳಾಗಿ, ಸಾವಕಾಶವಾಗಿ] ಹಿಮಾಲಯದ ಶಿಖರದಂತೆ ಶುದ್ಧವೂ ಪವಿತ್ರವೂ ಆಗಿರುವ ನಿಮ್ಮ ರಾಜಕೀಯ ಜೀವನ, ಯಾವ ಘೋರ ಪಾಪದ ಮೇಲೆ ನಿಂತಿದೆಯೆಂಬುದು, ಯಾರಿಗೂ ಗೊತ್ತಿಲ್ಲ, ಅಂತ ನಿಮಗನಿಸಿರಬಹುದು. ಆದರೆ ನನಗೆ ಗೊತ್ತಿದೆ. ಇಷ್ಟು ಕಾಲ ಗತಿಸಿ ಹೋದರೂ ನಿಮ್ಮ ಪಾಪದ ಪುರಾವೆ ನನ್ನ ಹತ್ತಿರ ಇದೆ. ನಿಮ್ಮ ಹಿತಚಿಂತಕ ರಾವ ರಾವಬಹಾದ್ದೂರ ನಾಡಕರ್ಣಿಯವರಿಗೆ ನೀವು ಬರೆದ ಪತ್ರ—ನಿಮ್ಮ ಹೇಸಿಕೃತ್ಯವನ್ನು ಸಾರಿಹೇಳುವ ಆ ಪತ್ರ—ನನ್ನ ಕೈಯ್ಲಲಿದೆ. ಅವಿನಾಶ, ನೀವು ಯಾರು ಎಂಬುದು ನಿಮ್ಮ ಹೆಂಡತಿಗೂ ಗೊತ್ತಿಲ್ಲ, ಆದರೆ ನನಗೆ ಗೊತ್ತಿದೆ.

ಅವಿನಾಶ-- ಸುಳ್ಳು !

ಲಲಿತಾ-- ಇಲ್ಲದಿದ್ದರೆ ನಾನು ಇಷ್ಟು ಧೈರ್ಯದಿಂದ ನಿಮ್ಮೊಡನೆ ಮಾತನಾಡಬಹುದೆ? ಅವಿನಾಶ, ನೀವು ಬುದ್ಧಿಶಾಲಿಗಳಾಗಿದ್ದೀರಿ; ಜಗತ್ತಿನ ವ್ಯವಹಾರದಲ್ಲಿ ನೀವು ಸಾಕಷ್ಟು ಪರಿಣತರಾಗಿದ್ದೀರಿ. ಇನ್ನೊಮ್ಮೆ ವಿಚಾರ ಮಾಡಿರಿ. ನೀವು ನನ್ನ ಹೇಳಿಕೆಯಂತೆ ನಡೆದರೆ, ಲೋಕಸಭೆಯಲ್ಲಿ, ನಮ್ಮ ಕಾರ್ಪೋರೇಶನ್ನದ ಪರವಾಗಿ ಮಾತನಾಡಿದರೆ, ಆ ಪತ್ರವನ್ನು ನಿಮ್ಮ ಕೈಯಲ್ಲಿ ಒಪ್ಪಿಸುತ್ತೇನೆ.

ಅವಿನಾಶ— ಆಕಾಶ ಕಳಚಿ ಬಿದ್ದರೂ ನನ್ನಿಂದ ಆ ಕೆಲಸವಾಗಲಾರದು.

ಲಲಿತಾ— ಹೀಗೆ ಚಿಕ್ಕಮಗುವಿನಂತೆ ಭಾವನೆಯ ಕೈಯಲ್ಲಿ ಬುದ್ಧಿಯನ್ನು ಕೊಡಬೇಡಿರಿ, ಅವಿನಾಶ. ಭೂತಕಾಲದ ನಿಮ್ಮ ಪಾಪಕ್ಕೆ ಸಂಪೂರ್ಣ ಸಮಾಧಿಯನ್ನು ಕೊಡುವ ಸುವರ್ಣ ಸಂಧಿ ಇಂದು ನಿಮ್ಮ ಮನೆಯವರೆಗೆ ನಡೆದುಬಂದಿದೆ. ಅದನ್ನು ಕಳೆದುಕೊಳ್ಳದಷ್ಟು ನೀವು ಜಾಣರಾಗಿರಬೇಕು. ಅವಿನಾಶ, ನೀವೊಂದು ಎತ್ತರವಾದ ಗುಡ್ಡದ ಮೇಲೆ ನಿಂತುಕೊಂಡಿದ್ದೀರಿ. ನಿಮ್ಮ ಕಾಲಕೆಳಗೆ ಏನು ಹುದುಗಿದೆಯೆಂಬುದನ್ನು ಕಣ್ತೆರೆದು ನೋಡಿರಿ. ಅದೊಂದು ಅಪಾರವಾದ ಅಪಕೀರ್ತಿಯ ಕಂದರ, ನಿಮ್ಮ ಜೀವನವನ್ನೇ ನುಂಗಲೆಂದು ಬಾಯ್ದೆರೆದು ನಿಂತಿರುವ ಪಾಪದ ಕೂಪ ! ನೋಡಿದಿರಾ, ಅವಿನಾಶ ! ನೀವು ನನ್ನ ಮಾತಿನಂತೆ ನಡೆಯದಿದ್ದರೆ—

ಅವಿನಾಶ— ಅಂದರೆ ನೀವು ಏನು ಮಾಡಬೇಕೆಂದಿದ್ದೀರಿ, ಲಲಿತಾ ಬಾಯಿ?

ಲಲಿತಾ— ಲೋಕಸಭೆಯಲ್ಲಿ ನಿಮ್ಮ ಭಾಷಣವಾಗುವ ದಿವಸ ಬೆಳಗು ಮುಂಜಾನೆ ಪ್ರತಿಯೊಂದು ವರ್ತಮಾನ ಪತ್ರದಲ್ಲಿ ನಿಮ್ಮ ಪಾಪ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಪ್ರಕಟವಾಗುವದು. ನಮ್ಮ ಸಮಾಜದ ಶುದ್ಧ ಆದರ್ಶ ವಾಗಿರುವ, ಜನತೆಯ ಶ್ರೇಷ್ಠ ನಾಯಕರಾಗಿರುವ, ಪಾವನ ಚಾರಿತ್ರ್ಯದ ಪತಾಕೆ ಯೆಂದು ಹೆಸರು ಗಳಿಸಿದ, ಅವಿನಾಶರು ಯಾವ ಪಾಪದ ಕೆಸರಿನಲ್ಲಿ ನಿಂತು ಕೊಂಡಿದ್ದಾರೆಂಬುದು, ಆಹೊತ್ತು ಮುಂಜಾನೆ ಚಹ ಕುಡಿಯುವಾಗ ಜಗತ್ತಿಗೆ ಸ್ಪಷ್ಟವಾಗುತ್ತದೆ. ನಿಮ್ಮ ಕೀರ್ತಿಯ ಅರಮನೆ ಅರಗಿನ ಮನೆಯಂತೆ ಬುರು ಬುರು ಸುಟ್ಟು ಬೂದಿಯಾಗುತ್ತದೆ. ಆಗ ನೀವು ಏನು ಮಾಡುವಿರಿ, ಅವಿ ನಾಶ? ನಿಮ್ಮ ಪ್ರೀತಿಯ ಹೆಂಡತಿಗೆ ನೀವು ಏನು ಹೇಳುವಿರಿ? ನಿಮ್ಮ ಗೆಳೆ ಯರ ಮುಂದೆ ಹೇಗೆ ನಿಲ್ಲುವಿರಿ? ನಿಮ್ಮನ್ನು ನಂಬಿ ಕುಳಿತ ಆ ವಿಶಾಲ ಸಮಾ ಜಕ್ಕೆ ಈ ಕಪ್ಪು ಬಳಿದ ಮುಖವನ್ನು ಹೇಗೆ ತೋರಿಸುವಿರಿ? ಆಗ ನಿಮ್ಮನ್ನು ಯಾರೂ ಬರಮಾಡಿಕೊಳ್ಳುವದಿಲ್ಲ ಅವಿನಾಶ! ಆಗ ಯಮರಾಜನೊಬ್ಬನೇ ನಿಮ್ಮ ಜೀವದ ಗಳೆಯ,—ನಿಮ್ಮ ಪ್ರಾಣವನ್ನು ತಗೆದುಕೊಂಡು ಈ ಅಪ ಕೀರ್ತಿಯ ಪ್ರಾಣಾಂತಿಕ ಯಾತನೆಯಿಂದ ಬಿಡುಗಡೆ ಮಾಡುವ ಪ್ರೀತಿಯ ಗೆಳೆಯ! ಅವಿನಾಶ, ಇನ್ನೂ ಸಮಯವಿದೆ, ವಿಚಾರ ಮಾಡಿರಿ. ನನ್ನ ಕೈಯಲ್ಲಿ ಯಾವ ಭಯಂಕರ ಶಸ್ತ್ರವಿದೆಯೆಂಬುದನ್ನು ಮರೆಯಬೇಡಿರಿ ಅಂತಹ ಪ್ರಸಂಗ ಬಂದರೆ, ಆ ಶಸ್ತ್ರದ ಸಹಾಯದಿಂದ ನಿಮ್ಮ ಸುಂದರ ಸಂಸಾರದ ಬೇರನ್ನೇ ಕತ್ತರಿಸಲು ನಾನು ಹಿಂದೆಮುಂದೆ ನೋಡುವದಿಲ್ಲ. ಒಂದು ಪಾಪ ಮಾಡಿ ನೀವು ಪ್ರಗತಿಯನ್ನು ತಡೆದಿದ್ದೀರಿ ಇನ್ನೊಂದು ಪಾಪ ಮಾಡಿ ನಿಮ್ಮ ನಮ್ಮೆಲ್ಲರ ಪ್ರಗತಿಗೆ ಸಹಾಯ ಮಾಡಬೇಕು ನಿಮಗೆ ಬೇರೆ ಮಾರ್ಗವೇ ಇಲ್ಲ, ಅವಿನಾಶ!

ಅವಿನಾಶ— ಲಲಿತಾಬಾಯಿಯವರೆ, ನೀವು ಇದೀಗ ಹೇಳುತ್ತಿದ್ದಿರಿ, ಪ್ರತಿಯೊಂದು ವಸ್ತುವಿಗೆ ಬೆಲೆಯಿದೆಯೆಂದು ಹೇಳಿರಿ, ನಿಮ್ಮ ಕಾಗದ್ದ ಆ ಪತ್ರದ ಬೆಲೆಯೆಷ್ಟು? ನೀವು ಹೇಳಿದಷ್ಟು ಹಣವನ್ನು ನಗದು ಕೊಡಲಿಕ್ಕೆ ಸಿದ್ಧನಿದ್ದೇನೆ

ಲಲಿತಾ— ನೀವು ನನ್ನ ಮಾತಿನಂತೆ ನಡೆಯಲು ಸಿದ್ಧರಿದ್ದೀರೋ ಇಲ್ಲವೋ, ಎಂಬುದೊಂದೇ ಪ್ರಶ್ನೆ ಈಗ! ದುಡ್ಡಿನಿಂದ ಆ ಪತ್ರದ ಬೆಲೆಯನ್ನು ಕಟ್ಟಲಿಕ್ಕೆ ಬರಲಾರದು, ಅವಿನಾಶ!

ಅವಿನಾಶ— ಆಗಲಿ! ಈ ವಿಷಯವನ್ನು ಕುರಿತು ವಿಚಾರ ಮಾಡಲು ಸ್ವಲ್ಪ ಸಮಯ ಕೊಡಿರಿ ನಾನು ನಾಳೆ ಮಾಡಬೇಕಾದ ಭಾಷಣವನ್ನು ಮುಂದೆ ಹಾಕುತ್ತೇನೆ

ಲಲಿತಾ— ಅದು ಸಾಧ್ಯವಿಲ್ಲ ನಾಳಿನ ಭಾಷಣ ನಾಳೇ ಆಗಬೇಕು, ಅದೂ ನಾನು ಹೇಳಿದ ಹಾಗೆ ಹೊಂ ಇರಲಿ! ನಿಮ್ಮ ವಿಚಾರವೇ ಬೇರೆ ಕಾಣಿಸುತ್ತದೆ ವಿನಾಶಕಾಲೇ ವಿಪರೀತ ಬುದ್ಧಿ ಅಂತ! ನಾನೇಕೆ ವ್ಯರ್ಥ ಕಾಲಹರಣ ಮಾಡಲಿ? ನಾನಿನ್ನು ಹೊರಡುತ್ತೇನೆ. ವರ್ತಮಾನಪತ್ರಗಳಿಗಾದರೂ ಸ್ವಲ್ಪ ಸಮಯ ಸಿಗಬೇಕಲ್ಲ! [ಹೊರಡುತ್ತಾಳೆ]

ಅವಿನಾಶ— ತಡೆಯಿರಿ, ಲಲಿತಾಬಾಯಿ, ಸ್ವಲ್ಪ ತಡೆಯಿರಿ. ನೀವು ಹೇಳಿದ ಮಾತು ನನಗೆ ಮಾನ್ಯವಿದೆ ನಿಮ್ಮ ಕಂಪನಿಯ ಪರವಾಗಿ ನಾನು ನಾಳೆ ಭಾಷಣ ಮಾಡುತ್ತೇನೆ.

ಲಲಿತಾ— Thanks awfully! ನಾನು ಅಲ್ಲಿಯೇ ವ್ಹಿಜಿಟರ್ಸ ಗ್ಯಾಲರಿಯಲ್ಲಿರುತ್ತೇನೆ. ನಿಮ್ಮ ಭಾಷಣ ಮುಗಿದ ಕೂಡಲೆ ನಿಮ್ಮ ಕೈಗೆ ಆ ಪತ್ರವನ್ನು ಒಪ್ಪಿಸುತ್ತೇನೆ.

ಅವಿನಾಶ— ಆಗಲಿ, ಲಲಿತಾಬಾಯಿ! ಯಾದು ನಿಮ್ಮನ್ನು ಈ ನನ್ನ ಸೌಖ್ಯದ ಸಂಸಾರದಲ್ಲಿ ತಂದುಬಿಟ್ಟರು?

ಲಲಿತಾ-- ದೈವ, ಅವಿನಾಶ, ದೈವ!

[ಅವಿನಾಶನ ನಿಷ್ಕ್ರಮಣ]

[ಸುಧಾ ಪ್ರವೇಶಿಸುತ್ತಾಳೆ]

ಸುಧಾ--ನೀವು ಒಬ್ಬರೇ ಇದ್ದೀರಲ್ಲ, ಲಲಿತಾಬಾಯಿ? ನನಗನಿಸಿತ್ತು, ಅವಿನಾಶರೂ ಇಲ್ಲಿರಬಹುದೆಂದು.

ಲಲಿತಾ— ಅವರು ಇದೇ ಈಗ ಒಳಗಡೆ ಹೋದರು. ನಮಸ್ಕಾರ ಸುಧಾ, ನಾನು ಹೊರಡುತ್ತೇನೆ ನನ್ನ ಕೆಲಸ ಮುಗಿಯಿತು.

ಸುಧಾ— ಯಾವ ಕೆಲಸ, ಲಲಿತಾಬಾಯಿ?

ಲಲಿತಾ— ಈಗ ನಿಮಗೆ ಹೇಳಲಿಕ್ಕೆ ಯಾವ ಅಡ್ಡಿಯೂ ಇಲ್ಲ. ನೀವು "ನವಭಾರತ ಕಾರ್ಪೋರೇಶನ್" ಎಂಬ ಕಂಪನಿಯ ಹೆಸರನ್ನು ಕೇಳಿರಬಹುದು

ಸುಧಾ— ಹೌದು, ನಾಕಷ್ಟು ಕೇಳಿದ್ದೇನೆ

ಲಲಿತಾ— ಆ ಕಂಪನಿಗೆ ಸರಕಾರ ತನ್ನ ಸಹಾಯವನ್ನು ನೀಡಬೇಕೆಂದು ಅವಿನಾಶರಿಗೆ ಕೇಳಿಕೊಂಡೆ.

ಸುಧಾ--ನಿಮ್ಮ ಕೇಳಿಕೆ ಅಮಾನ್ಯವಾಗಬಹುದೆಂದು ನಿಮಗೆ ಮೊದಲೇ ತಿಳಿಯಬೇಕಾಗಿತ್ತು.

ಲಲಿತಾ— ಹಾಗಂತೂ ಆಗಲಿಲ್ಲ, ಸುಧಾಬಾಯಿ, ನನ್ನ ಪ್ರಯತ್ನ ಸಂಪೂರ್ಣ ಸಫಲವಾಯಿತು

ಸುಧಾ— ಏನು ? ನೀವೇನು ಹೇಳುತ್ತಿದ್ದೀರಿ, ಲಲಿತಾಬಾಯಿ ?

ಲಲಿತಾ—ಈ ಕಂಪನಿಯ ಬಗ್ಗೆ ಅವಿನಾಶರು ಏನೇನೊ ತಪ್ಪು ಕಲ್ಪನೆಗಳನ್ನು ಮಾಡಿಕೊಂಡಿದ್ದರು ಅವನ್ನೆಲ್ಲ ನಾನು ಸರಿಯಾಗಿ ತಿಳಿಸಿಕೊಟ್ಟ ಮೇಲೆ ಅವರು ಕಂಪನಿಗೆ ಬೆಂಬಲ ಕೊಡುವದಾಗಿ ವಚನ ಕೊಟ್ಟರು

ಸುಧಾ— ನಿಮಗೇನೋ ಭ್ರಮೆಯಾಗಿರಬೇಕು

ಲಲಿತಾ— ಹೌದು, ಭ್ರಮೆಯಾಗಿತ್ತು, ಆದರೆ ಇಲ್ಲಿ ಬಂದಮೇಲೆ ಆ ಭ್ರಮೆಯ ನಿರಸನವಾಯಿತು. ಸುಧಾಬಾಯಿ, ನಾನಿನ್ನು ಹೊರಡುತ್ತೇನೆ ನಿಮ್ಮ ಆತಿಥ್ಯಕ್ಕಾಗಿ Thanks very much ನಮಸ್ತೇ !

[ಸುಧಾ ಅವಳನ್ನು ದಿಟ್ಟಿಸಿ ನೋಡುತ್ತಿದ್ದಾಳೆ, ಲಲಿತೆ ಹೋಗುತ್ತಾಳೆ]

[ಶೇಖರನ ಪ್ರವೇಶ]

ಶೇಖರ— ಯಾಕೆ ? ನೀವು ಒಬ್ಬರೇ ನಿಂತಿದ್ದೀರಿ ?

ಸುಧಾ— ಆ ದಿಲ್ಲಿಯ ಹೆಂಗಸನ್ನು ಕಳಿಸಿಕೊಟ್ಟೆ.

ಶೇಖರ— ಹೋದಳೇನು ? ಬಹಳ ಒಳ್ಳೆಯದಾಯಿತು.

ಸುಧಾ— ನನ್ನನ್ನು ಅವಳು ಮರೆತಿರಬಹುದು. ಆದರೆ ನಾನು ಮಾತ್ರ ಅವಳನ್ನು ಪೂರಾ ಬಲ್ಲೆ

ಶೇಖರ— ಅಂತೆಯೇ ಅವಳು ನಿಮ್ಮನ್ನು ಮರೆತಂತೆ ತೋರಿಸುತ್ತಿರಬಹುದು ಅಬ್ಬಬ್ಬ ! ಬಹಳ ಧೂರ್ತಳಿದ್ದಾಳೆ ಆ ಹೆಂಗಸು ಯಾಕೆ ಬಂದಿದ್ದಳಂತೆ ಇಲ್ಲಿ? ಹೊಸ ಸೀರೆಯನ್ನು ತೋರಿಸಲಿಕ್ಕೆ ಗೆಳತಿಯರ ಮನೆಗೆ ಓಡಾಡುವ ಹೆಂಗಸಲ್ಲ ಅವಳು.

ಸುಧಾ— ನವಭಾರತ ಕಾರ್ಪೊರೇಶನ್ನದ ಸಲುವಾಗಿ ನರಕಾರದ ಮಾನ್ಯತೆಯನ್ನು ಪಡೆಯಲು ಬಂದಿದ್ದಾಳಂತೆ !

ಶೇಖರ— ಪಾಪ ! ಅದಕ್ಕಾಗಿ ಅವಿನಾಶರಿಗೆ ಹೇಳಿ ಏನು ಪ್ರಯೋಜನ ?

ಸುಧಾ— ಆದರೆ ತಾನು ಬಂದ ಕೆಲಸವಾಯಿತೆಂಬ ಭ್ರಮೆಯಾಗಿದೆ ಅವಳಿಗೆ.

ಶೇಖರ—ಇಂಥಾ ಬುದ್ಧಿಯುಳ್ಳ ಹೆಂಗಸಿಗೂ ಭ್ರಮೆಯಾಗಬೇಕೆಂದರೆ?

ಸುಧಾ— ಬುದ್ಧಿಯುಳ್ಳ ಹೆಂಗಸರೇ ಇವರು ? ತಮ್ಮ ಮರ್ಯಾದೆಯನ್ನು ಮರತು ಹೇಸಿ ಕೆಲಸವನ್ನು ಮಾಡುತ್ತ ತಿರುಗುವ ಈ ಹೆಂಗಸಿಗೆ ಬುದ್ಧಿಯೆಲ್ಲಿಯದು, ಶೇಖರ ?

ಶೇಖರ— ಅದೇನೋ ಖರೆ ! [ಗಡಿಯಾರವನ್ನು ನೋಡಿ] ಅಬ್ಬಾ ಎಂಟುಕಾಲು ! ನಾನಿನ್ನು ಹೊರಡಲೇಬೇಕು

[ಅವಿನಾಶನ ಪ್ರವೇಶ]

ಅವಿನಾಶ— ಶೇಖರ, ಹೊರಟೇಬಿಟ್ಟೆಯಲ್ಲ ! ಇಷ್ಟೇಕೆ ಗಡಿಬಿಡಿ ?

ಶೇಖರ—ನಾಳೆ ಹಾಯಕೋರ್ಟಿನಲ್ಲಿ ಕಾಕಾಸಾಹೇಬರ ಒಂದು ಮಹತ್ವದ ಕೇಸಿದೆ. ಈಗ ಹೋಗಿ ಎಲ್ಲಾ ಸಿದ್ಧತೆ ಮಾಡಬೇಕು. ತಂದೆಗೆ ನಾನೆಷ್ಟು ವಿಧೇಯನಾಗಿದ್ದೇನೆಂಬುದನ್ನು ತೋರಿಸಿಕೊಡುತ್ತೇನೆ

ಅವಿನಾಶ— ಹಾಃ ಹಾಃ, ಹೋಗು, ಹೋಗು, ನಾಳೆ ಮಾತ್ರ ಸ್ವಲ್ಪ ಹೊತ್ತು ಬಂದುಹೋಗು, ಮರೆಯಬೇಡ !

ಶೇಖರ—ಅಚ್ಛಾ, ನಮಸ್ತೇ ! [ಶೇಖರ ಹೋಗುತ್ತಾನೆ. ಕೆಲ ಹೊತ್ತು ಅವಿನಾಶ ಮತ್ತು ಸುಧಾ ಗಂಭೀರರಾಗಿ ನಿಂತುಕೊಳ್ಳುತ್ತಾರೆ]

ಸುಧಾ— ಅವಿನಾಶ, ನಿಮಗೊಂದು ಮಾತು ಕೇಳಬೇಕಾಗಿದೆ, ಕೇಳಲೆ ?

ಅವಿನಾಶ— ಕೇಳು, ಅದಕ್ಕೇನು ? ನನ್ನೊಡನೆ ಮಾತನಾಡಲು ನನ್ನ ಅನುಮತಿ ಯಾತಕ್ಕೆ ಬೇಕು ?

ಸುಧಾ— ನವಭಾರತ ಕಾರ್ಪೊರೇಶನ್ನಿಗೆ ನೀವು ಬೆಂಬಲ ಕೊಡುವವರಂತೆ ! ಹೌದೇ ?

ಅವಿನಾಶ— ನಿನಗ್ಯಾರು ಹೇಳಿದರು ?

ಸುಧಾ— ಲಲಿತಾಬಾಯಿ

ಅವಿನಾಶ-- ಲಲಿತಾಬಾಯಿ ? [ಸುಮ್ಮನೆ ಕುಳಿತುಕೊಳ್ಳುತ್ತಾನೆ]

ಸುಧಾ— ಅವಿನಾಶ, ನಿನಗೆ ಆ ಹೆಂಗಸಿನ ಪರಿಚಯವಿಲ್ಲ. ನನಗೆ ಮಾತ್ರ ಅವಳ ಸ್ವಭಾವವೆಲ್ಲ ಗೊತ್ತಿದೆ ಸಣ್ಣವರಿದ್ದಾಗ ನಾನೂ ಅವಳೂ ಒಂದೇ ಶಾಲೆಯಲ್ಲಿ, ಒಂದೇ ವರ್ಗದಲ್ಲಿ ಕಲಿಯುತ್ತಿದ್ದೆವು ಸುಳ್ಳು ಹೇಳು ವುದರಲ್ಲಿ, ಗೆಳತಿಯರಿಗೆ ಮೋಸಮಾಡುವುದರಲ್ಲಿ, ಅವಳ ಕೈ ಹಿಡಿವವರು ಯಾರೂ ಇರಲಿಲ್ಲ ಕಳ್ಳತನದಲ್ಲಿ ಅವಳು ಪಾರಂಗತಳಾಗಿದ್ದಳು ಆದರೆ ಒಮ್ಮೆ ಅವಳ ಕಳ್ಳತನ ಹೊರಬಿತ್ತು ಅವಳನ್ನು ಸಾಲೆಯಿಂದ ಹೊರಗೆ ಹಾಕಿದರು ಅಂಥಾ ಹೆಂಗಸು ನಮ್ಮ ಮನೆಯಲ್ಲಿ ಕಾಲಿಕ್ಕಬಾರದು, ಅವಿನಾಶ!

ಅವಿನಾಶ— ಸುಧಾ, ಚಿಕ್ಕಮಕ್ಕಳು ಇಂಥಾ ಮಾತನ್ನು ಹೇಳಬೇಕು ಶಾಲೆಯಲ್ಲಿ ಅವಳು ಏನೋ ತಪ್ಪು ಮಾಡಿರಬಹುದು ಆದರೆ ಈಗ ಇಷ್ಟು ವರ್ಷಗಳಾದ ಮೇಲೆಯೂ ಅವಳ ಸ್ವಭಾವದಲ್ಲ ಯಾವ ಬದಲಾವಣೆಯೂ ಆಗಿಲ್ಲವೆಂದು ನಾವು ಹೇಳಬಹುದೆ ? ಹಿಂದೆ ಎಂದೋ ಮಾಡಿದ ತಪ್ಪಿಗಾಗಿ ಇಂದು ನಾವು ಅವಳನ್ನು ಶಿಕ್ಷಿಸಬಹುದೆ ? ಮನುಷ್ಯನ ಸ್ವಭಾವವನ್ನು ಅವನ ಗತಕಾಲದ ದೋಷಗಳಿಂದ ಅಳೆಯಬಾರದು, ಸುಧಾ !

ಸುಧಾ— ಅದೇಕೆ? ಗತಕಾಲವೆ ಮನುಷ್ಯಸ್ವಭಾವದ ತಳಹದಿ. ಅದೇ ಸ್ವಭಾವವನ್ನು ತಿಳಿದುಕೊಳ್ಳುವ ಯೋಗ್ಯವಾದ ಸಾಧನ

ಅವಿನಾಶ— ಇದು ಬಹಳ ಕಠೋರವಾದ ತತ್ವ, ಸುಧಾ !

ಸುಧಾ— ಕಠೋರವಾಗಿದ್ದರೂ ಸತ್ಯವಾಗಿದೆ! ಅವಿನಾಶ, ನಿನ್ನ ಇಂದಿನ ಮಾತುಗಳನ್ನು ಕೇಳಿ ನನಗೆ ಆಶ್ಚರ್ಯವಾಗುತ್ತಿದೆ. ನಿನಗೇನಾಗಿದೆ ಈ ಹೊತ್ತು, ಅವಿನಾಶ ? ಲಲಿತಾ ಹೇಳುತ್ತಿದ್ದುದು ನಿಜವೆ ? ಅದು ಸುಳ್ಳೆಂದು ಹೇಳು, ಅವಿನಾಶ, ಸುಳ್ಳೆಂದು ಹೇಳು

ಅವಿನಾಶ— ನವಭಾರತ ಕಾರ್ಪೊರೇಶನ್ನದ ಬಗ್ಗೆ ನಾನು ಮಾಡಿಕೊಂಡ ಕಲ್ಪನೆ ತಪ್ಪಾಗಿತ್ತು, ಸುಧಾ !

ಸುಧಾ— ತಪ್ಪಾಗಿತ್ತು ? ಅಂದರೆ- ಲಲಿತಾ ಬರುವ ಮೊದಲು--ಈಗ ಎರಡು ತಾಸು ಕೂಡ ಆಗಿಲ್ಲ— ನೀನೇ ನನಗೆ ಸ್ಪಷ್ಟವಾಗಿ ಹೇಳಿದ್ದೆ— ಆ ಕಾರ್ಪೊರೇಶನ್ನು ಕಳ್ಳರ ಒಂದು ಸಂಸ್ಥೆಯೆಂದು.

ಅವಿನಾಶ-- ಹೌದು, ಹಾಗೆ ಹೇಳಿದ್ದೆ. ಆದರೆ ಈಗ ಮಾತ್ರ ನನಗೆ ಹಾಗೆ ಅನಿಸುವದಿಲ್ಲ.

ಸುಧಾ— ನಿನ್ನ ಮತಗಳಲ್ಲಿ ಹೀಗೆ ಕ್ಷಣಕ್ಷಣಕ್ಕೆ ಬದಲಾವಣೆಯಾಗ ಬಹುದೆಂದು ನನಗನಿಸಿರಲಿಲ್ಲ

ಅವಿನಾಶ— ರಾಜಕಾರಣದಲ್ಲಿದ್ದವರಿಗೆ ಅಂಥ ಪ್ರಸಂಗಗಳು ಬಂದೇ ಬರುತ್ತವೆ. ಸುಧಾ, ಪ್ರಸಂಗಕ್ಕೆ ತಕ್ಕಂತೆ ಮತಗಳನ್ನು ಬದಲಿಸದೆ ಹೋದರೆ, ರಾಜಕಾರಣದಲ್ಲಿ ನಾವು ಬಹಳ ಹೊತ್ತು ತಡೆದು ನಿಲ್ಲುವದೇ ಸಾಧ್ಯವಿಲ್ಲ

ಸುಧಾ — ನಾನೇನು ಕೇಳುತ್ತಿದ್ದೇನೆ ? ಅವಿನಾಶ, ನಮಗೆ ಇಂತಹ ರಾಜಕಾರಣದ ಆವಶ್ಯಕತೆಯಿಲ್ಲ ಸತ್ಯನೀತಿಗಳ ಅಧಿಷ್ಠಾನವಿಲ್ಲದ ರಾಜ ಕಾರಣ ನಮಗೆ ಬೇಕಾಗಿಲ್ಲವೆಂದು ನೀನೇ ಹೇಳುತ್ತಿದ್ದೆಯಲ್ಲ! ನೈತಿಕ ರಾಜ ಕಾರಣವೇ ಭಾರತದ ವೈಶಿಷ್ಟ್ಯವೆಂದು ನೀನು ಸಾರಿ ಹೇಳಿದ್ದನ್ನು ನಾನು ಎಷ್ಟು ಸಲ ಕೇಳಿಲ್ಲ? ಒಂದೇ ಒಂದು ಗಂಟೆಯಲ್ಲಿ ನಿನ್ನೊಳಗೆ ಎಷ್ಟು ಬದ ಲಾವಣೆಯಾಗಿದೆ, ಅವಿನಾಶ ?

ಅವಿನಾಶ— ಸುಧಾ, ಪರಿಸ್ಥಿತಿಯ ಎದುರಿಗೆ ಎಂಥವನಿಗೂ ಬಾಗ ಬೇಕಾಗುತ್ತದೆ

ಸುಧಾ— ಪರಿಸ್ಥಿತಿ ? ಎಂತಹ ಪರಿಸ್ಥಿತಿ? ನನಗಂತೂ ನಿನ್ನ ಮಾತಿನ ಅರ್ಥವೇ ಆಗಲೊಲ್ಲದು. ನಮಗೇನಾಗಬೇಕಾಗಿದೆ, ನಾವೇಕ ಈ ದೈನ್ಯ ವನ್ನು ತೋರಿಸಬೇಕು ? ನಾವು ಯಾವ ಪರಿಸ್ಥಿತಿಯ ಸಲುವಾಗಿ ಸತ್ಯವನ್ನು ಬಿಡಬೇಕು ? ಗುಣ್ಣೇ ? ನಮಗೆ ದುಡ್ಡಿನ ಆವಶ್ಯಕತೆಯೇನಿದೆ ? ಆವಶ್ಯಕತೆ ಯಿದ್ದರೂ ಅನೀತಿ ಮಾರ್ಗದಿಂದ ಗಳಿಸಿದ ಒಂದು ಕಾಸೂ ನಮಗೆ ಬೇಡ ನಮಗೆ ದೇವರ ದಯೆಯಿಂದ ಯಾವ ಕೊರತೆಯೂ ಇಲ್ಲ. ಹಣ, ಕೀರ್ತಿ, ಅಧಿಕಾರ—ಇವೆಲ್ಲವೂ ನಮಗೆ ದೊರಕಿವೆ. ನಾವು ಅದರ ದುರುಪಯೋಗ ಮಾಡಬಾರದು. ಅವಿನಾಶ, ನೀನಂತೂ ಜನತೆಯ ಮುಂದಾಳುವೆಂದು ಸಮಾ ಜದ ವಿಶ್ವಾಸ ಗಳಿಸಿರುವೆ. ನೀನು ಅವರ ವಿಶ್ವಾಸಘಾತ ಮಾಡುವೆಯಾ ?

ಅವಿನಾಶ—ಸಣ್ಣಪುಟ್ಟ ಮಾತಿಗೆ ಎಷ್ಟು ಭಯಂಕರ ಸ್ವರೂಪ ಕೊಡು ತ್ತಿರುವೆ, ಸುಧಾ.

ಸುಧಾ— ನಿಮ್ಮ ಜೀವನದಲ್ಲಿ ಸಣ್ಣದೆಂಬುವ ಮಾತೇ ಇಲ್ಲ, ಅವಿ ನಾಶ! ಸಮಾಜದ ನಾಯಕರೆಂದು ಹೆಸರು ಪಡೆದವರು ಯಾವ ಕಾರಣ

ಕ್ಕಾದರೂ ತತ್ವವನ್ನು ಬಿಡಕೂಡದು. ನಿನ್ನ ಜೀವನ ಇತರರ ಹಾಗಲ್ಲ. ಅಲ್ಲಿ ಕೀಳುತನಕ್ಕೆ ಯಾವ ಸ್ಥಾನವೂ ಇಲ್ಲ. ಒಮ್ಮೊಮ್ಮೆ ಕೆಲವರಿಗೆ ಹಿಂದೆ ಮಾಡಿದ ಪಾಪವನ್ನು ಮುಚ್ಚಿಕೊಳ್ಳುವದಕ್ಕಾಗಿ, ಇಂದು ತಮ್ಮ ತತ್ವದ ಬೆಲೆಯನ್ನು ಕೊಡಬೇಕಾಗುತ್ತದೆ ಒಂದು ಪಾಪವನ್ನು ಮುಚ್ಚುವದಕ್ಕಾಗಿ ಅನೇಕ ಪಾಪ ಗಳನ್ನು ಮಾಡಬೇಕಾಗುತ್ತದೆ. ಆದರೆ ನಿನ್ನ ಮಾತು ಬೇರೆ, ಅವಿನಾಶ!

ಅವಿನಾಶ— ಸುಧಾ!

ಸುಧಾ-- ಅಂತಹ ಕೀಳು ಕೆಲಸವನ್ನು ನೀನು ಮಾಡಿದ್ದೀಯಾ? ಒಂದು ವೇಳೆ ನೀನು ಹಾಗೆ ಮಾಡಿದ್ದರೆ--?

ಅವಿನಾಶ— ಹಾಗೆ ನಾನು ಮಾಡಿದ್ದರೆ ಏನು ಸುಧಾ?—ಹೇಳು

ಸುಧಾ—ಅಂತಹ ಪಾಪದಿಂದ ನಿನ್ನ ಜೀವನ ಕಲುಷಿತವಾಗಿದ್ದರೆ— [ಕಣ್ಣಿಗೆ ನೀರು ಬರುತ್ತವೆ] ಅಯ್ಯೋ ಅವಿನಾಶ, ನಾನು ಈ ಮನೆಯಲ್ಲಿ ಇರಲಾರೆ!

ಅವಿನಾಶ— ಸುಧಾ, ನಿನ್ನಿಂದ ಬಚ್ಚಿಡುವಂಥ ಪಾಪವನ್ನು ನಾನು ಮಾಡಿಲ್ಲ

ಸುಧಾ— ಮಾಡಿಲ್ಲವೆ? ಹೌದು, ನನಗೆ ಗೊತ್ತಿತ್ತು ನನ್ನ ಪೂಜೆಯ ದೇವರು ಖೊಟ್ಟಿ ದೇವರಲ್ಲವೆಂದು ನನಗೆ ಗೊತ್ತಿತ್ತು ಅವಿನಾಶ ಈಗ ನನ ಗೆಷ್ಟು ಆನಂದವಾಗಿದೆ? ನನ್ನನ್ನು ಪರೀಕ್ಷಿಸಬೇಕೆಂದು ನೀವು ಏನೇನೋ ಎಷ್ಟೊತ್ತಿನ ವರೆಗೆ ಮಾತಾಡುತ್ತಿದ್ದಿರಲ್ಲ. ನಿಮ್ಮ ದಿವ್ಯ ವ್ಯಕ್ತಿತ್ವದ ದಾಸಿ ನಾನು, ಅವಿನಾಶ!

ಅವಿನಾಶ— ನನ್ನ ಮೇಲಿರುವ ನಿನ್ನ ಪ್ರೇಮ ಎಂದಿಗೂ ಕಡಿಮೆ ಯಾಗದಿರಲಿ, ಸುಧಾ

ಸುಧಾ— ನೀವು ಆ ಹೆಂಗಸಿಗೆ ಏನು ಮಾತು ಕೊಟ್ಟಿದ್ದೀರೋ, ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ನೀವು ಈಗಿಂದೀಗ ತಿಳಿಸಿಬಿಡಿರಿ.

ಅವಿನಾಶ— ಈಗ, ಇಷ್ಟು ರಾತ್ರಿಯಲ್ಲಿ? ನಾಳೆ ಮುಂಜಾನೆ ನಾನೇ ಸಮಕ್ಷಮ ಭೆಟ್ಟಿಯಾಗಿ ಅವಳಿಗೆ—

ಸುಧಾ— ಇನ್ನುಮೇಲೆ ಅವಳ ಅಪವಿತ್ರ ದರ್ಶನ ಬೇಡ. ಹಿಡಿಯಿರಿ ಈ ಪೆನ್ನು, ಈ ಕಾಗದ. ಅವಳಿಗೆ ಈಗಿಂದೀಗ ತಿಳಿಸಿಬಿಡೋಣ. ನಾನು

ಕಾಸೀಮನನ್ನು ಅವಳಿದ್ದಲ್ಲಿಗೆ ಕಳಿಸಿಕೊಡುತ್ತೇನೆ. ಅನೀತಿಯಿಂದ ನಿಮ್ಮನ್ನು ಜಯಿಸಿರುವೆನೆಂಬ ಅವಳ ಅಟ್ಟಹಾಸ ಬಹಳಹೊತ್ತು ನಿಲ್ಲಬಾರದು ಕೊನೆಗೆ ಸತ್ಯ, ಶೀಲಗಳಿಗೆ ವಿಜಯ ಕಟ್ಟಿಟ್ಟದ್ದು—ಎಂಬ ಮಾತು ಅವಳಿಗೆ ಗೊತ್ತಾಗಲಿ!

[ಅವಿನಾಶ ಪತ್ರ ಬರೆಯುತ್ತಾನೆ ಸುಧಾ ಅದನ್ನು ಓದಿ, ಕಪ್ಪರಿನಲ್ಲಿ ಹಾಕಿ, ಮೇಲೆ ವಿಳಾಸ ಬರೆದು]

ಕಾಸೀಮ! [ಸೇವಕ ಬರುತ್ತಾನೆ] ಕಾಸೀಮ, ಈ ಪತ್ರವನ್ನು ಈಗಿಂದೀಗ ಲಲಿತಾಬಾಯಿಯವರಿಗೆ ಒಯ್ದು ಕೊಡಬೇಕು ಉತ್ತರ ಬೇಕಾಗಿಲ್ಲ. [ಸೇವಕ ಹೋಗುತ್ತಾನೆ]

[ಸ್ವಲ್ಪ ಹೊತ್ತು ಮೌನ]

ಸುಧಾ— ನನ್ನ ಮನಸ್ಸು ಈಗ ಶಾಂತವಾಯಿತು ನಮ್ಮ ಹೆಂಗಸರ ಕೈಯಲ್ಲಿ ಇದಕ್ಕೂ ಹೆಚ್ಚು ಇರುವುದಾದರೂ ಏನು ? ಹೆಂಗಸರೇ ಮನೆಯ ಮಾಂಗಲ್ಯವನ್ನು ಕಾಯಬೇಕು ನಮ್ಮ ಪತಿದೇವರ ಪಾವಿತ್ರ್ಯ ಉಳಿಯುವಂತೆ ನಾವು ಮಾಡಿದರೆ, ನಮ್ಮ ಜೀವನ ಸಾರ್ಥಕವಾದಂತೆ ! ಅವಿನಾಶ, ನಿನ್ನ ಹಿರಿಮೆಯ ಕಲ್ಪನೆ ನಿನಗಿಲ್ಲ ನಿನ್ನ ಸೇವಾವೃತ್ತಿ, ಸತ್ಯನಿಷ್ಠೆ ಇವುಗಳಿಂದ ನಮ್ಮ ಪ್ರಾಂತದ ರಾಜಕಾರಣವೇ ಉದಾತ್ತವಾಗಿದೆ ಅಂತೆಯೇ ನಾನು ನಿನ್ನನ್ನು ಪ್ರೀತಿಸುತ್ತೇನೆ, ಅವಿನಾಶ ! ನನ್ನ ಪ್ರೇಮದ ಪೂಜೆಗೆ ನಿನ್ನ ಪಾವಿತ್ರ್ಯವೇ ದೇವರು !

ಅವಿನಾಶ— ಸುಧಾ, ನನಗೆ ನಿನ್ನ ಪೂಜೆ ಬೇಡ, ನಿನ್ನ ಪ್ರೀತಿ ಬೇಕು !

ಸುಧಾ— ಪೂಜೆಯಿಲ್ಲದ ಪ್ರೀತಿ ಹೆಂಗಸಿಗೆ ಸಾಧ್ಯವಿಲ್ಲ, ಅವಿನಾಶ!

ಅವಿನಾಶ-- ನಾನು ದುರ್ಬಲನೆಂದು ತಿಳಿದು, ನಿನ್ನ ಪ್ರೀತಿಯ ಬಲವನ್ನು ನನಗೆ ಕೊಡು, ಸುಧಾ ! ಈ ರೋಗಜರ್ಜರಿತನಾದ ನನಗೆ ನಿನ್ನ ಸ್ನೇಹದ ಶುಶ್ರೂಷೆ ಬೇಕಾಗಿದೆ.

ಸುಧಾ— ನೀನು ಹಾಗೇಕೆ ನಿನ್ನನ್ನು ಹೀನನೆಂದು ತಿಳಿಯಬೇಕು ? ನಿನ್ನ ವ್ಯಕ್ತಿಮತ್ವ ನಿಜವಾಗಿಯೂ ಅಗಾಧವಾಗಿದೆ, ಅವಿನಾಶ ! ಅದರ ಪೂಜೆ ಮಾಡುವ ಸೌಭಾಗ್ಯ ನನಗೆ ದೊರೆತಿದೆಯೆಂದು ನಾನು ಸಂತುಷ್ಟಳಾಗಿದ್ದೇನೆ.

ಅವಿನಾಶ— ಸುಧಾ, ನಿನ್ನ ಪ್ರೀತಿಯ ಕವಚ ನನಗಿದ್ದರೆ, ನಾನು ಯಾವ ಸಂಕಟವನ್ನೂ ಎದುರಿಸಬಲ್ಲೆ ನಾನು ತಪ್ಪಿದರೆ, ಬಿದ್ದರೆ, ಜಾರಿ

ದರೆ, ನಿನ್ನ ಪ್ರೀತಿಯ ಊರುಗೋಲು ನನಗಿರಬೇಕು ಅದನ್ನು ನನ್ನ ಕೈಯೊಳ ಗಿಂದ ಎಂದಿಗೂ ಕಸಿದುಕೊಳ್ಳಬೇಡ, ಸುಧಾ !

ಸುಧಾ— ಹಾಗೇಕೆ ಹೇಳುತ್ತೀ, ಅವಿನಾಶ? ನನ್ನ ಜೀವನವೇ ನಿನ್ನ ದಾಗಿದೆ ನಾನು ಯಾವ ಕಾಲದಲ್ಲಿಯೂ ನಿನ್ನ ಹತ್ತಿರವೇ ಇರುತ್ತೇನೆ. ನಾನು ಹಳೆಯ ಕಾಲದ ಹೆಂಗಸಲ್ಲ, ನಾನೆಂದಿಗೂ ವಟಸಾವಿತ್ರಿಯ ವ್ರತವನ್ನು ಮಾಡಲಿಲ್ಲ. ಆದರೂ ನೀನೇ ನನ್ನ ಜನ್ಮಜನ್ಮಾಂತರದ ಪತಿಯಾಗಬೇಕೆಂದು ದೇವರಿಗೆ ಬೇಡಿಕೊಂಡಿದ್ದೇನೆ

ಅವಿನಾಶ-- [ತನ್ನ ತಲೆಯನ್ನು ಕೈಯಿಂದ ಹಿಡಿದುಕೊಳ್ಳುತ್ತಾನೆ]

ಸುಧಾ— ಅವಿನಾಶ, ನಿನ್ನ ಮನಸ್ಸಿಗೆ ಇಂದು ಬಹಳ ತ್ರಾಸಾಗಿದೆ ನೀನು ಇಲ್ಲಿಯೇ ಸ್ವಲ್ಪ ಹೊತ್ತು ವಿಶ್ರಮಿಸು ನಾನು ಒಳಗೆ ಹೋಗಿ ಊಟದ ವ್ಯವಸ್ಥೆ ಮಾಡುತ್ತೇನೆ.

ಅವಿನಾಶ— ಹೂಂ

[ಸುಧಾ ಹೋಗುತ್ತಾಳೆ]

ಅವಿನಾಶ— ಕಾಸೀಮ, ಕಾಸೀಮ, [ಯಾರೂ ಬರುವದಿಲ್ಲ] ಈ ದೀಪಗಳನ್ನು ಆರಿಸಿಬಿಡು, ಕಾಸೀಮ, ಎಲ್ಲಾ ದೀಪಗಳನ್ನು ಆರಿಸಿಬಿಡು

[ತಾನೇ ದೀಪವನ್ನು ಆರಿಸಿ, ತಲೆಯನ್ನು ಕೈಯಲ್ಲ ಹಿಡಿದುಕೊಂಡು ಕೋಚಿನ ಮೇಲೆ ಕೂತುಕೊಳ್ಳುತ್ತಾನೆ].

— ತೆರೆ —

ಪ್ರವೇಶ ೨

[ಅವಿನಾಶನ ದಿವಾನಖಾನೆ. ಅವಿನಾಶ, ಶೇಖರ ಮಾತಾಡುತ್ತ ಕುಳಿತುಕೊಂಡಿದ್ದಾರೆ.]

ಶೇಖರ— ನಿನ್ನ ಮಾತು ಕೇಳಿ ನಾನಂತೂ ಆಶ್ಚರ್ಯಚಕಿತನಾಗಿದ್ದೇನೆ. ಈ ಮೊದಲೇ ಈ ವಿಷಯವನ್ನು ನೀನು ಸುಧಾತಾಯಿಗೆ ತಿಳಿಸಬೇಕಾಗಿತ್ತು. ನನಗನಿಸುವ ಮಟ್ಟಿಗೆ ಹೆಂಡತಿಯಿಂದ ಗಂಡ ಏನನ್ನೂ ಬಚ್ಚಿಡಬಾರದು. ಯಾಕಂದರೆ ಆ ಗುಟ್ಟು ಎಂದಾದರೂ ಹೊರಗೆ ಬಿದ್ದೇಬೀಳುತ್ತದೆ.

ಅವಿನಾಶ— ಸುಧೆಗೆ ಈ ವಿಷಯವನ್ನು ಹೇಗೆ ತಿಳಿಸಲಿ, ಶೇಖರ? ಅವಳಿಗೆ ಈ ಮಾತು ಗೊತ್ತಾದರೆ ಅವಳು ನನ್ನ ಹತ್ತಿರ ಒಂದು ಕ್ಷಣವೂ ಉಳಿಯಲಿಕ್ಕಿಲ್ಲ. ನಾನೊಬ್ಬ ಹೀನ ಪಾಪಿಯಾಗಿದ್ದೇನೆಂದು ಅವಳಿಗೆ ಗೊತ್ತಾದರೆ ಆ ಮಂಗಲದೇವತೆ ನನ್ನನ್ನು ಮುಟ್ಟಲಿಕ್ಕೂ ಹೇಸಬಹುದು.

ಶೇಖರ— ಅಂದರೆ, ನಿನ್ನ ಹೆಂಡತಿ ಅಷ್ಟು ಪವಿತ್ರಳೇನು? ಯಾವ ಪಾಪವನ್ನೂ ಅರಿಯದ ಮುಗ್ಧ ದೇವತೆಯಾಗಿದ್ದಾಳೇನವಳು?

ಅವಿನಾಶ — ಹೌದು. ಶೇಖರ, ಯಾವ ಕುಂದುಕೊರತೆಗಳನ್ನೂ ಅರಿಯದ ಚಾರಿತ್ರ್ಯ ಅವಳದಾಗಿದೆ.

ಶೇಖರ— ಇಂಥ ಹೆಂಡತಿಯನ್ನು ಮಾಡಿಕೊಂಡ ನಿನ್ನ ದುರ್ದೈವಕ್ಕೆ ಮಿತಿಯೇ ಇಲ್ಲ. ಭಾರ್ಯಾ ರೂಪವತೀ ಶತ್ರುಃ ಅಂತ ಹೇಳುತ್ತಾರೆ. ಆದರೆ ಅದನ್ನು ಬದಲಿಸಿ, ಭಾರ್ಯಾ ಗುಣವತೀ ಶತ್ರುಃ ಎಂದು ಹೇಳಿದರೆ ಹೆಚ್ಚು ಯೋಗ್ಯವಾದೀತು.

ಅವಿನಾಶ— ನಿನ್ನ ಸಾಮಾನ್ಯ ತತ್ತ್ವಗಳನ್ನೂ ಕೇಳುವ ಮನಸ್ಥಿತಿಯಲ್ಲಿ ನಾನಿಲ್ಲ ಶೇಖರ!

ಶೇಖರ— I am very sorry, ಅವಿನಾಶ! ನನಗಂತೂ ಏನೂ ತೋಚದಂತಾಗಿದೆ. ನೀನು ಮದುವೆಯಾಗುವ ಪೂರ್ವದ ನಿನ್ನ ಪೂರ್ವಚರಿತ್ರೆಯನ್ನು ನಿನ್ನ ಹೆಂಡತಿಗೆ ಹೇಳಿದ್ದರೆ—

ಅವಿನಾಶ— ಅವಳು ನನ್ನ ಹೆಂಡತಿಯಾಗುತ್ತಿರಲಿಲ್ಲ. ಸುಧೆಯ ಪ್ರೀತಿಯನ್ನು ಪಡೆಯುವದು ನನ್ನ ಜೀವನದ ಹಿರಿಯ ಗುರಿಯಾಗಿತ್ತು. ನಾನು

ಅದನ್ನು ಕಳೆದುಕೊಂಡಿದ್ದರೆ, ನನ್ನ ಸಂಸಾರದ ಸುಂದರ ಸ್ವಪ್ನಗಳೆಲ್ಲ ಸತ್ತು ಹೋಗುತ್ತಿದ್ದವು ನನ್ನ ಪೂರ್ವಚರಿತ್ರೆಯಲ್ಲಿ ನಡುಗಿದ ಈ ಪಾಪವನ್ನು ಅವಳಿಗೆ ಬಿಚ್ಚಿ ತೋರಿಸುವ ಧೈರ್ಯ ನನ್ನಲ್ಲಿ ಇರಲಿಲ್ಲ

ಶೇಖರ— ಸಮಾಜದ ದೃಷ್ಟಿಯಿಂದ ನಿನ್ನ ಅಭಿವೃದ್ಧಿಯ ಉಗಮ ಹೀನವಾಗಿದೆಯೆಂಬುದರಲ್ಲಿ ಸಂಶಯವಿಲ್ಲ.

ಅವಿನಾಶ— ಸಮಾಜದ ದೃಷ್ಟಿಯಿಂದ ?— ಹುಂ ! ಹಗಲಿರುಳೂ ಪಾಪವನ್ನು ಮಾಡುತ್ತಿರುವ, ಸದ್ಭಾವನೆಗಳನ್ನೆಲ್ಲ ಕ್ಷಣಕ್ಷಣಕ್ಕೂ ಕಾಲಕೆಳಗೆ ತುಳಿಯುತ್ತಿರುವ, ಸ್ವಾರ್ಥವೇ ಸರ್ವಸ್ವವಾಗಿರುವ ನಮ್ಮ ಸಮಾಜಕ್ಕೆ ನನ್ನನ್ನು ದಂಡಿಸುವ ಅಧಿಕಾರವಿಲ್ಲ, ಶೇಖರ! ನನ್ನ ಜೀವನವನ್ನು ಖಂಡಿಸುವ ಚಾರಿತ್ರ್ಯ ಅದಕ್ಕಿಲ್ಲ. ನಾನಂತೂ ಅದನ್ನು ಒಪ್ಪುವದಿಲ್ಲ.

ಶೇಖರ— ಸಮಾಜದಲ್ಲಿದ್ದು ಸಮಾಜವನ್ನು ಉಲ್ಲಂಘಿಸಬಹುದೆ ? ನಿನ ಗಂತೂ ಇದು ಸಾಧ್ಯವಿಲ್ಲ ನಿನ್ನ ಕೀರ್ತಿಯೆಂಬುದು ಸಮಾಜದ ಒಂದು ದಿನಾರಸು ಪತ್ರ ! ಅದರ ಮೇಲೆಯೇ ನಿನ್ನ ಸಂಸಾರ ನಿಂತಿದೆ ಅದು ಹೋದ ಕ್ಷಣಕ್ಕೆ ನಿನ್ನ ಸಂಸಾರವೆಲ್ಲ ರಸಾತಳಕ್ಕೆ ಇಳಿದುಬಿಡಬಹುದು

ಅವಿನಾಶ— ನಾನು ಮಾಡಿದ ಕ್ಷುಲ್ಲಕ ತಪ್ಪಿಗೆ ಈ ಕಠೋರ ಶಿಕ್ಷೆಯೇ! ನಾನು ಯಾರಿಗೆ ಮೋಸಮಾಡಿದ್ದೇನೆ, ಯಾರ ಬಾಳುವೆಯನ್ನು ಹಾಳುಗೆಡಹಿ ದ್ದೇನೆಂದು ನನಗೀ ಶಿಕ್ಷೆ ಶೇಖರ ?

ಶೇಖರ— ನಿನ್ನ ಬಾಳುವೆಯನ್ನು ನೀನು ಹಾಳುಮಾಡಿರುವೆ, ಅವಿ ನಾಶ !

ಅವಿನಾಶ— ಹೌದು, ಅದೇನೋ ನಿಜ ! ಆದರ ನನ್ನ ಹಾಗೆ ಅನೇ ಕರು ಮಾಡುತ್ತಾರೆ ಒಂದು ದಿವಸ ನಾನು ಸರಕಾರದ ಗುಪ್ತ ಕಾಗದಪತ್ರ ಗಳನ್ನು ನೋಡಿದೆ, ಅದನ್ನೇ ನನ್ನ ಲಾಭಕ್ಕಾಗಿ ಉಪಯೋಗಿಸಿದೆ. ಪ್ರತಿ ಯೊಬ್ಬ ವ್ಯಕ್ತಿಯ ವೈಭವದ ಮಂದಿರವೂ ಇಂಥ ರಹಸ್ಯಗಳ ಮೇಲೆ ನಿಂತಿರು ತ್ತದೆ

ಶೇಖರ-- ಆದರೆ, ಅವಿನಾಶ, ಆ ರಹಸ್ಯದ ಭೂತ ನಾವು ಸಾಯುವ ವರೆಗೆ ನಮ್ಮ ಬೆನ್ನಟ್ಟಿ ಬರುತ್ತದೆ.

ಅವಿನಾಶ— [ಅತ್ತಿತ್ತ ತಿರುಗಾಡುತ್ತ] ಶೇಖರ, ಹನ್ನೆರಡು ವರ್ಷಕ್ಕಿಂತ ಪೂರ್ವದಲ್ಲಿ, ತಾರುಣ್ಯದ ರಕ್ತ ನಾಡಿಗಳಲ್ಲಿ ಕುದಿಯುತ್ತಿರುವಾಗ, ನಾವು ಯಾವುದಾದರೊಂದು ತಪ್ಪು ಮಾಡಿದರೆ, ಅದರಿಂದ ನಮ್ಮ ಸಂಪೂರ್ಣ ಜೀವನವೇ ಕಲಂಕಿತವಾಗಬಹುದೆ? ನಾನು ಕಳ್ಳತನ ಮಾಡಿದ್ದರೆ ನನಗೆ ಒಂದೆರಡು ತಿಂಗಳು ಶಿಕ್ಷೆಯಾಗಬಹುದಾಗಿತ್ತು. ಆಮೇಲೆ ಮತ್ತೆ ನಾನು ನನ್ನ ಸಂಸಾರವನ್ನು ಹೂಡಬಹುದಾಗಿತ್ತು. ಆದರೆ ನಾನು ಮಾಡಿದ ತಪ್ಪಿಗೆ ನನ್ನ ಸಂಸಾರವೆಲ್ಲ ಹಾಳಾಗತೊಡಗಿದೆ. ಇದಕ್ಕೆ ನಾವು ನ್ಯಾಯವೆಂದು ಕರೆಯಬಹುದೆ?

ಶೇಖರ— ಈ ಜಗತ್ತಿನಲ್ಲಿ ನ್ಯಾಯಕ್ಕೆ ಸ್ಥಾನವಿಲ್ಲ. ಅನ್ಯಾಯವೇ ನಮ್ಮ ಸಮಾಜದ ಸಿಂಹಾಸನವಾಗಿದೆ.

ಅವಿನಾಶ— ಇದೇ ಸಮಾಜದಲ್ಲಿ ನನಗೆ ಯಶಸ್ಸನ್ನು ಪಡೆಯಬೇಕಾಗಿತ್ತು ಶೇಖರ! ಅಂತೆಯೇ ಇಂದಿನ ಸಮಾಜದ ಆಯುಧಗಳನ್ನೇ ತೆಗೆದುಕೊಂಡು ನನಗೆ ಕಾದಬೇಕಾಯಿತು. ದುಡ್ಡೇ ನಮ್ಮ ಯುಗದ ವಜ್ರಾಯುಧ. ಅದಿದ್ದವರಿಗೆ ಜೀವನದಲ್ಲಿ ವಿಜಯವಿದೆ, ಇಲ್ಲದವರಿಗೆ ಪರಾಜಯವೇ ಜೀವಿತದ ಪಲ್ಲವಿ!

ಶೇಖರ— ಬುದ್ಧಿ ಭಾವನೆಗಳ ಬಲವಿಲ್ಲದವರು ದುಡ್ಡಿನಿಂದ ಯಶಸ್ಸನ್ನು ಪಡೆಯುತ್ತಾರೆ. ನಿನಗೆ ಪ್ರಖರವಾದ ಬುದ್ಧಿಯಿದೆ. ಸಂಸ್ಕಾರಗೊಂಡ ಭಾವನೆಯಿದೆ. ನಿನಗೆ ಬಡತನದಲ್ಲಿಯೂ ಇಂದಿನ ವೈಭವ ಪ್ರಾಪ್ತವಾಗಬಹುದಾಗಿತ್ತು.

ಅವಿನಾಶ— ಯಾವಾಗ? ಮುದುಕನಾದ ಮೇಲೆ! ಹೆಣದ ಮೇಲೆ ಹೂ ಹರಿಸುವಂತೆ ಸಾಯುವ ಕಾಲಕ್ಕೆ ನನ್ನ ತಲೆಯ ಮೇಲೆ ಯಶಸ್ಸಿನ ಸುರಿಮಳೆಯಾಗಬಹುದಾಗಿತ್ತು, ಆದರೆ ನನಗೆ ತಾರುಣ್ಯದಲ್ಲಿಯೇ ಕೀರ್ತಿಯ ಶಿಖರವನ್ನು ಮುಟ್ಟಬೇಕಾಗಿತ್ತು. ಮುದುಕನಾಗುವ ವರೆಗೆ ತಡೆಯುವ ತಾಳ್ಮೆ ನನ್ನಲ್ಲಿರಲಿಲ್ಲ.

ಶೇಖರ — ನಿನ್ನ ಇಚ್ಛೆಯಂತೂ ಪೂರ್ಣವಾಯಿತು. ಇಷ್ಟು ಚಿಕ್ಕ ವಯಸ್ಸಿನಲ್ಲಿ ನಿನಗೆ ಬೇಕಾದ ಕೀರ್ತಿ, ಅಧಿಕಾರ, ವೈಭವಗಳೆಲ್ಲ ನಿನಗೆ ಪ್ರಾಪ್ತವಾಗಿವೆ. ಇಂದು ನೀನು ನಮ್ಮ ರಾಜ್ಯದ ಲೋಕಪ್ರಿಯ ಮಂತ್ರಿಯಾಗಿರುವೆ.

ಅವಿನಾಶ— ಹೌದು. ಆದರೆ ಈ ರೀತಿಯ ನೀತಿ ನಾನು ಎಷ್ಟುಹೊತ್ತು ನಿಲ್ಲಬಲ್ಲೆ? ನನ್ನ ದುರ್ಭಾಗ್ಯದ ಆಳವಾದ ಕಂದರ ಈಗ ನನ್ನನ್ನು ಕೂಗಿ ಕರೆಯುತ್ತಿದೆ. ನಾಳೆ ಬೆಳಗಾಗುವ ಪೂರ್ವದಲ್ಲಿ, ಶೇಖರ, ನನ್ನ ರಾಜಕೀಯ ಜೀವನ ಮುಗಿದುಹೋಗುತ್ತದೆ. ಸಮಾಜದಲ್ಲಿ ಸಾಮಾನ್ಯ ಮನುಷ್ಯನಿಗಿರುವ ಸ್ಥಾನವನ್ನೂ ನಾನು ಕಳೆದುಕೊಳ್ಳುತ್ತೇನೆ.

ಶೇಖರ— ದುಡ್ಡಿನ ಆಶೆಯಿಂದ ನೀನು ನಿನ್ನ ವ್ಯಕ್ತಿತ್ವವನ್ನು ಹೇಗೆ ಮಾರಿಬಿಟ್ಟೆ, ಅವಿನಾಶ?

ಅವಿನಾಶ— ನಾನು ನನ್ನ ವ್ಯಕ್ತಿತ್ವವನ್ನು ಮಾರಲಿಲ್ಲ, ಶೇಖರ, ನಾನು ಯಶಸ್ಸನ್ನು ಕೊಂಡುಕೊಂಡೆ.

ಶೇಖರ— ಆದರೆ ನೀನು ಅದಕ್ಕೆ ಬಹಳ ದೊಡ್ಡ ಬೆಲೆಯನ್ನು ಕೊಟ್ಟೆ. ಹೀಗೆ ಮಾಡಬೇಕೆನ್ನುವ ವಿಚಾರವಾದರೂ ನಿನ್ನ ತಲೆಯಲ್ಲಿ ಹೇಗೆ ಬಂತು?

ಅವಿನಾಶ— ರಾವಬಹದ್ದೂರ ನಾಡಕರ್ಣಿಯವರ ಹೆಸರನ್ನು ನೀನು ಕೇಳಿರಬಹುದಲ್ಲ? ಅವರೇ ನನಗೆ ಈ ಸೂಚನೆಯನ್ನು ಕೊಟ್ಟರು.

ಶೇಖರ— ನಾಡಕರ್ಣಿ? ಅವನ ಹೆಸರನ್ನು ಯಾರು ಕೇಳಿಲ್ಲ? ಈ ಭಾಗದಲ್ಲಿ, ಅವನು ಪ್ರತಿಷ್ಠಿತನೆಂದು ಮೆರೆಯುವ ಹಗಲುಗಳ್ಳನಾಗಿದ್ದ. ಅವನ ಬಲೆಯಲ್ಲಿ ನೀನು ಹೇಗೆ ಸಿಲುಕಿದೆ?

ಅವಿನಾಶ— ನಾಡಕರ್ಣಿಯವರ ವ್ಯಕ್ತಿತ್ವದ ಕಲ್ಪನೆ ನಿನಗಿಲ್ಲ, ಶೇಖರ. ಅವರಷ್ಟು ತೀಕ್ಷ್ಣಬುದ್ಧಿಯ ವ್ಯಕ್ತಿಯನ್ನು ನಾನಂತೂ ಜನ್ಮದಲ್ಲಿ ನೋಡಿಲ್ಲ.

ಶೇಖರ— ಬುದ್ಧಿಯುಳ್ಳ ಕಳ್ಳನಿಗಿಂತಲೂ ಬುದ್ಧಿಹೀನ ಸಂಭಾವಿತನೇ ಮೇಲು, ಅವಿನಾಶ! ನಾನಂತೂ ಮೂರ್ಖ ಮನುಷ್ಯನಿಗೆ ಸಾವಿರ ಪ್ರಣಾಮ ಮಾಡುತ್ತೇನೆ. ಮೂರ್ಖರು ಸಮಾಜದ ಕಲ್ಯಾಣವನ್ನು ಮಾಡಲಿಕ್ಕಿಲ್ಲ ಆದರೆ ಬುದ್ಧಿವಂತರು ಸಮಾಜಕ್ಕೆ ಹೇಳಲಾರದಷ್ಟು ಹಾನಿಯನ್ನು ಮಾಡಿದ್ದಾರೆ. ಅಂತೆಯೇ ನನಗೆ ಮೂರ್ಖರು ಹೆಚ್ಚು ಆದರಣೀಯರಾಗಿದ್ದಾರೆ. ಆದರೆ ರಾವಬಹದ್ದೂರರ ಬುದ್ಧಿಯ ಪ್ರತಿಭೆ ನಿನ್ನನ್ನು ಹೇಗೆ ಸೆರೆಹಿಡಿಯಿತು?

ಅವಿನಾಶ— ನಾನು ಅದೇ ಆಗ ಬಿ. ಎ. ಪರೀಕ್ಷೆ ಪಾಸಾಗಿ ಸೆಕ್ರೆಟ್ರಿಯೇಟಿನಲ್ಲಿ ಕೆಲಸಕ್ಕೆ ಸೇರಿದೆ. ಆಗ ಕ್ಲಬ್ಬಿನಲ್ಲಿ ಒಂದು ದಿನ ನಾಡಕರ್ಣಿಯವರ ಪರಿಚಯವಾಯಿತು. ನನ್ನಂತೆ ಅನೇಕರು ಅವರ ಮಾತಿಗೆ ಮರುಳಾ

ಗಿದ್ದರು ಮನುಷ್ಯನ ಮಹತ್ವಾಕಾಂಕ್ಷೆ ಪೂರೈಸಬೇಕಾದರೆ ಸಂಪತ್ತು ಅವನ ಬೆನ್ನಿಗೆ ನಿಲ್ಲಬೇಕು, ಅಧಿಕಾರ ಕೈಯಲ್ಲಿ ಒರಬೇಕು. ಅದನ್ನು ಪಡೆಯಲು ನೀತಿ ಅಡ್ಡಿಯಾಗಿ ನಿಲ್ಲಬಾರದು. ಈ ತತ್ವವೇ ಅವರ ಅನುದಿನದ ಪುರಾಣ ವಾಗಿತ್ತು. ಅದೇ ನನ್ನ ಜೀವನದ ಆದರ್ಶವಾಯಿತು.

ಶೇಖರ— ಎಷ್ಟು ಹೀನವಾದ ತತ್ವಜ್ಞಾನ !

ಅವಿನಾಶ— ಆಗಂತೂ ನನಗೆ ಹಾಗೆ ಅನಿಸಲಿಲ್ಲ ಅಂತೆಯೇ ನಾನು ಅದನ್ನು ನನ್ನ ಜೀವನದಲ್ಲಿ ಅರಗಿಸಿಕೊಂಡೆ. ಹಣದಿಂದ ನನ್ನ ಜೀವನ ಅನಿರ್ಬಂಧವಾಯಿತು ಅದಕ್ಕಿಂತ ಹೆಚ್ಚು ಮನುಷ್ಯನಿಗೆ ಬೇಕಾದದ್ದಾದರೂ ಏನು ? ಶೇಖರ, ಬಡತನದ ಕ್ಲೇಶಗಳನ್ನು ನೀನರಿಯೆ ಅದರ ಅನಂತ ಯಾತನೆಗಳನ್ನು ಸಹಿಸಿದವನಿಗೆ ಮಾತ್ರ ದುಡ್ಡಿನ ಬೆಲೆ ಗೊತ್ತಾಗುತ್ತದೆ ಬಡತನ ಬಡಬಾಗ್ನಿಯಲ್ಲಿ ಸಿಕ್ಕ ನನಗೆ ಹಣವೇ ದೇವರ ಕರುಣೆಯಾಗಿ ಅವತರಿಸಿತು ಶೇಖರ, ಸುವರ್ಣವೇ ನನ್ನ ಸುವರ್ಣಸಂಧಿಯಾಯಿತು

ಶೇಖರ— ಹೌದು, ಅದೇನೋ ನಿಜ ! ಆದರ ನಾದಕರ್ಣಿಯವರು ನಿನಗೆ ಹೇಳಿದ್ದಾದರೂ ಏನು ?

ಅವಿನಾಶ— ಅವರಿಗೆ ಅಂದಾಜುಪತ್ರದ ಕಲವು ವಿವರಗಳು ಬೇಕಾಗಿದ್ದವು ಅದನ್ನು ನಾನು ಕೊಟ್ಟರೆ ನನಗೆ ಲಕ್ಷಾವಧಿ ರೂಪಾಯಿಗಳನ್ನು ಕೊಡುವದಾಗಿ ಹೇಳಿದರು ಅದರ ಮೂಲಕ ಅವರೊಂದು ವ್ಯವಹಾರವನ್ನು ಮಾಡಿದರು, ಅದರಲ್ಲಿ ಅವರಿಗೆ ೮-೧೦ ಲಕ್ಷ ರೂಪಾಯಿಯ ಲಾಭವಾಯಿತು

ಶೇಖರ— ನಿನಗೆ ?

ಅವಿನಾಶ— ಎರಡು ಲಕ್ಷ.

ಶೇಖರ— ಇಷ್ಟೆ ? ನಿನಗೆ ಇದಕ್ಕೂ ಹೆಚ್ಚು ಸಿಗಬೇಕಾಗಿತ್ತು

ಅವಿನಾಶ— ಇಲ್ಲ, ನನಗೆ ಅವಶ್ಯಕವಾದ ಹಣ ನನಗೆ ಸಿಕ್ಕಿತು. ಅದರ ಸಹಾಯದಿಂದ ನಾನು ರಾಜಕಾರಣದಲ್ಲಿ ಸೇರಿದೆ ಸರಕಾರಿ ನೌಕರಿ ಬಿಟ್ಟು, ರಾಜಕಾರಣ ಸೇರಿದ್ದೇ ನನಗೊಂದು ಭೂಷಣವಾಗಿತ್ತು ನಾನು ಕೆಲವೇ ದಿನಗಳಲ್ಲಿ ರಾಜಕೀಯ ಮುಂದಾಳುವಾದೆ ಪಾರ್ಟಿ ರಾಜಕಾರಣ ದಲ್ಲ ಬಲಶಾಲಿಯಾದ ಒಂದು ಗುಂಪನ್ನು ಕಟ್ಟಿಕೊಂಡು ಈ ವರ್ಷ ಮಂತ್ರಿ

ಪದಕ್ಕೇರಿದ್ದೇನೆ ಇಂದು ನಮ್ಮ ಮಂತ್ರಿಮಂಡಲದ ಸ್ಥೈರ್ಯ ನನ್ನ ಮೇಲೆಯೇ ಅವಲಂಬಿಸುವಷ್ಟು ನನ್ನ ಮಹತ್ವ ಬೆಳೆದಿದೆ.

ಶೇಖರ— ಈ ಕೃತ್ಯದಿಂದ ನಿನಗೆಂದಿಗೂ ಪಶ್ಚಾತ್ತಾಪವಾಗಲಿಲ್ಲವೆ ?

ಅವಿನಾಶ— ಇಲ್ಲ, ನಾನು ಇಂದಿನ ಯುಗದ ಆಯುಧಗಳಿಂದ ಜೀವನದ ರಣರಂಗದಲ್ಲಿ ಕಾದಾಡುತ್ತಿದ್ದೆ. ಯುದ್ಧದಲ್ಲಿ ಶತ್ರುಗಳ ಪರಾಜಯವಾಯಿತು ನನಗೆ ಪಶ್ಚಾತ್ತಾಪವಾಗುವ ಕಾರಣವೇನು ? ನನಗೆ ವಿಜಯ ದೊರಯಿತು ನನಗೆ ಸಮಾಧಾನವಾಯಿತು

ಶೇಖರ— ನಿನಗೆ ವಿಜಯ ಸಿಕ್ಕಿತೆಂಬ ಭ್ರಮೆಯಾಯಿತು, ಅವಿನಾಶ!

ಅವಿನಾಶ-- ಅಹುದು, ನನಗೆ ಅನಿಸಿತು. ನೀನು ಈಗ ನನ್ನನ್ನು ತಿರಸ್ಕರಿಸುತ್ತಿರಬಹುದಲ್ಲವೆ?

ಶೇಖರ— ಇಲ್ಲ ! ಆದರೆ ನನಗೆ ಇದರ ಕಲ್ಪನೆಯಿರಲಿಲ್ಲ. ನೀನು ದುಡ್ಡಿನ ಮೋಹಕ್ಕೆ ಬಲಿಯಾಗುವಷ್ಟು ದುರ್ಬಲನಾಗಿರುವಿಯೆಂಬ ಕಲ್ಪನೆ ನನಗಿರಲಿಲ್ಲ

ಅವಿನಾಶ— ಮೋಹಕ್ಕೆ ಬಲಿಯಾಗುವದು ದೌರ್ಬಲ್ಯನಲ್ಲ, ಶೇಖರ ! ಅದೊಂದು ದೌರ್ಬಲ್ಯವೆಂದು ತಿಳಿಯುವದು ತಪ್ಪು. ಮೋಹದ ಎದುರು ನಿಲ್ಲುವ ಧೈರ್ಯವಿಲ್ಲದ ಹೇಡಿಗಳ ತತ್ವಜ್ಞಾನವದು ಮೋಹಕ್ಕೆ ಬಲಿಯಾಗಲು ಮನುಷ್ಯನಿಗೆ ದೊಡ್ಡ ಶಕ್ತಿ ಬೇಕಾಗುತ್ತದೆ, ಧೈರ್ಯ ಬೇಕಾಗುತ್ತದೆ. ಒಂದು ನಿಮಿಷದ ಸುಖಕ್ಕಾಗಿ ಜೀವನದ ಸಾರಸರ್ವಸ್ವವನ್ನು ಅರ್ಪಿಸುವ ತಾನು ಜನ್ಮವೆಲ್ಲ ದುಡಿದು ಗಳಿಸಿದ್ದನ್ನೆಲ್ಲ ಕ್ಷಣಾರ್ಧದಲ್ಲಿ ಹಾಳು ಮಾಡುವ ಸಾಮರ್ಥ್ಯ ಬೇಕಾಗುತ್ತದೆ. ಅದೇ ಧೈರ್ಯದ ಮೇಲೆ ನನ್ನ ಯಶೋಮಂದಿರವನ್ನು ಕಟ್ಟಿದೆ.

ಶೇಖರ— ಆದರೆ ಅದರ ಗರ್ಭದಲ್ಲಿ ನಿನ್ನ ಪಾಪದ ಭೂತವನ್ನು ಪ್ರತಿಷ್ಠಾಪಿಸಿದೆ

ಅವಿನಾಶ-- ಆದರೆ ಆ ಭೂತವನ್ನು ಶಾಂತಗೊಳಿಸುವದಕ್ಕಾಗಿ, ನನ್ನ ವಿವೇಕವನ್ನು ಶಾಂತಗೊಳಿಸುವದಕ್ಕಾಗಿ, ನಾನು ಪಾಪದಿಂದ ಗಳಿಸಿದ ಹಣವನ್ನೆಲ್ಲ ಬಡಬಗ್ಗರಿಗೆ ದಾನ ಮಾಡಿದೆ

ಶೇಖರ— ಅವಿನಾಶ, ದಾನದಿಂದ ಸಮಾಜದ ಕಲ್ಯಾಣವಾಗುವದಿಲ್ಲ ದಾನದಿಂದ ಸಮಾಜಕ್ಕಾಗುವ ಹಾನಿ ಮತ್ತಾವ ಕೆಲಸದಿಂದಲೂ ಆಗುವದಿಲ್ಲ.

ಅವಿನಾಶ— ಶೇಖರ, ನಾನಿಷ್ಟು ಹಣವನ್ನು ವೆಚ್ಚಮಾಡಿದೆ. ಅದರಿಂದ ನನ್ನ ಪಾಪದ ಗೋರಿಯನ್ನು ಕಟ್ಟಿದೆ. ಆದರೆ ಇಷ್ಟು ವರ್ಷದ ನಂತರ

ಆ ಪಾಪದ ಭೂತ ನನ್ನೆದುರು ನಿಂತು ಹಲ್ಲು ಕಿರಿಯತೊಡಗಿದೆ ನಾನೇನು ಮಾಡಲಿ, ಶೇಖರ ? ಈ ಸರ್ವನಾಶದಿಂದ ನನಗೆ ಬಿಡುಗಡೆಯಿಲ್ಲವೆ ?

ಶೇಖರ— ಹೀಗೆ ನಿರಾಶನಾಗಬೇಡ, ಅವಿನಾಶ! ಯಾವುದಾದರೊಂದು ಮಾರ್ಗ ಸಿಕ್ಕೀತೆಂಬ ಭರವಸೆ ನನಗಿದೆ.

ಅವಿನಾಶ— ಆದರೆ ಸುಮ್ಮನೆ ಕೂಡುವದಕ್ಕೆ ವೇಳೆಯೆಲ್ಲವೆ? ಶೇಖರ, ನಾನು ಬೇಕಾದ್ದು ಮಾಡಲಿಕ್ಕೆ ಸಿದ್ಧನಿದ್ದೇನೆ ಇದು ನನ್ನ ಜೀವನದ ಕೊನೆಯ ಯುದ್ಧವಾಗಲಿ—ಸಿಕ್ಕರೆ ಜಯ, ಇಲ್ಲದಿದ್ದರೆ ಮರಣ! ಏನಾಗುವದೋ ಆಗಲಿ !

ಶೇಖರ— ಅವಿನಾಶ, ನೀನೊಂದು ಕೆಲಸ ಮಾಡಬೇಕು. ಸುಧಾಬಾಯಿಯವರಿಗೆ ಈ ವಿಷಯವನ್ನು ಯಾವ ಮುಚ್ಚುಮರೆಯಿಲ್ಲದೆ ತಿಳಿಸಬೇಕು

ಅವಿನಾಶ— ಇದೊಂದು ಸಾಧ್ಯವಿಲ್ಲ, ಶೇಖರ! ಬೇರೆ ಏನಾದರೂ ಹೇಳು ಅದಿರಲಿ, ನಿನಗೆ ಲಲಿತಾಬಾಯಿಯವರ ಪರಿಚಯವಿದ್ದ ಹಾಗೆ ತೋರುತ್ತದೆ.

ಶೇಖರ— ಹೌದು ಬಹಳೇ ಸ್ವಲ್ಪ ಪರಿಚಯ! ಆ ಅಲ್ಪ ಪರಿಚಯದ ಪರಿಣಾಮವಾಗಿ ನಮ್ಮಿಬ್ಬರ ವಿವಾಹ ನಿಶ್ಚಯವಾಗಿತ್ತು.

ಅವಿನಾಶ— ಹಾಂ ? ಏನಂದಿ ? ಆಮೇಲೇನಾಯ್ತು ?

ಶೇಖರ - ಆಮೇಲೆ ನಿಶ್ಚಯವಾದ ವಿವಾಹ ಮುರಿದುಹೋಯ್ತು. ಯಾಕೆ, ಹೇಗೆ, ಎಂಬುದನ್ನು ನಾನು ಹೇಳಲಾರೆ ನಾನಿನ್ನೂ ಬ್ರಹ್ಮಚಾರಿಯಾಗಿದ್ದೇನೆಂಬುದು ಮಾತ್ರ ಎಲ್ಲರಿಗೂ ಗೊತ್ತು! ಅವಿನಾಶ! ನೀನು ಲಲಿತಾಬಾಯಿಗೆ ಹಣದ ಆಮಿಷ ತೋರಿಸಬೇಕಾಗಿತ್ತು. ಅಂದರೆ ನಿನ್ನ ಕೆಲಸ ಹೀಗೆ ಕೆಡುತ್ತಿರಲಿಲ್ಲ. ಹಣವೆಂದರೆ ಅವಳ ಪ್ರಾಣವಾಗಿದೆ

ಅವಿನಾಶ— ನಾನು ಅವಳಿಗೆ ಬೇಕಾದಷ್ಟು ಹಣವನ್ನು ಕೊಡಲು ಸಿದ್ಧನಿದ್ದೆ. ಆದರೆ ಅವಳು ಅದನ್ನು ಸ್ವೀಕರಿಸಲಿಲ್ಲ.

ಶೇಖರ— ಅಂದರೆ ನಾಟಕಕಾರರ ತತ್ವಜ್ಞಾನ ಸುಳ್ಳು ಹೋಯಿತು. ಹಣದಿಂದ ಎಲ್ಲವನ್ನೂ ಪಡೆಯುವದು ಸಾಧ್ಯವಿಲ್ಲವೆಂದಹಾಗಾಯಿತು.

ಅವಿನಾಶ— ಹೌದು, ಹಣದಿಂದ ಎಲ್ಲವೂ ಸಾಧ್ಯವೆಂದು ನಾನು ತಿಳಿದಿದ್ದೆ. ಆದರೆ ಈಗ ನೀನು ಹೇಳುವುದೇ ಸತ್ಯವೆಂದು ಗೊತ್ತಾಯಿತು. ಶೇಖರ, ಈಗ ನನ್ನ ಸಂಪೂರ್ಣ ನಾಶವಾಗುವ ಕಾಲ ಸಮೀಪಿಸತೊಡಗಿದೆ. ಎಂದೂ ಅನುಭವಿಸದ ಭೀತಿ ಭೂತದಂತೆ ವಿಕಾರವಾಗಿ ತನ್ನ ಎಲುಬಿನ ಕೈಯಿಂದ ನನ್ನ ಕುತ್ತಿಗೆಯನ್ನು ಹಿಸುಕತೊಡಗಿರುವಂತೆ ನನಗೆ ಭಾಸವಾಗ ಹತ್ತಿದೆ. ಶೇಖರ, ಇದರಿಂದ ನನಗೆ ಬಿಡುಗಡೆಯಿಲ್ಲವೆ?

ಶೇಖರ—ಅವಿನಾಶ, ನೀನು ಹೀಗೆ ಕೈಕಾಲು ಕಳೆದುಕೊಂಡರೆ ಹೇಗೆ? ಯುದ್ಧದ ಪೂರ್ವದಲ್ಲಿಯೇ ಹೀಗೆ ಶಸ್ತ್ರಸನ್ಯಾಸ ಮಾಡಿದರೆ ನಿನಗೆ ಜಯ ಹೇಗೆ ಸಿಕ್ಕೀತು?

ಅವಿನಾಶ-- ಆದರೆ ನಾನು ಜಯವನ್ನು ಹೇಗೆ ಪಡೆಯಬೇಕು? ಅದ ನ್ನಾದರೂ ಹೇಳು. ನೀನು ಹೇಳಿದ ಹಾಗೆ ಕೇಳಲು ನಾನು ಸಿದ್ಧನಿದ್ದೇನೆ

ಶೇಖರ-- ನಾನೇನು ಹೇಳಲಿ? ಈ ಕ್ಷಣಕ್ಕಂತೂ ನಾನು ಏನೂ ಹೇಳ ಲಾರೆ. ಆದರೆ ಕೋಟೆ ಎಷ್ಟು ಅಭೇದ್ಯವಾಗಿದ್ದರೂ, ಅದನ್ನೊಡೆದು ಹೋಗ ಬಹುದೆಂಬ ಧೈರ್ಯ ಮಾತ್ರ ನಮಗೆ ಬೇಕು

ಅವಿನಾಶ-ಲಲಿತಾಬಾಯಿಯ ವಿರುದ್ಧ ನಾನು ಜೇಡಾಪ ಮಾರ್ಗವನ್ನು ಅವಲಂಬಿಸಬಹುದೆ?

ಶೇಖರ - ಹಾವನ್ನು ಹೊಡೆಯುವಾಗ ನಾವು ಕೈಬಡಿಗೆಯ ಕೋಲು ಎಂಥದೆಂದು ಕೇಳುತ್ತೇವೆಯೊ?

ಅವಿನಾಶ— ನಾನು ಈ ಹೊತ್ತು ಅವಳ ಊರಿಗೆ ತಂತೀ ಕಳಿಸಿ ಅವಳ ಜೀವನದ ಎಲ್ಲಾ ವಿವರಗಳನ್ನು ತರಿಸಿಕೊಳ್ಳುತ್ತೇನೆ. ಅವಳ ಜೀವನ ದಲ್ಲಿ ಬಚ್ಚಿಡುವಂಥ ಪ್ರಸಂಗ ಏನಾದರೂ ಇದ್ದರೆ—

ಶೇಖರ— ಲಲಿತಾಬಾಯಿ ಇಪ್ಪತ್ತನೆಯ ಶತಮಾನದ ಹೆಂಗಸೆಂಬು ದನ್ನು ಮರೆಯಬೇಡ. ಅವಳಿಗೆ ಲೋಕಾಪವಾದದ ಭೀತಿಯಿಲ್ಲ, [illegible] ಆಧುನಿಕ ಹೆಂಗಸಿಗೆ ಲೋಕಾಪವಾದವೆಂಬುದೊಂದು ಭೂಷಣವಾಗಿ[illegible]. ಈ ಶಸ್ತ್ರದಿಂದ ನಿನಗೇನೂ ಲಾಭವಿಲ್ಲ

ಅವಿನಾಶ— ಈಗ ಕೈಗೆ ಬಂದದ್ದೇ ಆಯುಧ. ಏನೇನ [illegible] ನೋಡೋಣ. ಈಗ ತಂತಿಯನ್ನು ಕಳಿಸಲಿಕ್ಕೆ ಯಾವ ಅಡ್ಡಿಯಿಲ್ಲವಷ್ಟೆ

ಶೇಖರ— ಅದಕ್ಕೇನು ಅಡ್ಡಿ ? ಕಳಿಸಿಕೊಡು.

[ಒಳಗಡೆ "ಕಾಸೀಮ, ಕಾಸೀಮ" ಎಂಬ ಸುಧೆಯ ಧ್ವನಿ]

ಅವಿನಾಶ— ಸುಧಾ ಇತ್ತಕಡೆಗೆ ಬರುವ ಹಾಗಿದೆ. ನಾನು ಹೊರಡುತ್ತೇನೆ

[ಅವಿನಾಶ ಹೋದಮೇಲೆ ಸುಧಾನ ಪ್ರವೇಶ]

ಸುಧಾ— ನೀವು ಒಬ್ಬರೇ ಕುಳಿತುಕೊಂಡಿದ್ದೀರಿ? ಅವಿನಾಶರೆಲ್ಲಿ ?

ಶೇಖರ— ಅವಿನಾಶ ಇದೀಗ ತನ್ನ ಕೋಣೆಗೆ ಹೋದ ಕೆಲವು ಮಹತ್ವದ ಪತ್ರಗಳನ್ನು ಬರೆಯಬೇಕಾಗಿದೆಯಂತೆ !

ಸುಧಾ— ಹಗಲೂ ಇರುಳೂ ಎಳ್ಳಷ್ಟೂ ವಿಶ್ರಾಂತಿಯಿಲ್ಲದೆ ಇವರು ದುಡಿಯುತ್ತ ಹೋದರ ಏನು ಗತಿ ?

ಶೇಖರ— ಅವಿನಾಶನಂಥವರಿಗೆ ವಿಶ್ರಾಂತಿಯ ಅವಶ್ಯಕತೆ ಇರುವದಿಲ್ಲ ಕೆಲಸವಿಲ್ಲದ ನಾವು ವಿಶ್ರಾಂತಿಯ ಜಪ ಮಾಡುತ್ತೇವೆ ನಮಗೆ ವಿಶ್ರಾಂತಿಯೇ ಜೀವನದ ಇತಿ ಕರ್ತವ್ಯವಾಗುತ್ತದೆ.

ಸುಧಾ— ಅದಿರಲಿ, ನಿಮಗೊಂದು ಮಾತು ಕೇಳಬೇಕಾಗಿದೆ

ಶೇಖರ— ಲಲಿತಾಬಾಯಿಯ ವಿಷಯಕ್ಕೆ

ಸುಧಾ— ಹೌದು, ನಿನ್ನೆ ಅವಳು ಹೇಳಿದ ಮಾತು ನಿಜವಾಗಿತ್ತು ಆದರೆ ಅವಿನಾಶರು ಅವಳಿಗೆ ಕೊಟ್ಟ ಮಾತನ್ನು ತಿರುಗಿ ತಕ್ಕೊಂಡರು

ಶೇಖರ— ನೀವು ಹೇಳಿದಿರಂತೆ, ಹೌದಲ್ಲೋ?

ಸುಧಾ— ಹೌದು ಅವರು ಹಾಗೆ ಮಾಡದಿದ್ದಿಲ್ಲವಾದರೆ ಅವರ ಜೀವನಕ್ಕೆ ಒಂದು ದೊಡ್ಡ ಕಲಂಕ ತಗಲುತ್ತಿತ್ತು ತಮ್ಮ ನೀತಿಯನ್ನು ಮಾರಿ ದ್ರವ್ಯಸ್ಥಾನ ಗಳಿಸಬೇಕಾಗುತ್ತದೆಯೆಂದು ಅನೇಕರು ಹೇಳುತ್ತಾರೆ, ಅದು ಸುಳ್ಳು ಎಂದು ಅವಿನಾಶರು ತಮ್ಮ ಆದರ್ಶ ಜೀವನದಿಂದ ತೋರಿಸಿಕೊಟ್ಟಿದ್ದು ನಿಮಗೆ ಹೇಗೆ ಅನಿಸುತ್ತದೆ? ನೀವು ಅವಿನಾಶರ ಜೀವನದ ಗೆಳೆಯರು, ಅವರು ನಿಮ್ಮಿಂದ ಯಾವ ಮಾತನ್ನೂ ಬಚ್ಚಿಡದೆ ಎಲ್ಲವನ್ನೂ ಹೇಳಬೇಕು.

ಶೇಖರ— ಅವನು ನನ್ನಿಂದ ಯಾವ ಮಾತನ್ನೂ ಬಚ್ಚಿಡುವದಿಲ್ಲವೆಂದೆನಿಸುತ್ತದೆ.

ಸುಧಾ— ಬಚ್ಚಿಡುವಂಥ ಮಾತಾದರೂ ಯಾವುದಿದೆ ಅವರ ಜೀವನ ದಲ್ಲಿ?

ಶೇಖರ— ಅದು ಖರೆ, ಆದರೆ –

ಸುಧಾ— ಆದರೆ?--ಅಂದ್ರೇನು?

ಶೇಖರ— ಸ್ಪಷ್ಟವಾಗಿ ಹೇಳಲ್ಯಾ ?

ಸುಧಾ-- ನೀವು ಯಾವ ಸಂಕೋಚವನ್ನೂ ತೋರಿಸುವ ಕಾರಣ ವಿಲ್ಲ ಅವಿನಾಶರ ಜೀವನದಲ್ಲ ಬಚ್ಚಿಡುವಂಥ ಗುಟ್ಟು ಏನೋ ಇದೆ, ಅಥವಾ ಇರಬಹುದು ಅಂತ ನಿಮಗನಿಸತದೇನು ?

ಶೇಖರ— [ಅವಳನ್ನು ದಿಟ್ಟಿಸಿ ನೋಡುತ್ತಾನೆ ಅವನಿಗೆ ಹೇಳುವ ಧೈರ್ಯವಾಗುವದಿಲ್ಲ] . . ಇಲ್ಲ, ಹಾಗೇನೂ ಇಲ್ಲ, ಆದರೆ ಮನುಷ್ಯನ ಆದರ್ಶ ಶುದ್ಧವಾಗಿದ್ದರೂ ಪ್ರತ್ಯಕ್ಷ ವ್ಯವಹಾರದಲ್ಲಿ –

ಸುಧಾ— ಆ ವ್ಯವಹಾರದ ಅನುಭವ ನನಗೆ ಇನ್ನೂ ಇಲ್ಲ.

ಶೇಖರ— ಅನುಭವವಿರಲಿಕ್ಕಿಲ್ಲ, ಆದರ ನಂಬತಿಯಬಹುದ ಶುದ್ಧವಾದ ಆದರ್ಶ ಕೃತಿಯಲ್ಲಿ ಇಳಿಯುವಾಗ ಸ್ವಲ್ಪ ಹೊಲಸು ಅದಕ್ಕೆ ತಗಲುವದು ಸಹಜ ವಾದದ್ದು ಶಿವನ ಜಡೆಯಲ್ಲಿ ಅಡಗಿಕೊಂಡಾಗ ಗಂಗೆಯ ನೀರು ಶುದ್ಧವಾಗಿ ರುತ್ತದೆ, ಆದರೆ ಭೂಮಿಯ ಮೇಲೆ ಹರಿಯುವಾಗ ಇಲ್ಲಿಯ ಹೊಲಸು ಅದ ರಲ್ಲ ಸೇರದೆ ಇರಬಹುದೆ?

ಸುಧಾ— ನೀವು ಅಸ್ಪಷ್ಟವಾದರೂ ಏನು ?

ಶೇಖರ – ನನಗಿಷ್ಟೇ ಹೇಳಬೇಕಾಗಿದೆ ಒಮ್ಮೊಮ್ಮೆ, ಮನುಷ್ಯ ತನ್ನ ಮಹತ್ವಾಕಾಂಕ್ಷೆಯ ಪೂರ್ತಿಗಾಗಿ ತನ್ನ ವಿವೇಕದ ವಿರುದ್ಧ ಕೆಲವು ಮಾತು ಗಳನ್ನು ಮಾಡಬೇಕಾಗುತ್ತದೆ. ಅಂದರೆ.... . ಈ ನಿಯಮ ಅವಿನಾಶನಿಗೆ ಅನ್ವಯಿಸುವದಿಲ್ಲವೆಂಬುದು ನಿಜ; ಆದರೆ ಸಾಮಾನ್ಯವಾಗಿ ಅನೇಕ ಜನರ ಜೀವನದಲ್ಲಿ ಕಂಡುಬರುವ ಒಂದು ವಿಶೇಷವೆಂದು ನಿಮಗೆ ಹೇಳುತ್ತಿದ್ದೇನೆ ಅಷ್ಟೆ.

ಸುಧಾ— ಆದರೆ, ಶೇಖರ, ನೀವು ನನಗೀ ಮಾತನ್ನು ಯಾಕೆ ಹೇಳು ತ್ತಿದ್ದೀರಿ ?

ಶೇಖರ— ಯಾಕೆ ಹೇಳುತ್ತಿದ್ದೇನೆ? ಸುಧಾತಾಯಿ, ಜೀವನದ ಕಡೆಗೆ ನೋಡುವ ನಿಮ್ಮ ದೃಷ್ಟಿ ಬಹಳ ಕಠೋರವಾಗಿದೆ. ಆದರ್ಶದ ಅಳತೆಗೋಲಿ

ನಿಂದ ಸಂಸಾರವನ್ನು ಆಳೆಯುವುದೆಂದರೆ ನಮ್ಮಂಥವರಿಗೆ ಅನ್ಯಾಯ ಮಾಡಿದ ಹಾಗೆ, ಸಂಸಾರವೆಂದರೆ ನಮಗೆ ಮೋಹದ ಒಂದು ಜಾಲವಾಗಿರುತ್ತದೆ, ಮಾಯೆಯ ಬಲೆಯಾಗಿರುತ್ತದೆ. ಮನುಷ್ಯ ಎಷ್ಟು ದೊಡ್ಡವನಾಗಿದ್ದರೂ ಒಮ್ಮೆಯಾದರೂ ಅವನು ಅದರಲ್ಲಿ ಸಿಕ್ಕುಬೀಳುತ್ತಾನೆ ರಾಜಕಾರಣದಲ್ಲಿದ್ದವ ನಿಗಂತೂ ಈ ಮೋಹ ಒಮ್ಮೊಮ್ಮೆ ಅನಿವಾರ್ಯವಾಗುತ್ತದೆ ಉದಾಹರಣೆ ಗೆಂದು, ನಾವು ನಮ್ಮ ತಂದೆ ಅಥವಾ ಅವಿನಾಶರನ್ನು ತೆಗೆದುಕೊಳ್ಳೋಣ ಎಷ್ಟೋ ವರ್ಷಗಳ ಪೂರ್ವದಲ್ಲಿ ಅವರು ಒಂದು ತಪ್ಪು ಮಾಡಿದ್ದರೆ ಹುಚ್ಚು ತನದ ಒಂದು ಕೆಲಸ ಮಾಡಿದ್ದರೆ—

ಸುಧಾ— ಹುಚ್ಚುತನದ ಕೆಲಸ ?

ಶೇಖರ— ಅಂದರೆ ಇಂದಿನ ಅವರ ದೊಡ್ಡಸ್ತನಕ್ಕೆ ಅಯೋಗ್ಯವೆಂದು ಕಾಣಿಸುವ ಯಾವುದಾದರೂ ಒಂದು ಕೆಲಸ—

ಸುಧಾ— ಅವಿನಾಶರು ಅಂಥ ಕೆಲಸವನ್ನು ಮಾಡುವುದೇ ಸಾಧ್ಯವಿಲ್ಲ

ಶೇಖರ— ಇರಬಹುದು. ಆದರೆ ಈ ಅಪೂರ್ಣವಾದ ಸಂಸಾರದಲ್ಲಿ ಒಂದೂ ತಪ್ಪು ಮಾಡದ ವ್ಯಕ್ತಿ ಸಿಗುವುದೇ ಅಸಾಧ್ಯವಾದದ್ದು.

ಸುಧಾ— ಇದಕ್ಕೇ ನಿರಾಶಾವಾದವೆನ್ನುತ್ತಾರ.

ಶೇಖರ— ನಾನು ನಿರಾಶಾವಾದಿಯಲ್ಲ. ನನಗೆ ನಿರಾಶಾವಾದವೇನೆಂಬುದೇ ಗೊತ್ತಿಲ್ಲ. ನನಗೆ ಗೊತ್ತಿದ್ದ ಮಾತು ಒಂದು ಜೀವನ ಸುಖಕರವಾಗ ಬೇಕಾದರ ಮನುಷ್ಯನಿಗೆ ಉದಾರದೃಷ್ಟಿ ಇರಬೇಕು ಸಹಾನುಭೂತಿಯ ಕಪ್ಪು ಕನ್ನಡಕದಿಂದಲೇ ಸತ್ಯವನ್ನು ಎದುರಿಸಬೇಕು ನನಗಂತೂ ಪ್ರೀತಿಯೇ ಜೀವನದ ಸಾರಸರ್ವಸ್ವವೆಂದೆನಿಸುತ್ತದೆ. ಜಗತ್ತಿನ ವಿಶಾಲ ಯಂತ್ರಕ್ಕೆ ನಾವು ಸ್ನೇಹದ ಎಣ್ಣೆಯನ್ನು ಹಾಕಬೇಕು. ಇದಕ್ಕೆ ನೀವು ನಿರಾಶಾವಾದವೆನ್ನುತ್ತಿದ್ದರೆ, ಅನ್ನಬಹುದು.

ಸುಧಾ— ಶೇಖರ, ನೀವು ಬೇಗನೆ ಮದಿವೆಯಾಗಬೇಕು. ಅಂದರೆ ಈ ವಾದವೆಲ್ಲ ಕೊನೆಗೊಳ್ಳುತ್ತದೆ.

ಶೇಖರ— ಆದರೆ ಮದಿವೆಯಿಂದ ಮದುತಿ ದೊರಕೀತೆಂಬ ಭರವಸ ನನಗಿಲ್ಲ, ಸುಧಾಬಾಯಿ! ನನ್ನ ಮಾತು ಒತ್ತಟ್ಟಿಗಿರಲಿ, ನಿಮಗೆ ಎಂದಾದರೂ ಸಂಕಟ ಬಂದರೆ ನನಗೆ ತಿಳಿಸಿರಿ. ನನ್ನ ಸ್ನೇಹ ಸಹಾಯಗಳು ನಿಮಗಾಗಿ ಮೀಸಲಾಗಿವೆಯೆಂದು ಗೊತ್ತಿರಲಿ.

ಸುಧಾ— (ಆಶ್ಚರ್ಯದಿಂದ) ನೀವಿಷ್ಟು ಗಂಭೀರವಾಗಿ ಮಾತನಾಡುವುದನ್ನು ನಾನು ಎಂದಿಗೂ ಕೇಳಿದ್ದಿಲ್ಲ.

ಶೇಖರ— ಕ್ಷಮಿಸಿರಿ ಸುಧಾಬಾಯಿ, ಗಂಭೀರನಾಗುವ ಪ್ರಸಂಗ ಒಮ್ಮೊಮ್ಮೆ ತಿಳಿಯದೆ ಆಗಿಬಿಡುತ್ತದೆ. ನಾನು ಇನ್ನೊಮ್ಮೆ ಹಾಗೆ ಮಾಡುವದಿಲ್ಲ ನಾನು ಹೊರಡುತ್ತೇನೆ

ಸುಧಾ— ನೀವು ತಪ್ಪು ತಿಳಿದುಕೊಳ್ಳಬೇಡಿ. ನೀವು ಗಂಭೀರವಾಗಬೇಕೆಂಬುದೇ ನನ್ನ ಇಚ್ಛೆ

[ಮಂದಾ ಪ್ರವೇಶಿಸುತ್ತಾಳೆ]

ಮಂದಾ— ಇವರು ಗಂಭೀರರಾಗಬೇಕೆ? ಎಂಥ ಜನರ ಮುಂದೆ ಅವರಿಗೆ ಸಾಧ್ಯವಿಲ್ಲ

ಶೇಖರ— ನಿನ್ನ ಸಹವಾಸದಲ್ಲಿ ಯಾರಿಗೂ ಗಂಭೀರರಾಗುವದು ಸಾಧ್ಯವಿಲ್ಲ

ಮಂದಾ— ಅಂದರೆ? ನಾನೇನು ನಾಟಕದೊಳಗಿನ ವಿದೂಷಕಳೆಂದು ತಿಳಿದಿದ್ದೀರೇನು ?

ಶೇಖರ— ಹಾಗೆ ಕೇಳಿದರೆ ನಾಟಕದಲ್ಲಿಯ ವಿದೂಷಕಳೇ! ಸಂಸಾರವೊಂದು ರಂಗಭೂಮಿಯೆಂದು ಶೇಕ್ಸಪಿಯರ ಹೇಳಿದ. ಆದರೆ ನಮ್ಮ ಜೀವನವೊಂದು ವಿನೋದಿ ನಾಟಕವಾಗಿದೆಯೆಂದು ಹೇಳಲು ಅವನು ಮರೆತ.

[ಸುಧಾ ಹೋಗುತ್ತಾಳೆ]

ಅಚ್ಛಾ, ನಾನೂ ಹೊರಡಬೇಕು.

ಮಂದಾ - ನನ್ನನ್ನು ನೋಡಿದ ಕೂಡಲೆ, ನೀವು ಹೊರಡಲೇ ಬೇಕಂತೀರಿ, ಯಾಕದು ?

ಶೇಖರ— ಅದು ನಿನ್ನ ಸೌಂದರ್ಯದ ಪ್ರಭಾವ !

ಮಂದಾ— ಜನರು ಸೌಂದರ್ಯದ ಹತ್ತಿರ ಹೋಗುತ್ತಾರೆ, ದೂರ ಹೋಗುವದಿಲ್ಲ.

ಶೇಖರ— ಜನರು ಸೌಂದರ್ಯದ ಹತ್ತಿರ ಹೋಗುತ್ತಿದ್ದರೆ, ಅವರು ಊರುಬಿಟ್ಟು ಅಡವಿಯಲ್ಲಿರುತ್ತಿದ್ದರು. ಜನರು ಸೌಂದರ್ಯವನ್ನು ಪ್ರೀತಿಸುತ್ತಾರೆ, ಆದರೆ ದೂರದಿಂದ !

ಮುಂದಾ—ಆದರೆ ಸುಂದರ ಸ್ತ್ರೀಯರಿಂದ ಗಂಡಸರು ದೂರ ಹೋಗುವ ದಿಲ್ಲ, ಬಹಳ ಹತ್ತಿರ ಬರುವ ಪ್ರಯತ್ನ ಮಾಡುತ್ತಾರೆ

ಶೇಖರ— ಯಾಕಂದರೆ ದೂರದಿಂದ ಸುಂದರ ಕಾಣಿಸುವ ಸ್ತ್ರೀ ಹತ್ತಿರ ಹೋದಕೂಡಲೆ ಬೇರೆ ಕಾಣಿಸುತ್ತಾಳೆ ಇದ್ದದ್ದೊಂದು ಕಾಣಿಸುವದಿನ್ನೊಂದು ಎಂಬ ಮಾತು ಸ್ತ್ರೀಯರ ವಿಷಯದಲ್ಲಿ ಸಂಪೂರ್ಣ ಸತ್ಯವಾಗಿದೆ

ಮುಂದಾ— ಹಾಗಿದ್ದರೆ ನೀವು ಒಬ್ಬ ಕುರೂಪಿ ಹೆಣ್ಣಿನೊಡನೆ ಮದುವೆ ಯಾಗಬೇಕು.

ಶೇಖರ-- ಇಲ್ಲ, ನಾನು ಸುಂದರ ಸ್ತ್ರೀಯನ್ನೇ ಮದುವೆಯಾಗುತ್ತೇನೆ. ಯಾಕಂದರೆ ಸೌಂದರ್ಯದ ಕೊರತೆಯನ್ನು ತುಂಬಿಕೊಳ್ಳುವದಕ್ಕಾಗಿ ಕುರೂಪ ಹೆಂಗಸು ಬುದ್ಧಿಯನ್ನು ಬೆಳೆಸುತ್ತಾಳೆ ಬುದ್ಧಿಯುಳ್ಳ ಹೆಂಗಸೆಂದರೆ ನನ ಗಂತೂ ಹಗಲು ಮೂಡಿದ ಚಂದ್ರನ ಹಾಗೆ ಕಾಣುತ್ತಾಳೆ ಅಂಥವ ಹೆಂಗ ಸನ್ನು ನೋಡುವ ಸಹನ ಕೂಡ ನನಗಿಲ್ಲ ಆದಕಾರಣ ಕೊನೆಗೆ ಸುಂದರ ಸ್ತ್ರೀಯನ್ನು ಮದುವೆಯಾಗದ ಹೊರತು ನನಗೆ ಬೇರೆ ಯಾವ ಉಪಾಯವೇ ಇಲ್ಲ

ಮುಂದಾ— ಅಂದರೆ ಮದುವೆಯೆಂಬುದು ನಿಮಗೆ ಗಂಡಾಂತರವೆಂದು ತೋರುತ್ತಿದ್ದರೆ ನೀವು ಮದುವೆಯಾಗುವದಿಲ್ಲವೆಂದು ಭೀಷ್ಮಪ್ರತಿಜ್ಞೆಯನ್ನೇಕೆ ಮಾಡಬಾರದು

ಶೇಖರ— ಭೀಷ್ಮ ತನ್ನ ತಂದೆಯ ಸಲುವಾಗಿ ಮದುವೆಯಾಗುವದಿಲ್ಲ ವೆಂದು ಪ್ರತಿಜ್ಞೆ ಮಾಡಿದ. ನಾನು ನನ್ನ ತಂದೆಯ ಆಗ್ರಹಕ್ಕಾಗಿ ಮದುವೆ ಯಾಗಬೇಕಾಗಿದೆ. ಏನೇ ಇರಲಿ, ಒಟ್ಟಿನಲ್ಲಿ ಮದುವೆಯಾಗುವದೇ ಅನು ಕೂಲವೆಂದು ನನಗನಿಸುತ್ತದೆ.

ಮುಂದಾ— ಯಾಕೆ ?

ಶೇಖರ— ಮದುವೆಯಿಂದ ಗಂಡಸಿಗೆ ಸ್ವಾತಂತ್ರ್ಯದ ಲಾಭವಾಗು ತ್ತದೆ. ಆವನು ಮದುವೆಯ ತೆರೆಯ ಹಿಂದೆ ಏನನ್ನೂ ಮಾಡಬಹುದು. ವಿವಾ ಹಿತ ಜೀವನ ಎಷ್ಟು ಕೆಟ್ಟುಹೋದರೂ, ಅದು ಅವಿವಾಹಿತ ಜೀವನಕ್ಕಿಂತ ಒಳ್ಳೆಯದಾಗಿರುತ್ತದೆ ಆದರೆ ಮದುವೆಯಲ್ಲಿ ಒಂದು ಮಾತ್ರ ಹೆದರಿಕೆಯಿದೆ.

ಮುಂದಾ— ಮಕ್ಕಳಾಗುವ ಹೆದರಿಕೆ, ಹೌದಲ್ಲವೆ ?

ಶೇಖರ— ಅಲ್ಲ, ಮಕ್ಕಳಾಗದ ಹೆದರಿಕೆ ? ಮಕ್ಕಳಾಗದಿದ್ದರೆ ಹೆಂಡತಿ ಗಂಡನನ್ನೆ ಮಗುವೆಂದು ತಿಳಿದುಕೊಳ್ಳುತ್ತಾಳೆ ಅದೇ ವಿವಾಹಿತ ಜೀವನದ ದುರಂತವೆಂದು ನಾನು ತಿಳಿದಿದ್ದೇನೆ ಒಳ್ಳೆಯದು, ಇನ್ನು ನಾನು ಹೊರ ಡಲೇಬೇಕು.

ಮಂದಾ— ಅದಂತೂ ನಿಮ್ಮ ಮಾತಿನ ಪಲ್ಲವಿಯಾಗಿದೆ ನಿಮಗೆ ಇಷ್ಟ್ಯಾಕೆ ಗಡಿಬಿಡಿ? ನಿಮಗೆ ನಾನು ಎಷ್ಟೋ ಮಾತುಗಳನ್ನು ಹೇಳಬೇಕಾ ಗಿದೆ

ಶೇಖರ— ಏನು ಹೇಳಬೇಕಾಗಿದೆ ? ನೀನು ನಿದ್ದೆ ಬರಲಿಲ್ಲವೆಂದು ಓದಿದ ಕನ್ನಡ ಕಾದಂಬರಿ, ಅಂಗಡಿಯಲ್ಲಿ ಕಂಡ ಹೊಸ ಫ್ಯಾಶನ್ನಿನ ಪತ್ತಲ, ಅಥವಾ ನೀನು ನೋಡಿಬಂದ ಹಿಂದೀ ಸಿನೇಮಾ . ಇವೇ ಅಲ್ಲವೆ ನನಗೆ ಹೇಳಬೇಕಾಗಿರುವದು ?

ಮಂದಾ— ಇಂಥ ಮಾತಿಗೂ ಜೀವನದಲ್ಲಿ ಸ್ವಲ್ಪ ಮಹತ್ವವಿದೆಯಲ್ಲ !

ಶೇಖರ— ನನಗನಿಸುವ ಮಟ್ಟಿಗೆ ಇವುಗಳಿಗೇ ಹೆಚ್ಚು ಮಹತ್ವವಿದೆ ಆದರೆ ದುರ್ದೈವದಿಂದ ಮನುಷ್ಯನಿಗೆ ಕಡಿಮೆ ಮಹತ್ವದ ಕೆಲಸಗಳನ್ನು ಮಾಡ ಬೇಕಾಗುತ್ತದೆ.

ಮಂದಾ— ಕೆಲಸ? ಕೆಲಸಕ್ಕೂ ನಿಮಗೂ ಯಾವ ಸಂಬಂಧ? ಜೀವ ನದ ಈ ನಾಟಕದಲ್ಲಿ ನಿಮ್ಮ ಪಾಲಿಗೆ ಬಂದದ್ದು ಕೆಲಸವಲ್ಲ, ಬರೀ ಮಾತು

ಶೇಖರ— ನಾಟಕದಲ್ಲಿ ಮಾತಿಗೇ ಪ್ರಾಧಾನ್ಯವಿರುತ್ತದೆ. ಹೆಚ್ಚು ಮಾತು ಯಾರ ಪಾಲಿಗೆ ಬರುತ್ತವೆಯೊ, ಅವರೇ ನಾಟಕದ ನಾಯಕರಾಗು ತ್ತಾರೆ.

[ಸುಧಾನ ಪ್ರವೇಶ]

ಸುಧಾ— ನೀವಿನ್ನೂ ಹೋಗಿಲ್ಲ? ಆಗಲೇ ಹೊರಟುನಿಂತಿದ್ದಿರಲ್ಲ ?

ಶೇಖರ— ಹೊರಟು ನಿಂತಿದ್ದೆ, ಹೊರಡಲಿಲ್ಲ ಗಂಡಸಿನ ಮಾರ್ಗ ದಲ್ಲಿ ಹೆಂಗಸು ಅಡ್ಡಬಿದ್ದ ಕಲ್ಲೆಂದು ಜನರು ಹೇಳುತ್ತಾರೆ. ಆದಕಾರಣ ನಾನು ನಿಂತಲ್ಲಿಯೇ ನಿಂತುಕೊಂಡಿದ್ದೇನೆ

ಮಂದಾ— ಅಂದರೆ ನಾನು ನಿಮ್ಮ ಮಾರ್ಗದಲ್ಲಿ ಬಿದ್ದ ಕಲ್ಲೇನು?

ಶೇಖರ— ಛೇ ಛೇ, ನೀನು ಕಲ್ಲೇ, ಅಲ್ಲಲ್ಲ. ಸುಧಾತಾಯಿ, ನಾನು ಹೊರಡುತ್ತೇನೆ ನಾನು ಹೇಳಿದ ಮಾತನ್ನು ಮಾತ್ರ ಮರೆಯಬೇಡಿರಿ. [ಹೋಗುತ್ತಾನೆ].

[ಕಾಸೀಮ ಬಂದು]

ಕಾಸೀಮ-- ಲಲಿತಾಬಾಯಿಯವರು ಬಂದಿದ್ದಾರೆ. ತಮ್ಮನ್ನು ಕಾಣ ಬೇಕಂತೆ.

ಸುಧಾ-- ಲಲಿತಾ ದೇಸಾಯಿ ? ಹೋಗು, ಅವರನ್ನು ಇಲ್ಲಿಯೇ ಕರ ಕೊಂಡು ಬಾ !

ಮಂದಾ— ಇವಳು ಯಾರು? ನಿನ್ನ ಶಾಲೆಯ ಗೆಳತಿಯೆಂದು ಕಾಣು ತ್ತದೆ

ಸುಧಾ— ಹೌದು.

ಮಂದಾ— ಅಂದರೆ ನಾನು ಇಲ್ಲಿಂದ ಕಾಲುಕಿತ್ತಬೇಕು. ಇಬ್ಬರು ಗೆಳತಿಯರು ಸೇರಿದಾಗ ಮೂರನೆಯವರ ಅಡಚಣಿಯಾಗುತ್ತದೆ.

ಸುಧಾ— [ನಗುತ್ತಾಳೆ]

[ಲಲಿತಾನ ಪ್ರವೇಶ]

ಸುಧಾ— ಕೂತುಕೊ, ಲಲಿತಾ !

ಲಲಿತಾ— ನಿನಗೆ ನಾನು ಆಭಾರಿಯಾಗಿದ್ದೇನೆ, ಸುಧಾ

ಸುಧಾ— ಯಾಕೆ ?

ಲಲಿತಾ— ಹದಿನೈದು ವರ್ಷಗಳ ಪೂರ್ವದಲ್ಲಿ ನೀನು ನನಗೆ 'ಲಲಿತಾ' ಎಂದು ಕರೆಯುತ್ತಿದ್ದೆ, ಈಗಲೂ ನೀನು ನನ್ನನು ಏಕವಚನದಲ್ಲಿಯೇ ಸಂಬೋಧಿಸಿದಿಯೆಂದು ಶಾಲೆಯಲ್ಲಿ ಕೂಡಿ ಕಲಿತವರ ನಡುವೆ ಯಾವ ಔಪಚಾರಿಕ ಪರದೆಯೂ ಇರಕೂಡದು

ಸುಧಾ— ನಿನ್ನೆ ನೀನೇ ಈ ವಿಷಯವನ್ನು ಮರೆತಿದ್ದೆ.

ಲಲಿತಾ— ಎಲ್ಲ ತರದ ಜನರು ಸೇರಿದಾಗ ಕೆಲವು ಮಾತು ನೆನಪಿಗೆ ಬರುವದಿಲ್ಲ ನಿನಗೆ ಅಂಥಾ ಅನುಭವವಿರಲಕ್ಕಿಲ್ಲ

ಸುಧಾ— ಸುದೈವದಿಂದ ಇಲ್ಲ!

ಲಲಿತಾ— ಸುಧಾ, ಇಷ್ಟು ವರ್ಷ ಆದರೂ ನಿನ್ನಲ್ಲಿ ಯಾವ ಬದ ಲಾವಣೆಯೂ ಆಗಿಲ್ಲ.

ಸುಧಾ— ಹೌದು, ಆಗಿಲ್ಲ, ಆಗುವ ಸಂಭವವೂ ಇಲ್ಲ.

ಲಲಿತಾ— ಪರಿಸ್ಥಿತಿಯೆಂದರೆ ಒಬ್ಬ ಕಠೋರ ಶಿಕ್ಷಕನೆಂದು ಹೇಳು ತ್ತಾರೆ ನೀನು ಅವನಿಂದ ಏನನ್ನೂ ಕಲಿಯಲಿಲ್ಲವೆ ?

ಸುಧಾ— ಎಷ್ಟೋ ಕಲಿತಿದ್ದೇನೆ. ನಿನಗೂ ಆ ಕಠೋರ ಶಿಕ್ಷಕ ಏನಾ ದರೂ ಕಲಿಸಿರಬಹುದಲ್ಲ

ಲಲಿತಾ— ಅಹುದು. ಅವನು ನನಗೊಂದು ಮರಯದ ಪಾಠವನ್ನು ಕಲಿಸಿದ್ದಾನೆ ಲೋಕ ಅಂತರೆ ಪಾಪ, ಇಲ್ಲದಿದ್ದರ ಪುಣ್ಯ ಕಳ್ಳತನದ ಆರೋಪದ ಮೇಲೆ ನಾನು ಶಾಲೆಯನ್ನು ಬಿಡಬೇಕಾಯಿತು. ಆಗ ನನಗೆ ಈ ತತ್ವ ಗೊತ್ತಿರಲಿಲ್ಲ

ಸುಧಾ— ಹುಂ, ಅದಿರಲಿ, ನೀನು ಈಗ ಬಂದ ಕೆಲಸವೇನು ?

ಲಲಿತಾ—ನಿನ್ನೆ ಎಲ್ಲಿಯೋ ನನ್ನ ರತ್ನದ ಉಂಗುರ ಬಿದ್ದುಹೋಯಿತು ಅದು ಇಲ್ಲ ಬಿದ್ದಿರಬಹುದೇನೋ ಎಂದು ನೋಡಲಿಕ್ಕೆ ಬಂದೆ

ಸುಧಾ-- ರತ್ನದ ಉಂಗುರ?

ಲಲಿತಾ— ಸರ್ಪಾಕೃತಿಯ ಉಂಗುರ, ಅದರ ಹೆಡೆಯಲ್ಲಿ ಒಂದು ನೀಲ ಮಣಿಯಿದೆ ನಾನು ನುಮ್ಮನೆ ಕೇಳುತ್ತಿದ್ದೇನೆ ಅದು ಎಲ್ಲಿ ಕಳೆದು ಹೋಯಿತು ನನಗೆ ಗೊತ್ತಿಲ್ಲ ನಿನ್ನೆ ಮನೆಗೆ ಹೋದಮೇಲೆ ಅದು ಬಿಂದ ಗಿದ್ದುದನ್ನು ನಾನು ಕಂಡೆ

ಸುಧಾ— ಇಲ್ಲಿ ಬಿದ್ದಿದ್ದರೆ ನನಗೆ ತಿಳಿಯಬಹುದಾಗಿತ್ತು ಆದರೂ ನಾನು ಕೇಳಿ ನೋಡುತ್ತೇನೆ ಕಾಸೀಮು!

[ಕಾಸೀಮು ಬರ್ತಾ ತಂದಿರುತ್ತಾನೆ]

ಕಾಸೀಮು, ನಿನ್ನೆ ಇಲ್ಲಿ ಒಂದು ಉಂಗುರ ಬಿದ್ದದ್ದನ್ನು ನೋಡಿದೆಯಾ?

ಕಾಸೀಮು— ಇಲ್ಲ ಬಾಯೀಸಾಹೇಬ!

ಸುಧಾ—ಒಳ್ಳೆಯದು, ನೀನು ಹೋಗು!

ಲಲಿತಾ— ಬೇರೆ ಎಲ್ಲಿಯಾದರೂ ಬಿದ್ದಿರಬೇಕು. [ಎದ್ದು ಕನ್ನಡಿಯ ಕಡೆಗೆ ಹೋಗಿ] ಸುಧಾ, ನಿನ್ನ ಮನಸ್ಸಿನಂತೆ ಸರ್ವಗುಣ ಸಂಪನ್ನನಾದ ಗಂಡ ನಿನಗೆ ದೊರಕಿದನೆಂದು, ನೀನು ಆನಂದದಲ್ಲಿರಬಹುದಲ್ಲವೆ ?

ಸುಧಾ— ಅದೇನೇ ಇರಲಿ, ನಿನ್ನ ಕೆಲಸ ಮುಗಿಯಿತಲ್ಲ; ಇನ್ನು—

ಲಲಿತಾ— ನನ್ನ ಕೆಲಸ ಮುಗಿಯಿತು

ಸುಧಾ— ಹಾಗಾದರೆ ಇನ್ನು ಹೊರಡು. ನೀನೇ ಲಲಿತಾ ದೇಸಾಯಿ ಎಂದು ನನಗೆ ಮೊದಲೇ ಗೊತ್ತಿದ್ದರೆ, ನಿನಗೆ ಈ ಮನೆಯಲ್ಲಿ ಪ್ರವೇಶ ಸಿಗು ತ್ತಿರಲಿಲ್ಲ!

ಲಲಿತಾ— [ಕೂತುಕೊಂಡು] ಯಾಕೆ ? ಈ ಬಹಿಷ್ಕಾರದ ಕಾರಣ ವೇನು?

ಸುಧಾ— ಸುಳ್ಳುತನ, ಕಳ್ಳತನಗಳನ್ನು ಚಿಕ್ಕಂದಿನಿಂದಲೆಯೇ ಕಲಿತಿರುವ ವ್ಯಕ್ತಿ ಸಮಯ ಸಿಕ್ಕಾಗ, ಅದನ್ನು ಮಾಡದೆ ಬಿಡಬಹುದೆ? ಅಂಥವರಿಂದ ಎಂದು ನೂರು ದೂರವಿರುವುದೇ ಲೇಸು!

ಲಲಿತಾ— ಈ ನಿಯಮವನ್ನು ನೀನು ಎಲ್ಲರಿಗೂ ಹಚ್ಚುವೆಯಾ ?

ಸುಧಾ— ಹೌದು, ಎಲ್ಲರಿಗೂ, ಅವರು ಎಷ್ಟೇ ಸಮೀಪದ ಆಪ್ತರಾಗಲಿ, ಅವರಿಗೂ ಈ ನಿಯಮವನ್ನು ಹಚ್ಚಲು ನಾನು ಹಿಂದೆ ಮುಂದೆ ನೋಡುವ ದಿಲ್ಲ!

ಲಲಿತಾ-- ಓಹೋ, ನಿನ್ನ ದುಷ್ಟತನಕ್ಕೆ ಮಿತಿಯಿಲ್ಲ, ಸುಧಾ !

ಸುಧಾ— ಅದಿರಲಿ, ನೀನು ಮತ್ತೆ ಎಂದಾದರೂ ಈ ಊರಿಗೆ ಬಂದರೆ ನನ್ನ ಮನೆಯ ಹತ್ತಿರ ಕೂಡ ಹಾಯಬೇಡ, ತಿಳಿಯಿತ ?

ಲಲಿತಾ-- ತಿಳಿಯಿತು, ಸುಧಾ ! ತಿಳಿಯದೆ ಏನು? ಈ ನಿನ್ನ ತತ್ವ ನಿಷ್ಠೆಗಾಗಿ ನಿನ್ನನ್ನು ನಾನು ಅಭಿನಂದಿಸುತ್ತೇನೆ ಆದರೆ ನಿನಗೆ ಅನಿಸಿದ್ದೇ ನೀತಿ, ಎರಡನೆಯವರು ಮಾಡಿದ್ದೆಲ್ಲ ಅನೀತಿಯೆಂದು ಮಾತ್ರ ತಿಳಿಯಬೇಡ ನನ್ನನ್ನು ನೀನು ದ್ವೇಷಿಸುತ್ತೀಯೆಂಬುದು ನನಗೆ ಗೊತ್ತು ಆದರ ಈ ಮನೆ ಯನ್ನು ಬಿಡುವ ಮೊದಲು ನಿನಗೊಂದು ಹಿತದ ಮಾತನ್ನು ಹೇಳಿ ಹೋಗು ತ್ತೇನೆ.

ಸುಧಾ-- ಹಿತದ ಮಾತು? ನಿನ್ನೆ ಆದಿನಾಥರಿಗೂ ನೀನು ಹಿತದ ಮಾತನ್ನು ಹೇಳಿದೆ, ಅಂತಹ ಮಾತನ್ನೇ ನನಗೆ ಹೇಳುವಿರೇನು? ನನ್ನ ದ್ವೇಷ ಒಳ್ಳೆಯದೆಂದು ನಾನು ಅವರನ್ನು ಒಂದು ಮಹಾ ಪಾತಕದಿಂದ ಪಾರು ಮಾಡಿದೆ.

ಲಲಿತಾ— ನೀನು? ಅಂದರೆ ಆ ಪತ್ರವನ್ನು ಲವಂಗೆ ನೀನು ಬರೆಯಲಿಕ್ಕೆ ಹೇಳಿದೆಯಾ? ಅವರು ತಮ್ಮ ವಚನವನ್ನು ಮುರಿಯುವಂತೆ ನೀನು ಒತ್ತಾಯ ಮಾಡಿದೆಯಾ?

ಸುಧಾ— ಹೌದು, ನಾನು!

ಲಲಿತಾ— ಹಾಗಿದ್ದರೆ ಅವರು ಇದೇ ರೀತಿ ನಡೆದುಕೊಳ್ಳುವಂತೆ ನೀನು ನೋಡಿಕೊಳ್ಳಬೇಕು ಸುಧಾ, ನಿನಗೊಂದು ದಿವಸದ ಅವಧಿಯನ್ನು ಕೊಡುತ್ತೇನೆ. ಆ ಅವಧಿಯಲ್ಲಿ ನಿನ್ನ ಗಂಡ ನನ್ನ ಮಾತಿಗೆ ಒಪ್ಪಿಗೆಯನ್ನು ಕೊಡದಿದ್ದರೆ, ನನ್ನ ಸೂಚನೆಯಂತೆ—

ಸುಧಾ— ನಿನ್ನ ಸೂಚನೆ? ಸೂಚನೆಯಲ್ಲದು, ಲಲಿತಾ, ಶುದ್ಧ ಕಳ್ಳತನ!

ಲಲಿತಾ— ನೀನು ಅದಕ್ಕೆ ಯಾವ ಹೆಸರನ್ನೂ ಕೊಡಬಹುದು ಆದರೆ ನಿನ್ನ ಆದರ್ಶ ಪತಿರಾಯ ನನ್ನ ಕೈಯಲ್ಲಿ ಸಿಕ್ಕಿದ್ದಾನೆ ಅವನನ್ನು ನಾನು ಈ ಕಿರಿಬೆರಳಿನ ಸುತ್ತಲೂ ಬೇಕಾದ ಹಾಗೆ ಕುಣಿಸಬಹುದು, ತಿಳಿಯಿತೆ?

ಸುಧಾ— [ಸಿಟ್ಟು ಮಿತಿಮೀರುತ್ತದೆ] ಲಲಿತಾ, ನಾಲಗೆ ಬಿಗಿಹಿಡಿದು ಮಾತಾಡು ನಿನಗೂ ಅವಿನಾಶರಿಗೂ ಏನು ಸಂಬಂಧ? ಅದೂ ನಿನ್ನಂತಹ ಹೆಂಗಸಿನೊಡನೆ?

ಲಲಿತಾ— ನನ್ನಂತಹ ಹೆಂಗಸು? ನನ್ನಂಥ ಹೆಂಗಸಿನೊಡನೆ ನಿನ್ನ ಗಂಡನಂಥವರ ಸಂಬಂಧ ಹೆಚ್ಚು ನಿಕಟವಾಗಿರುತ್ತದೆ. ಕಳ್ಳತನ, ಸುಳ್ಳು, ಮೋಸ— ಮುಂತಾದ ಎಲ್ಲ ಸದ್ಗುಣಗಳ ಮೂರ್ತಿಯಾಗಿದ್ದಾನ ನಿನ್ನ ಗಂಡ! ಆದ್ದರಿಂದ ನಾನೇ ನಿನಗಿಂತಲೂ ಹತ್ತಿರದವಳು ನಿನ್ನ ನಡುವೆ ನೀಳಿಯು ಅಭೇದ್ಯವಾದ ಗೋಡೆಯೊಂದು ನಿಂತಿದೆ. ನೀನು ಅವನ ಹತ್ತಿರ ಹೋಗಲಾರೆ, ನಾನು ಮಾತ್ರ ಅವನ ಕೈಹಿಡಿದು ನಿಂತಿದ್ದೇನೆ. ಒಂದೇ ಪಾಪದ ಬಂಧನ ನಮ್ಮಿಬ್ಬರನ್ನೂ ಬಿಗಿದುಬಿಟ್ಟಿದೆ, ಸುಧಾ!

ಸುಧಾ— ನನ್ನ ಎದುರಿಗೆ ನನ್ನ ಗಂಡನ ನಿಂದೆಯನ್ನು ಮಾಡಲು ನಿನ್ನ ನಾಲಿಗೆಯಾದರೂ ಹೇಗೆ ಏಳುತ್ತದೆ? ಒಂದು ಕ್ಷಣವಾದರೂ ನನ್ನೆದುರಿಗೆ ನಿಲ್ಲಬೇಡ, ತೊಲಗು. ತೊಲಗು ಇಲ್ಲಿಂದ ನನ್ನ ಮನೆಯಿಂದ ಹೊರಗೆ ಹೋಗು.

[ಅವಿನಾಶ ಬಾಗಿಲಲ್ಲಿ ಬಂದು ನಿಲ್ಲುತ್ತಾನೆ.]

ಲಲಿತಾ— ನಿನ್ನ ಮನೆ? ಕಳ್ಳತನದ ತಳಹದಿಯ ಮೇಲೆ ನಿಂತ ನಿನ್ನ ಮನೆ—ವಿಶ್ವಾಸದ ಖೂನಿಮಾಡಿ ಅದರ ಪ್ರೇತದ ಮೇಲೆ ಕಟ್ಟಿದ ಈ ಸಂಸಾರ--ನಿನಗೆ ಪವಿತ್ರವೆಂದು ತೋರುವ ನೀತಿಯ ಕತ್ತು ಹಿಸುಕಿ ಅದರ ನೆತ್ತರಿನಿಂದ ಸಾರಿಸಿದ ಈ ಗೋಡೆಗಳು— ಇಲ್ಲಿ ನಾನು ಒಂದು ಕ್ಷಣಾಪೂ ನಿಲ್ಲುವದಿಲ್ಲ ಆದರೆ ನಿನ್ನ ಗಂಡನಿಗೆ ಕೇಳು ನಿಮ್ಮ ಮನೆಯ ವೈಭವದ ಮೂಲ ಎಲ್ಲಿದೆಯೆಂಬುದನ್ನು ಅವನಿಗೆ ಕೇಳು, ಯಾವ ಪಾಪದ ತಳಹದಿಯ ಮೇಲೆ ನಿನ್ನ ಪ್ರೀತಿಯ ಮಂದಿರವನ್ನು ಕಟ್ಟಿದ್ದಾನೆಂದು ಕೇಳು ಅವನಿಗೆ ಸರಕಾರದ ವಿಶ್ವಾಸಘಾತ ಮಾಡಿ, ಕೆಲವು ಗುಪ್ತ ಕಾಗದಪತ್ರಗಳನ್ನು ಮಾರಿ, ತನ್ನ ಸ್ವಾರ್ಥವನ್ನು ಸಾಧಿಸಿ, ಸಮಾಜದ ಮುಂದಾಳುವೆಂದು ಮೆರೆಯುತ್ತಿರುವ ನಿನ್ನ ಗಂಡನಿಗೆ ಕೇಳು.

ಸುಧಾ— ಸುಳ್ಳು, ಸುಳ್ಳು !

ಲಲಿತಾ— ಅದೋ ನೋಡು ನಿನ್ನ ಗಂಡನ ಕಡೆಗೆ, ನಾನು ಹೇಳುತ್ತಿರುವ ಮಾತು ಸತ್ಯವೆಂದು ಸಾರಿ ಹೇಳುತ್ತಿರುವ ಆ ಮುಖವನ್ನು ದಿಟ್ಟಿಸಿ ನೋಡು

ಅವಿನಾಶ— [ಮುಂದೆ ಬಂದು] ಹೋಗು, ಲಲಿತಾ, ಹೋಗು! ನೀನು ಏನು ಮಾಡಬೇಕೆಂದಿದ್ದೆಯೋ ಅದನ್ನು ಮಾಡಿಬಿಟ್ಟಿರುವ ಇನ್ನು ಹೊರಡು!

ಲಲಿತಾ— ಇಲ್ಲ, ನನ್ನ ಕೆಲಸ ಇನ್ನೂ ಮುಗಿದಿಲ್ಲ! ನಿಮಗೆ ನಾನು ನಾಳೆ ಮುಂಜಾನೆಯ ವರೆಗೆ ವಿಚಾರ ಮಾಡಲು ಸಮಯ ಕೊಡುತ್ತೇನೆ. ಅಷ್ಟರೊಳಗೆ ನಿಮ್ಮ ಉತ್ತರ ಬರಲಿಲ್ಲವಾದರೆ, ನಮ್ಮ ಮಂತ್ರಿವರ್ಯರ ಕೀರ್ತಿಯ ಮಂದಿರ ಯಾವ ಪಾಪದ ಮೇಲೆ ನಿಂತಿದೆಯೆಂಬುದನ್ನು ನಾನು ಜಗತ್ತಿಗ ಸಾರಿಹೇಳುತ್ತೇನೆ.

[ಅವಿನಾಶ ಗಂಟೆ ಬಾರಿಸುತ್ತಾನೆ ಸೇವಕ ಪ್ರವೇಶಿಸುತ್ತಾನೆ.]

ಅವಿನಾಶ— ಕಾಸೀಮ, ಇವರನ್ನು ತಮ್ಮ ಕಾರಿನಲ್ಲಿ ಕೂಡಿಸು, ಹೋಗು.

[ಲಲಿತಾ ಹೋಗುತ್ತಾಳೆ. ಹೋಗುವ ಮೊದಲು ಸುಧಾನ ಕಡೆಗ ನೋಡಿ, ಅವಳಿಗೆ ಮುಸಲ್ಮಾನ ಪದ್ಧತಿಯಿಂದ ಬಾಗಿ ನಮಸ್ಕರಿಸಿ ಹೊರಗೆ ಹೋಗುತ್ತಾಳೆ. ಸುಧಾ ಸ್ತಂಭಿತಳಾಗಿ ನಿಂತುಕೊಳ್ಳುತ್ತಾಳೆ.]

ಸುಧಾ— [ಕೆಲಹೊತ್ತಿನ ಮೌನವನ್ನು ಮುರಿದು] ನೀವು ಈ ವೈಭವವನ್ನು, ಈ ಕೀರ್ತಿಯನ್ನು ಯಾವ ಸಾಧನದ ಮೂಲಕ ಗಳಿಸಿದಿರಿ? ಸರಕಾರದ ಗುಪ್ತ ಕಾಗದಪತ್ರಗಳನ್ನು ಮಾರಿ ನೀವು ಹಣವನ್ನು ಗಳಿಸಿದಿರಾ? ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುವದಿಲ್ಲವೆ?—ಅವಿನಾಶ, [illegible] ಸುಳ್ಳು, ಸುಳ್ಳು, ಎಂದು ನನ್ನ ಕಿವಿಗಳು ಹಿಂದುಹೋಗುವ ಹಾಗೆ ಚೀರಿ ಹೇಳಿ. ನೀವು ನನಗೆ ಸುಳ್ಳು ಹೇಳಿದರೂ ಚಿಂತೆಯಿಲ್ಲ. ನಮ್ಮ ಬಾಳಿನ [illegible] ಯೆಂದು ಹೇಳಿರಿ [ಆವೇಗದಿಂದ ಕೋಚಿನ ಮೇಲೆ ಕುಸಿದು ಕೊಳ್ಳುವಳು.]

ಅವಿನಾಶ— [ಸುಧಾಳ ಹತ್ತಿರ ಹೋಗಿ ಕುಳಿತುಕೊಳ್ಳುತ್ತ] ನಾನು ನಿನಗೆ ಸುಳ್ಳು ಹೇಳಲಾರೆ, ಸುಧಾ! ಬಲಿನಾ ಹೇಳಿದ್ದೆಲ್ಲ ಸತ್ಯವಾಗಿದೆ.

ಸುಧಾ — ಹೌದೇ? [ದೂರ ಸರಿದು ನಿಲ್ಲುತ್ತಾಳೆ] ದಯಮಾಡಿ ನನ್ನ ಹತ್ತಿರ ಬರಬೇಡಿರಿ. ನಿಮ್ಮ ಸ್ಪರ್ಶವೂ ನನಗೆ ಅಸಹ್ಯವಾಗಿದೆ.

ಅವಿನಾಶ— ಆದರೆ, ಸುಧಾ, ಸ್ವಲ್ಪ ನನ್ನ ಮಾತು ಕೇಳಬಾರದೆ? ಯಾವ ಕಠಿಣ ಪರಿಸ್ಥಿತಿಯಲ್ಲಿ ನಾನು ಈ ಸಾಹಸಕೃತ್ಯವನ್ನು ಮಾಡಿದೆ, [illegible] ಕಲ್ಪನೆ ನಿನಗಿಲ್ಲ. ಅದನ್ನು ನಾನು ಹೇಳುತ್ತೇನೆ. ಸ್ವಲ್ಪ [illegible] ಆಮೇಲ

ಸುಧಾ— ನನ್ನ ಹತ್ತಿರ ಬರಬೇಡಿರಿ .. ನಿಮ್ಮ ಸ್ಪರ್ಶದಿಂದ ನನ್ನ ತನು ಮನಗಳೆಲ್ಲ ಮಲಿನವಾಗುವವೆಂದು ನನಗೆನಿಸತೊಡಗಿದೆ.

ಅವಿನಾಶ— ಸುಧಾ, ಸುಧಾ!

ಸುಧಾ — ನಾನಿದನ್ನು ಹೇಗೆ ಸಹಿಸಲಿ? ನಿಮ್ಮ ಜೊತೆಯ [illegible] ಈ ಸಂಸಾರದಿಂದ ನನ್ನ ಜೀವನವು ಸಾರ್ಥಕವಾಯಿತೆಂದು ನಾನು ಆನಂದದಲ್ಲಿದ್ದೆ. ಅವಿನಾಶ, ನೀವೇನು ಮಾಡಿದಿರಿ? ನೀವು ನನ್ನ ಪ್ರೀತಿಯ ಸ್ವರ್ಣ ಮಂದಿರವನ್ನು ಮುರಿದುಬಿಟ್ಟಿರಿ. ನನ್ನ [illegible] ನಿಮ್ಮ ಕಾಲಕೆಳಗೆ ತುಳಿದುಬಿಟ್ಟಿರಿ. [illegible]

ಅವಿನಾಶ—ಹೌದು, ಸುಧಾ, ನಾನು [illegible] ವಾದ ನಿನ್ನ ಮನಸ್ಸನ್ನು ನಾನು ಮೋಸಗೊಳಿಸಿದೆ. ಸುಧಾ, ನನ್ನನ್ನು ನೀನು ಕ್ಷಮಿಸಲಾರೆಯಾ? ಈಗಾಗಲೇ ನನ್ನ [illegible] ಘೋರ ಪ್ರಾಯಶ್ಚಿತ್ತವನ್ನು ನಾನು ಪಡೆದಿದ್ದೇನೆ. ನಾನು ನಾಳೆ ಸಮಾಜದಿಂದ ಬಹಿಷ್ಕೃತನಾಗುತ್ತೇನೆ

ಅವರಿ ಎವಕಸ್ಥಿ ಹೊವಲು ನನ್ನ ಪ್ರೀತಿಯ ಗುಡಿಯೊಳಗಿಂದ, ನನ್ನ ನುಖದ ಏಕಮೇವ ಆ ಕರಯಾದ ನನ್ನ ಈ ಮನೆಯೊಳಗಿಂದ, ನಾನು ಈಗಾಗಲೇ ಬಹಿಷ್ಕೃತನಾಗಿದ್ದೇನೆ. ಇದಕ್ಕೂ ಹೆಚ್ಚಿನ ಶಿಕ್ಷೆಯನು ನನಗೆ ಯಾರೂ ವಿಧಿಸಲಾರರು. ನಾನು ಆ ಪಾಪದ ಕೆಲಸವನ್ನು ಯಾತಕ್ಕೆ ಮಾಡಿದೆ? ಸುಧಾ, ನಿನ್ನ ಪ್ರೀತಿ ನನಗೆ ದೊರಕಲೆಂದು, ನಿನ್ನ ಪತಿಯಾಗುವ ಪುಣ್ಯ ನನ್ನದಾಗ ಲೆಂದು ನಾನು ಆ ಪಾಪವನ್ನು ಮಾಡಿದೆ. ಸುಧಾ, ದೇವರಲ್ಲಿ ಕಾಣಬರುವ ದಾವ ಶುದ್ಧ ಚಾರಿತ್ರ್ಯವನ್ನು ನೀನು ನನ್ನಿಂದ ಅಪೇಕ್ಷಿಸಿದೆ ಇದೇ ನೀನು ನನ್ನ ಮೇಲೆ ಮಾಡಿರುವ ದೊಡ್ಡ ಅನ್ಯಾಯ! ಸುಧಾ, ನಾನು ದೇವರಲ್ಲ, ನಾನೊಬ್ಬ ಪಾಪಿ ಮಾನವ! ಎಲ್ಲ ಮಾನವರೂ ತಪ್ಪು ಮಾಡುತ್ತಾರೆ ತಪ್ಪು ಮಾಡುವುದೇ ಮನುಷ್ಯನ ಸಹಜ ಧರ್ಮವಾಗಿದೆಯೆಂದು ಎಲ್ಲರೂ ಹೇಳು ತ್ತಾರ ತಪ್ಪರಿಯದ ದೇವನೆಂದು ತಿಳಿಯದೆ ನಾನೊಬ್ಬ ಸಾಮಾನ್ಯ ಮನುಷ್ಯನೆಂದು ಭಾವಿಸಿ, ಸುಧಾ, ನೀನು ನನ್ನನ್ನು ಪ್ರೀತಿಸಲಾರೆಯಾ? ನನಗೆ ಹೆಣ್ಣಿನ ಪೂಜೆ ಬೇಡ, ನನಗೆ ದೇವತೆಯ ಮಹಿಮೆ ಬೇಡ, ನನಗೆ ತಾಯಿಯ ಕ್ಷಮೆ ಬೇಕು. ನಾನು ಕಲಂಕಿತನಾಗಿ ನಿನ್ನ ಕಡೆಗ ಧಾವಿಸಿ ಬಂದೆ. ಇದರ ಹೊಲಸನ್ನು ತೊಳೆದು ತಾಯಿಯ ವಾತ್ಸಲ್ಯದಿಂದ ನೀನು ನನ್ನನ್ನು ಕರುಣೆಯ ಕೈಯಿಂದ ಎತ್ತಿಕೊಳ್ಳಬೇಕೆಂದು ನಾನು ಹಂಬಲಿಸಿದ ಆದರ ನನಗೆ ನೀನು ಅಂತಹ ಪ್ರೀತಿಯನ್ನು ಕೊಡದೆಹೋದೆ ನಿನ್ನ ಕಠೋರ ದೃಷ್ಟಿಯನ್ನು ಕಂಡು ನನ್ನ ಹೃದಯವು ಭೀತಿಯಿಂದ ಕಂಪಿತವಾಯಿತು ನಿನಗೆ ನನ್ನ ತಪ್ಪುಗಳನ್ನು ಬಿಚ್ಚಿ ತೋರಿಸುವ ಧೈರ್ಯ ನನಗಾಗಲಿಲ್ಲ. ಸುಧಾ, ನಿನ್ನ ಬರಿಯ ಉಪೇ ಕ್ಷೆಯೇ ನನ್ನ ಜೀವನದ ಕುಠಾರವಾಯಿತು. ನೀನೇ ನನ್ನ ಬಾಳುವೆಯನ್ನು ಹಾಳುಮಾಡಿದೆ ನನ್ನ ತಪ್ಪಿದ ಹೆಜ್ಜೆಯನ್ನು ನಾನು ಸಾವರಿಸುವ ಪೂರ್ವ ದಲ್ಲಿಯೇ ನೀನು ನನ್ನನ್ನು ಅಧಃಪಾತದ ಕೂಪದಲ್ಲಿ ನೂಕಿಬಿಟ್ಟೆ ಮುಗಿ ಯಿತು. ಸುಧಾ, ಇದೇ ನನ್ನ ದುರಂತ ನಾಟಕದ ಕೊನೆಯ ಪ್ರವೇಶ!

[ಅವಿನಾಶ ಹೊರಗೆ ಹೋಗುತ್ತಾನೆ ಸುಧಾ ಬಿಕ್ಕಿ ಬಿಕ್ಕಿ ಅಳುತ್ತ ಅಲ್ಲಿಯೇ ಒಂದು ಕೋಚಿನ ಮೇಲೆ ಬಿದ್ದುಕೊಳ್ಳುತ್ತಾಳೆ]

ದೃಶ್ಯ ೩

[ಸಮಯ ರಾತ್ರಿಯ ಒಂಭತ್ತು ಗಂಟೆ ಸ್ಥಳ ಶೇಖರನ ಮನೆ ಶೇಖರ ಹೊರಗೆ ಹೋಗುವ ತಯಾರಿಯಲ್ಲಿದ್ದಾನೆ]

ಶೇಖರ— ಆಚಾರಿ, ಇಲ್ಲಿ ಬಾ! ಇದೇನು? ಈ ಕೆಂಪು ಟಾಯ್ ನನಗೆ ಕೊಡಬೇಡಾ ಅಂತ ಎಷ್ಟು ಸಲ ಹೇಳಿಲ್ಲ?

ಆಚಾರಿ— ತಪ್ಪಾಯಿತು, ರಾಯರೆ!

ಶೇಖರ— ಇದನ್ನು ಕಟಕೊಂಡರ ಜನರು ನನಗ ಕಮ್ಯುನಿಸ್ಟ ಅಂತ ಕರೆಯಲಿಕ್ಕಿಲ್ಲೇನು?

ಆಚಾರಿ— ಹೌದು, ರಾಯರೆ!

ಶೇಖರ— ನಾನು ಕಮ್ಯುನಿಸ್ಟ ಆಗಬೇಕಾದರೆ ನನ್ನ ಉದ್ಯೋಗ ಹೋಗಬೇಕು, ಇಲ್ಲದಿದ್ದರೆ ನಾನು ದಿವಾಳಿ ತೆಗೆಯಬೇಕು.

ಆಚಾರಿ— ಕಾರಣ ಇಲ್ಲರಿ.

ಶೇಖರ— ಅಂದರೆ?

ಆಚಾರಿ— ಶ್ರೀಮಂತರೆ ಕಮ್ಯುನಿಸ್ಟ ಆಗತಾರ್ರಿ.

ಶೇಖರ—ಅಂದರೆ ನಾನು ಕಮ್ಯುನಿಸ್ಟ ಆಗಬೇಕೂ ಅಂತ ಅಂತೀಯಾ?

ಆಚಾರಿ— ಇಲ್ಲ ರಾಯರೆ.

ಶೇಖರ— ಅಂದರೆ ನಾನು ಏನು ಮಾಡಬೇಕಂತೀ?

ಆಚಾರಿ— ಮದಿವಿ ಮಾಡಿಕೊಳ್ರಿ, ರಾಯರೆ.

ಶೇಖರ-- ಯಾಕ?

ಆಚಾರಿ— ಹೆಂಗಸಿಲ್ಲದ ಈ ಮನಿ ಮಸೀದಿಹಾಂಗ ಹಾಳ ಕಾಣಸ್ತದ.

ಶೇಖರ— ಮನಿ ಸಿಂಗಾರ ಮಾಡಬೇಕೂ ಅಂತ ಮದಿವಿ ಆಗಬೇಕೇನು?

ಆಚಾರಿ— ಅದರಿಂದ ನಿಮಗ ಸುಖಾನೂ ಆಗತದರಿ

ಶೇಖರ— ಮದಿವಿಯಿಂದ ಸುಖಾ ಆಗತದ ಅಂತ ನಿನಗ ಯಾರ ಹೇಳಿದರೋ?

ಆಚಾರಿ-- ಯಾರೂ ಹೇಳಲಿಲ್ಲರಿ ನನ್ನ ಅನುಭವದಿಂದ ಹೇಳತೀನ್ರಿ.

ಶೇಖರ— ಅಂದ್ರ ನಿನ್ನ ಮದಿವಿ ಆಗೇದೇನು ?

ಆಚಾರಿ— ಆಗಿತ್ತರಿ ನನ್ನ ಹೇಣ್ತಿ ತೀರಿಕೊಂಡಳು

ಶೇಖರ— ನೀನು ನನಗೀ ಮಾತನ್ನು ಎಂದಿಗೂ ಹೇಳಲಿಲ್ಲ. ಅದ್ಯಾಕೆ ?

ಆಚಾರಿ— ಅವಳ ನೆನಪು ಆದಕೂಡಲೆ ಅಳು ಬರತದರಿ

ಶೇಖರ— ಅಯ್ಯೋ ಪಾಪ ! ಹಾಂಗಿತ್ತಂದರ ನನಗಿಂತ ಮೊದಲು ನಿನ್ನದೇ ಮದಿವಿ ಮಾಡಬೇಕು. ನನ್ನ ಸಿಗರೇಟಿನ ಡಬ್ಬಿ ಎಲ್ಲ್ಯದ ಆಚಾರಿ?

ಆಚಾರಿ—[ಅತ್ತಿತ್ತ ಹುಡುಕಾಡಿ] ಇಕಾ, ಹಿಡೀರಿ ರಾಯರ, ನಿಮ ಗೊಂದು ಪತ್ರ ಬಂದದ್ರಿ

ಶೇಖರ— ಇಷ್ಟೊತ್ತನಕ ಏನ ಮಾಡತಿದ್ದಿ ?

ಆಚಾರಿ— ಮರತಿದ್ನರಿ !

ಶೇಖರ— ಮುದುಕ ಆಗಲಿಕ್ಕೆ ಹತ್ತೀದಿ, ಆಚಾರಿ.

[ಆಚಾರಿ ಹೋಗುತ್ತಾನೆ. ಶೇಖರ ಪತ್ರವನ್ನು ತೆಗೆದು ನೋಡುತ್ತಾನೆ]

ಹಾಂ, ಏನದು? ಯಾರ ಪತ್ರ? ಸುಧಾಬಾಯಿಯವರ ಪತ್ರ? ಅಂದರೆ? " ನನಗಿನ್ನು ನೀವೇ ಆಧಾರ ನಿಮ್ಮ ಭೆಟ್ಟಿಗೆ ಈ ಹೊತ್ತು ರಾತ್ರಿ ಬರುತ್ತೇನೆ ಇದನ್ನು ಯಾರಿಗೂ ಹೇಳಕೂಡದು —ಸುಧಾ "

ಸುಧಾಬಾಯಿಗೆ ತಿಳಿದುಹೋಗಿರಬೇಕು ಆಚಾರಿ, ಇಲ್ಲಿ ಬಾ, ನನ ಗೊಂದು ಕಪ್ಪು ಚಹಾ ತಂದುಕೊಡು. ನಾನೇನು ಇನ್ನ ಹೊರಗೆ ಹೋಗೋ ದಿಲ್ಲ ನನ್ನ ಕೋಟು, ಟಾಯ್, ಒಳಗ ಇಟ್ಟುಬಿಡು ಈ ಬೂಟೂ ಹೋಗಲಿ, ಒಳಗೆ ನನ್ನ ಸ್ಲಿಪರ ತಂದುಕೊಡು.

ಆಚಾರಿ— ಹೂನ್ರಿ. ಹೊರಗ ಕಾಕಾಸಾಹೇಬರು ಬಂದಾರ್ರಿ.

ಶೇಖರ— ಆಂ ! ಈಗ? ಸುಧಾಬಾಯಿ ಬರುವ ಹೊತ್ತಾಯಿತು ಇಂಥಾ ಹೊತ್ತಿಗೆ ನಮ್ಮ ಪಿತೃದೇವತೆ ಪ್ರಸನ್ನ ಆದರೆ—ಅಯ್ಯೋ ಇನ್ನೇನು ಮಾಡಬೇಕು? ಹೂಂ. ನೋಡೋಣ. ಬಂದ ಪ್ರಸಂಗವನ್ನು ಎದುರಿಸು ವವನೇ ಗಂಡಸು !

ರಾಮರಾಯ— ಏನು ಮನೆಯಲ್ಲಿಯೇ ಇದ್ದೀರಾ ?

ಶೇಖರ— ಈಗ ಹೊರಗೆ ಹೋಗುವ ತಯಾರಿಯಲ್ಲಿದ್ದೆ ಅಷ್ಟರಲ್ಲಿ ನೀವು ಬಂದಿರಿ

ರಾಮರಾಯ— ಹಾಂ ನನಗನಿಸಿತ್ತು ನೀನೀಗ ಮನೆಯಲ್ಲಿದ್ದದ್ದೇ ನನಗೆ ಆಶ್ಚರ್ಯ! ಇದನ್ನೆಲ್ಲ ಬಿಟ್ಟುಕೊಡ್ರಿ ಇನ್ನು ಮತ್ತೆ ಮದಿವೆ ಮಾಡಿಕೊಂಡು ಸಜ್ಜನರಾಗಿ ಬಾಳಿರಿ.

ಶೇಖರ-- ಅಂದರೆ ಮದಿವೆ ಮಾಡಿಕೊಂಡವರಷ್ಟೇ ಸಜ್ಜನರಾಗುತ್ತಾರೇನು!

ರಾಮರಾಯ—ಹೌದು, ಅದರೊಳಗೇನು ಸಂಶಯ? ಇದು ನೋಡು, ಇಲ್ಲಿ ಕೂತುಕೊ ನಾನು ಇನ್ನೂರು ಮೈಲು ಹಾಕಿ ಬಂದದ್ದು ಬರಿಯ ಹರಟೆಗಾಗಿ ಅಲ್ಲ ನಿನ್ನ ವಿಷಯವಾಗಿ ಗಂಭೀರವಾದ ಚರ್ಚೆ ಮಾಡಬೇಕಾಗಿದೆ

ಶೇಖರ—ನನ್ನ ವಿಷಯವಾಗಿ ಚರ್ಚೆ! ಹಿಂದಿನ ನಾನೇನು ಯಾರಿಗೂ ಅರ್ಥವಾಗದ ನವ್ಯ ಕವಿತೆಯೇನು? ಅಥವಾ ಹೇಸಿದ ವಿಷಯವನ್ನೇ ಮತ್ತೆ ಮತ್ತೆ ತೋರಿಸುವ ಅಶ್ಲೀಲ ಚಿತ್ರಪಟವೋ?

ರಾಮರಾಯ— ನಿನ್ನ ವಿಷಯವಾಗಿ ಚರ್ಚೆ ಅಂದರೆ ನಿನ್ನ ಮದಿವೆಯ ಚರ್ಚೆ!

ಶೇಖರ— ಮದಿವೆಯ ಚರ್ಚೆ? ಇಷ್ಟು ರಾತ್ರಿಯಲ್ಲಿ?

ರಾಮರಾಯ— ರಾತ್ರಿಯಲ್ಲಿ ಮದಿವೆಯ ಚರ್ಚೆ ಮಾಡಬಾರದೆಂಬ ನಿರ್ಬಂಧವಿದೆಯೇನು?

ಶೇಖರ— ಇಲ್ಲ, ಆದರೂ ಇದು ನಿದ್ರೆಯ ಸಮಯ! ಮದಿವೆಯಂಥ ಗಂಭೀರವಾದ ಚರ್ಚೆಯನ್ನು ಅರನಿದ್ರೆಯಲ್ಲಿ ಮಾಡಬಾರದು.

ರಾಮರಾಯ-- ನಿಮ್ಮ ನಿದ್ರೆಯನ್ನು ಹೊಡೆದೋಡಿಸುವ ಕೆಲಸವನ್ನು ನಾನು ಮಾಡುತ್ತೇನೆ. ಆಚಾರಿ, ಇಲ್ಲಿ ಬಾ, ನಿಮ್ಮ ರಾಯರಿಗೆ ಸ್ವಲ್ಪ ಚಹಾ ತಂದುಕೊಡು

ಆಚಾರಿ— ಹೂನರಿ!

ರಾಮರಾಯ— ಹೂಂ ಹೇಳು. ನೀನು ಯಾವಾಗ ಮದಿವೆಯಾಗುವಿ?

ಶೇಖರ— ನೋಡೋಣಂತ. ಅವಸರ ಇಷ್ಟ್ಯಾಕ ಗಡಿಬಿಡಿ?

ರಾಮರಾಯ— ಗಡಿಬಿಡಿ? ಅಂದರೆ ಕೂದಲು ನರೆತಮೇಲೆ, ಹಲ್ಲು ಬಿದ್ದಮೇಲೆ—ಮದಿವೆಗೆ ನಿಲ್ಲುವಿಯೇನು ?

ಶೇಖರ— ನನ್ನ ವಯಸ್ಸು ಬಹಳ ಆಗಿಲ್ಲ, ಕಾಕಾಸಾಹೇಬ!

ರಾಮರಾಯ— ಸಾಹೇಬ, ನಿನ್ನ ವಯಸ್ಸು ನಿನಗಿಂತಲೂ ನಿನ್ನ ಅಪ್ಪಗ ಹೆಚ್ಚು ಗೊತ್ತದ ಈ ವಯಸ್ಸಿಗೆ ನನ್ನ ಮೊದಲನೇ ಹೆಂಡತಿ ತೀರಿ ಹೋಗಿದ್ದಳು ನಾನು ಎರಡನೇ ಮದಿವಿ ತಯಾರಿ ಮಾಡತಿದ್ದೆ, ಗೊತ್ತಿದೆ ಯೇನು? ಸ್ವತಃಕ್ಕ ತಲೀ ಇಲ್ಲ, ಮಂದೀದು ನೋಡಿ ಕಲಿಯೋ ಹಾಗಿಲ್ಲ ನಿನ್ನ ಗೆಳೆಯ, ಅವಿನಾಶ, ನೋಡು, ಹೇಗೆ ಹಣವನ್ನೂ, ಹೆಸರನ್ನೂ ಗಳಿಸಿ ದ್ದಾನೆ. ನಾಳೆ ಈ ರಾಜ್ಯದ ಮುಖ್ಯಮಂತ್ರಿಯಾಗುತ್ತಾನೆ ನೀನು ಮದಿವೆ ಯಂಥ ಸಾಮಾನ್ಯ ಮಾತನ್ನೂ ಮಾಡಬಾರದೆಂದರೆ ನಾಚಿಕೆಯಾಗಬೇಕು ನಿನ್ನ ತಾಯಿ ಹೇಳಿ ಕಳಿಸಿದ್ದಾಳೆ ಬರುವ ವೈಶಾಖದಲ್ಲಿ ಮನೆಗೆ ಸೊನೆ ಬರ ಲಿಕ್ಕೆ ಬೇಕು, ಅಂತ

ಶೇಖರ— ಆಗಲಿ. ಕಾಕಾಸಾಹೇಬ, ಚಹಾ ತಯಾರಾಗಿರಬೇಕು. ಒಳಗೆ ಹೋಗೋಣ ನಡೆಯಿರಿ

ರಾಮರಾಯ— ಒಳಗ ಯಾಕ ಹೋಗಬೇಕು? ಅಂವ ಇಲ್ಲಿ ತಂದು ಕೊಡುವದಿಲ್ಲೇನು?

ಶೇಖರ— ಕೊಡಬಹುದು ಆದರೆ ಒಳಗೆ ಚಹದ ಕೋಣೆಯಿದೆ. ಅಲ್ಲಿಯೇ ಚಹ ತೆಗೆದುಕೊಳ್ಳುವದು ಒಳ್ಳೆಯದಲ್ಲವೆ?

ರಾಮರಾಯ— ಆಗಲಿ, ನಡೆಯಿರಿ. ಇಂಗ್ಲಂಡಕ್ಕ ಹೋಗಿ ಇದನ್ನೇ ಕಲಿತಂತೆ ಕಾಣಿಸುತ್ತದೆ

[ಒಳಗೆ ಹೋಗುತ್ತಾರ ಸ್ವಲ್ಪ ಹೊತ್ತಿನ ಮೇಲೆ ಶೇಖರ, ಆಚಾರಿ ಪ್ರವೇಶಿಸುತ್ತಾರ.]

ಶೇಖರ— ಆಚಾರಿ, ತಲೀ ಶಾಂತ ಇಟ್ಟು ಕೆಲಸ ಮಾಡಬೇಕಾಗೇದ. ಏನಾದರೂ ಗಡಿಬಿಡಿ ಮಾಡಿದೆಯೆಂದರೆ ತಲೀ ಒಡೀತೀನಿ, ನೋಡು

ಆಚಾರಿ— ಹೇಳ್ರಿ ರಾಯರೆ, ಏನು ಮಾಡಬೇಕು?

ಶೇಖರ— ಈಗ ಇಲ್ಲಿ ಒಬ್ಬ ಹೆಂಗಸು ಬರಬಹುದು. ಬಂದಕೂಡಲೆ ಅವಳನ್ನು ಆ ಕೋಣೆಯಲ್ಲಿ ಕೂಡಿಸು. ನಾನು ಸ್ವಲ್ಪ ಹೊತ್ತಿನಲ್ಲಿಯೇ ಬರು ತ್ತೇನೆಂದು ಹೇಳು.

ಆಚಾರಿ – ಆಗಲಿ, ರಾಯರೆ !

[ರಾಮರಾಯರ ಪ್ರವೇಶ]

ರಾಮರಾಯ – ನಾನು ಒಳಗೆ ಇದ್ದದ್ದನ್ನು ಮರೆತುಬಿಟ್ಟಿರೇನು ? [illegible] ಮನೆಗೆ ನಾನು ನೌಕರಿ ಬೇಡಲಿಕ್ಕೆ ಬಂದೀನಿ ಅಂತ ತಿಳಿದೀರೋ, [illegible]

ಶೇಖರ – ಬಂದೆ, ಬಂದೆ, ಆಚಾರಿ, ನಾನು ಹೇಳಿದ್ದು ಮರೀಬ್ಯಾಡ [illegible] ರ ಯಾರಾದರೂ ನಾ ಮನೀ ಒಳಗ ಇಲ್ಲ ಅಂತ ಹೇಳು.

[ಒಳಗೆ ಹೋಗುತ್ತಾನೆ ಲಲಿತಾ ಪ್ರವೇಶಿಸುತ್ತಾಳೆ]

ಆಚಾರಿ – ಅವರು ಒಳಗ ಅವರ ತಂದೀ ಜೋಡಿ ಮಾತಾಡತಾ ಕೂತುಕೊಂಡಾರ [illegible] ನಿಮಗ ಇಲ್ಲಿ ಒಳಗ ಕೂಡಲಿಕ್ಕೆ ಹೇಳ್ಯಾರ

ಲಲಿತಾ – ನನಗೆ ಕೂಡಲಿಕ್ಕೆ ಹೇಳಿದ್ದಾರೆ ನಾನು ಬರುತ್ತೇನೆಂದು [illegible] (ಸ್ವಗತ) ಶೇಖರನ ಕಡೆಗೆ ಮತ್ತ್ಯಾರಾದರೂ ಬರುವವ [illegible] ಇಷ್ಟು ಅಪರಾತ್ರಿಯಲ್ಲಿ ಬರುವ ಹೆಂಗಸ್ಯಾರು ? (ಆಚಾರಿಗೆ) [illegible] ಹೊರಗ ಗಾಡಿಯೊಳಗ ನನ್ನ ವ್ಯಾನಿಟಿಬ್ಯಾಗ ಅದ. ಅದನ್ನ [illegible]

[illegible] ಲಲಿತಾ ಶೇಖರನ ಸಮೀಪ ಹೋಗುತ್ತಾಳೆ. ಅಲ್ಲ [illegible] ಉತ್ಸುಕತೆಯಿಂದ ತೆರೆದು ಓದುತ್ತಾಳೆ]

" [illegible] ನಿಮ್ಮ ಭೆಟ್ಟಿಗೆ ಈ ಹೊತ್ತು ರಾತ್ರಿ ಬರುತ್ತೇನೆ. ಇದನ್ನು ಯಾರಿಗೂ ಹೇಳಬೇಡಿರಿ -- ಸುಧಾ. " ಓಹೋ ! ಸುಧಾ ! ಇದನ್ನು ಈ ಸುಧೆಯಿಂದ ಸುಲಭವಾಗಿ ವಿಷವನ್ನು ಸುರಿಯಬಹುದು.

[ಪತ್ರವನ್ನು ಬಚ್ಚಿಡಬೇಕೆಂಬ ಪ್ರಯತ್ನದಲ್ಲಿರುವಾಗಲೇ ಆಚಾರಿಯ ಪ್ರವೇಶ. ಗಡಿಬಿಡಿಯಿಂದ ಅಲ್ಲಿರುವ ಪುಸ್ತಕವನ್ನು ಎತ್ತಿಕೊಂಡು ಅದರಲ್ಲಿ ಪತ್ರವನ್ನು ಅದಗಿ ಸಿಡುತ್ತಾಳೆ.]

ಆಚಾರಿ – ಒಡೀರಿ ನಿಮ್ಮ ಬ್ಯಾಗು. ಹತ್ತಿರದ ಕೋಣೆಯಲ್ಲಿ ನಿಮ್ಮನ್ನು ಕೂಡಿಸಲಿಕ್ಕೆ ಹೇಳ್ಯಾರ, ರಾಯರು. ಬರ್ರಿ.

[ಇಬ್ಬರೂ ಹೋಗುತ್ತಾರೆ. ಆಚಾರಿ ಬಾಗಿಲು ಮುಂದೆಮಾಡಿ ರಂಗಸ್ಥಳದ ಮುತ್ತೊಂದು ಬದಿಗೆ ಹೋಗುತ್ತಾನೆ. ಅಷ್ಟರಲ್ಲಿ ರಾಮರಾಯರು ಮತ್ತು ಶೇಖರ ಪ್ರವೇಶಿಸುತ್ತಾರೆ.]

ಶೇಖರ— ಮದಿವೆ ಮಾಡಿಕೊಳ್ಳಲು ನನಗೆ ಯಾವ ತಾತ್ವಿಕ ವಿರೋಧವೂ ಇಲ್ಲ ಆದರೆ ಹುಡುಗೆಯನ್ನು ನಾನು ನೋಡಿ ಗೊತ್ತು ಮಾಡಬೇಕು

ರಾಮರಾಯ-- ನೀನು ನೋಡಿ ಗೊತ್ತು ಮಾಡಬಹುದೆಂದು ಈಗ ಐದಾರು ವರ್ಷ ನಾವು ಸುಮ್ಮನೆ ಕೂತೆವು ನಿನ್ನ ಬ್ರಹ್ಮಚಾರೀ ಜೀವನ ಮುಗಿದೀತೆಂಬ ಭರವಸೆ ಈಗ ಉಳಿದಿಲ್ಲ ಇನ್ನು ನಾನೇ ನೋಡಿ ಹುಡುಗೆಯನ್ನು ಗೊತ್ತು ಮಾಡುತ್ತೇನೆ.

ಶೇಖರ— ಆದರೆ . .

ರಾಮರಾಯ— ಆದರೆ ಇಲ್ಲ, ಗೀದರೆ ಇಲ್ಲ ನಿನಗೆ ಇಪ್ಪತ್ತುನಾಲ್ಕು ತಾಸಿನ ಅವಧಿ ಕೊಡುತ್ತೇನೆ ಅಷ್ಟರಲ್ಲಿ ನೀನು ಮದಿವೆ ಗೊತ್ತುಮಾಡಲಿಲ್ಲವಾದರೆ ನಾನೇ ಮದಿವೆ ಮಾಡಿಬಿಡುತ್ತೇನೆ

ಶೇಖರ— ನೀವೇ? (ನಗುತ್ತ) ದ್ವಿಭಾರ್ಯಾ ಪ್ರತಿಬಂಧಕ ಕಾಯಿದೆ ಪಾಸಾಗಿ ಬಹಳ ದಿನಗಳಾದವು

ರಾಮರಾಯ— ಛೀ, ಛೀ, ಎಂಥಾ ಚ್ಯಾಷ್ಟಿ ಅದು. ನಿಮ್ಮ ಆಚಾರಿ ಎಲ್ಲಿದ್ದಾನ? ನನಗೊಂದು ಟ್ಯಾಕ್ಸಿ ತರಲಿಕ್ಕೆ ಹೇಳು

ಶೇಖರ-- ನನ್ನ ಗಾಡೀ ತಕ್ಕೊಂಡು ಹೋಗ್ರಿ. ನಾ ಡ್ರಾಯವ್ಹರನ್ನ ಕರೀತೀನಿ.

[ಇಬ್ಬರೂ ಹೋಗುತ್ತಾರೆ ಸ್ವಲ್ಪ ಹೊತ್ತಿನಲ್ಲಿ ಶೇಖರ-ಅವಿನಾಶರು ಪ್ರವೇಶಿಸುತ್ತಾರೆ.]

ಅವಿನಾಶ— ಶೇಖರ, ನೀನು ಮನೆಯಲ್ಲಿ ಇರುವಿಯೋ ಇಲ್ಲವೋ ಎಂಬ ಸಂಶಯವಿತ್ತು ನನಗೆ ಆದರೂ ಇಷ್ಟು ಅಪರಾತ್ರಿಯಲ್ಲಿ ನಿನ್ನ ಕಡೆಗೆ ನಾನು ಧಾವಿಸಿ ಬಂದೆ ನಾಳೆ ಬೆಳಗಾಗುವ ಪೂರ್ವದಲ್ಲಿಯೇ ನನ್ನ ಜೀವನವೆಲ್ಲ ಉಧ್ವಸ್ತವಾಗುತ್ತದೆ ಇನ್ನು ನನಗೆ ನಿನ್ನ ಹೊರತಾಗಿ ಯಾರ ಆಧಾರವೂ ಇಲ್ಲ. ಈ ಸಂಕಟ ಕಾಲದಲ್ಲಿ ನಿನ್ನ ಸ್ನೇಹದ ಹೊರತು ನನಗೆ ಬೇರೆ ಯಾತರ ಬಲವಿದೆ?

ಶೇಖರ— ಮಿತ್ರಪ್ರೇಮಕ್ಕಿಂತಲೂ ಪತ್ನಿಪ್ರೇಮವೇ ಅಧಿಕವಾಗಿದುತ್ತದೆ, ಅವಿನಾಶ

ಅವಿನಾಶ-- ನಾನು ಆ ಪ್ರೇಮದಿಂದ ಇಂದು ಬಹಿಷ್ಕೃತನಾಗಿದ್ದೇನೆ, ಶೇಖರ. ಅವಳಿಗೆಲ್ಲ ಗೊತ್ತಾಗಿಬಿಟ್ಟಿದೆ. ಈಗ ನನ್ನ ಪಾಲಿಗೆ ಬಂದದ್ದು ಅವಳ ದ್ವೇಷ

ಶೇಖರ— ಸುಧಾಬಾಯಿಗೆ ಈ ವಿಷಯವನ್ನು ಯಾರು ಹೇಳಿದರು?

ಅವಿನಾಶ— ಲಲಿತಾಬಾಯಿ ಸ್ವತಃ ಬಂದು ಎಲ್ಲ ಹೇಳಿಹೋದಳು ನನ್ನ ಕೀರ್ತಿಯ ಕಮಲ ಪಾಪದ ರಾಡಿಯಲ್ಲಿ ನಿಂತಿದೆಯೆಂದು ತೋರಿಸಿ ಕೊಟ್ಟಳು ಆದರೆ, ಶೇಖರ, ರಾಡಿಯೊಳಗೆ ಅರಳಿದ ಕಮಲವನ್ನು ನಾವು ದೇವರಿಗೆ ಅರ್ಪಿಸುವದಿಲ್ಲವೆ? ಆದರೆ ನನ್ನ ಹೆಂಡತಿಗೆ ಮಾತ್ರ ಅದು ಅಗ್ರಾಹ್ಯ ವಾಯಿತು

ಶೇಖರ— ಕಲ್ಲಿನ ದೇವರಿಗೂ ಹೆಂಗಸರಿಗಿಂತ ಹೆಚ್ಚು ಕೋಮಲ ಹೃದಯವಿರುತ್ತದೆಯೆಂದ ಹಾಗಾಯಿತು

ಅವಿನಾಶ-- ಹೌದು, ಶೇಖರ! ಸುಧಾ ನನ್ನ ಪ್ರೇಮವನ್ನು ಧಿಕ್ಕರಿ ಸಿವಳು. ನಾನು ನಿನಗೆ ಹೇಗೆ ತಿಳಿಸಿಹೇಳಲಿ? ಸುಧಾ ನಿಜವಾಗಿಯೂ ನನ್ನ ಜೀವನದ ಸುಧೆಯಾಗಿದ್ದಳು. ನನ್ನ ಪ್ರತಿಷ್ಠೆಯ ಪ್ರಾಣವಾಗಿದ್ದಳು ಅವಳು ಕೊಟ್ಟ ಸ್ಫೂರ್ತಿಯಿಂದಲೇ ನಾನು ಕೀರ್ತಿಯ ಶಿಖರವನ್ನು ಏರಿದೆ ನಾನು ಭಾವನಾಪ್ರಧಾನನೆಂದು ನೀನು ನನ್ನನ್ನು ಜರಯಬಹುದು. ಆದರೆ ನಿನಗೆ ತಿಳಿಯಲಾರದು, ನನ್ನ ಸುಧೆಯ ಸ್ನೇಹದಿಂದ ನನ್ನ ಜೀವನವೆಲ್ಲ ಹೇಗೆ ಪ್ರದೀಪ್ತ ವಾಗಿತ್ತೆಂದು ಶೇಖರ, ಒಂದೇ ಒಂದು ಕ್ಷಣದಲ್ಲಿ ಅವಳ ಹೃದಯ ಬತ್ತಿ ಕಲ್ಲಾಗಿಹೋಯಿತು. ನನ್ನ ಮನೆಯನ್ನು ಬೆಳಗಿಸಿದ ಮಮತೆಯ ದೀಪ ಆರಿಹೋಯಿತು.

ಶೇಖರ— ಹೀಗೆ ಚಿಕ್ಕಮಗುವಿನ ಹಾಗೆ ಕುಸಿದು ಹೋಗಬೇಡ, ಅವಿ ನಾಶ, ಸ್ವಲ್ಪ ಧೈರ್ಯ ತಾಳು!

ಅವಿನಾಶ-- ನನ್ನ ವಿಚಾರಶಕ್ತಿಯೆಲ್ಲ ಬರಿದಾಗಿದೆ ನನ್ನ ತಲೆ ಒಡೆದುಹೋಗುವದೋ ಏನೋ ಎನ್ನುವಷ್ಟು ನೋಯ್ಯತೊಡಗಿದೆ.

ಶೇಖರ— ಒಂದು ಕಪ್ಪು ಬಿಸಿಬಿಸಿ ಕಾಫಿ ಮಾಡಿಸುತ್ತೇನೆ ಅದನ್ನು ಕುಡಿದು ಇಲ್ಲಿಯೇ ವಿಶ್ರಮಿಸು. ಯಾವ ವಿಚಾರವನ್ನೂ ಮಾಡಬೇಡ. ಆಚಾರಿ, ಆಚಾರಿ, ಇಲ್ಲಿ ಬಾ, ರಾಯರಿಗೆ ಸ್ವಲ್ಪ ಕಾಫಿ ತಂದುಕೊಡು ಮತ್ತೆ ನೋಡು. [ಅವನ ಹತ್ತಿರ ಹೋಗಿ, ಕಿವಿಯಲ್ಲಿ] ಆ ಹೆಂಗಸು ಬಂದರೆ ನಾವು ಮನೆಯಲ್ಲಿ ಇಲ್ಲವೆಂದು ಹೇಳು.

ಆಚಾರಿ— ಅವರು ಆಗಲೇ ಬಂದಿದ್ದಾರೆ. ಅವರನ್ನು ಪಕ್ಕದ ಕೋಣೆ ಯಲ್ಲಿ ಕೂಡಿಸಿದ್ದೇನೆ.

ಶೇಖರ— ಮುಗಿದೇಹೋಯಿತು. ಇನ್ನು ಇವರೊಳಗಿಂದ ಪಾರಾಗ ಬೇಕಾದರೆ—ದೇವರೇ ಇಳಿದು ಬರಬೇಕು

[ಹೋಗಿ ಅವಿನಾಶನ ಹತ್ತಿರ ಕುಳಿತುಕೊಳ್ಳುತ್ತಾನೆ.]

ಅವಿನಾಶ— ಇದು ಎಂತಹ ಕತ್ತಲೆ? ಮರಣಕ್ಕಿಂತಲೂ ಭಯಂಕರ ವಾದ ಕತ್ತಲೆ ಇದರಲ್ಲಿ ಉಸಿರಾಡುವದೂ ನನಗೆ ಅಶಕ್ಯವಾಗಿದೆ

ಶೇಖರ— ಅವಿನಾಶ, ಸುಧಾಬಾಯಿಯನ್ನು ನೀನು ನಿಜವಾಗಿಯೂ ಪ್ರೀತಿಸುತ್ತೀಯಾ ?

ಅವಿನಾಶ— ನಾನು ಹೇಗೆ ಹೇಳಲಿ? ಸುಧೆಗೆ ನಾನು ನನ್ನ ಸರ್ವಸ್ವ ವನ್ನೂ ಅರ್ಪಿಸಿದ್ದೆ ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ನನಗನಿಸುತ್ತಿತ್ತು ಗಂಡಸು ಹೆಣ್ಣಿನ ಸೆರೆಯಲ್ಲಿ ಸಿಗಬಾರದು ಮಹತ್ವಾಕಾಂಕ್ಷೆಯೇ ಪುರುಷಜೀವ ನದ ಇತ್ಯರ್ಥವೆಂದು ನಾನು ಭಾವಿಸಿದ್ದೆ. ಆದರೆ ಅವಳನ್ನು ಕಂಡಕೂಡಲೆ ಅದೆಲ್ಲ ಮಂಜಿನಂತೆ ಮಾಯವಾಯಿತು ಅವಳ ಪ್ರೀತಿಯಿಂದ ನನ್ನ ಬಾಳಿ ನಲ್ಲಿ ಹೊಸ ಬೆಳಕು ಬೆಳಗಿದಂತಾಯಿತು ಹೆಣ್ಣು ಗಂಡಿನ ಸೆರೆಯಲ್ಲ, ಶೇಖರ, ಅವಳು ಅವನ ಸ್ವರ್ಗದ ಸಿರಿ ! ಗಂಡಿನ ಶಕ್ತಿ ಅವನ ಕೈಯಲ್ಲಿರುವದಿಲ್ಲ, ಅವನು ಗಳಿಸಿದ ಹೆಂಗಸಿನ ಹೃದಯದಲ್ಲಿರುತ್ತದೆ ಶೇಖರ, ಸುಧೆಯನ್ನು ಕಳೆದು ಕೊಂಡ ನಾನು ಎಲ್ಲವನ್ನೂ ಕಳೆದುಕೊಂಡಿದ್ದೇನೆ.

ಶೇಖರ— ಸುಧಾಬಾಯಿ ನಿನ್ನನ್ನು ಕ್ಷಮಿಸಬೇಕು. ಹೆಂಗಸರ ಪ್ರೀತಿ ಕ್ಷಮಾಶೀಲವಾಗಿರುತ್ತದೆಯೆಂದು ನಾನು ಕೇಳಿದ್ದೇನೆ.

ಅವಿನಾಶ— ಸುಧಾ ನನ್ನನ್ನು ಕ್ಷಮಿಸಲಾರಳು ಮೋಹ, ಪಾಪ ಗಳನ್ನರಿಯದ ಶುದ್ಧ ಜೀವನ ಸ್ಫಟಿಕದ ಹಾಗೆ ಕಠಿಣವಾಗಿರುತ್ತದೆ. ತನ್ನಂತೆ ಎಲ್ಲರೂ ಶುದ್ಧವಾಗಿರಬೇಕೆಂದು ಅದರ ಅಪೇಕ್ಷೆಯಿರುತ್ತದೆ.

ಶೇಖರ— ಆದರೆ ಅವರು ನಿನ್ನನ್ನು ಕ್ಷಮಿಸಬಹುದು ನನಗನಿಸುವ ಮಟ್ಟಿಗೆ ಅವರು ಇಷ್ಟರಲ್ಲಿ ನಿನ್ನನ್ನು ಕ್ಷಮಿಸಿರಲು ಸಾಕು.

ಅವಿನಾಶ— ಸುಳ್ಳು ಆಸೆ ಹಚ್ಚಿ ನನ್ನನ್ನು ಸಂತೈಸುವ ಪ್ರಯತ್ನ ಮಾಡಬೇಡ, ಶೇಖರ.

[ಆಚಾರಿ ಕಾಫಿ ತರುತ್ತಾನೆ]

ಶೇಖರ— [ಕಾಫಿಯ ಕಪ್ಪನ್ನು ಕೊಡುತ್ತ] ಅವಿನಾಶ, ಇದನ್ನಷ್ಟು ಕುಡಿ. ನಿನ್ನ ಮನಸ್ಸು ಶಾಂತವಾದೀತು

[ಅವಿನಾಶ ಕಾಫೀ ಕುಡಿಯುತ್ತಾನೆ]

ಶೇಖರ— ಅವಿನಾಶ, ನನಗೀಗ ಅತ್ಯಂತ ಮಹತ್ವದ ಕೆಲಸವಿದೆ ನೀನು ನನ್ನನ್ನು ಕ್ಷಮಿಸಬೇಕು ನಾಳೆ ನಾವು ಈ ವಿಷಯವನ್ನು ಕುರಿತು ಮತ್ತೆ ಮಾತನಾಡೋಣಂತೆ ನಿನ್ನ ಡ್ರಾಯವ್ಹರನನ್ನು ಕರಯಲೇನು?

ಅವಿನಾಶ— ನಾನು ಗಾಡೀ ತಂದಿಲ್ಲ ನಾನು ಹಾಗೆಯೇ ನಡೆದು ಬಂದೆ.

ಶೇಖರ— ನಡೆದು ಬಂದೆಯಾ? ನಾಲ್ಕು ಮೈಲು ದಾರಿಯನ್ನು?

ಅವಿನಾಶ— ನಾನು ಈ ಹೊತ್ತು ನಿನ್ನನ್ನು ಕಾಣಲು ನೂರು ಮೈಲು ನಡೆದು ಬರಬಹುದಾಗಿತ್ತು ಶೇಖರ, ನಾನು ಬಹಳ ವೇಳೆಯನ್ನು ತೆಗೆದು ಕೊಳ್ಳುವದಿಲ್ಲ ಒಂದೇ ಒಂದು ಮಹತ್ವದ ಮಾತು ನಿನಗೆ ಹೇಳಬೇಕಾಗಿದೆ.

ಶೇಖರ— ಹೇಳು, ಅಷ್ಟರಲ್ಲಿ ನನ್ನ ಗಾಡಿ ಬರಬಹುದು

ಅವಿನಾಶ— ಶೇಖರ, ನಾಳೆ ಕ್ಯಾಬಿನೆಟ್ ಮೀಟಿಂಗಿದ

[ಅಷ್ಟರಲ್ಲಿ ಒಳಗೆ ಏನೋ ಬಿದ್ದ ಸಪ್ಪಳವಾಗುತ್ತದೆ. ಅವಿನಾಶ ಗಾಬರಿಯಾಗಿ ತಟ್ಟನೆ ಎದ್ದು ನಿಲ್ಲುತ್ತಾನೆ]

ಅವಿನಾಶ— ಏನದು, ಶೇಖರ ?

ಶೇಖರ— ಏನೂ ಇಲ್ಲ, ಅವಿನಾಶ ! ಎಂಥ ಸಣ್ಣ ಮಾತಿಗೆ ನೀನು ಹೆದರುತ್ತೀಯಾ?

ಅವಿನಾಶ— ಆ ಕೋಣೆಯಲ್ಲಿ ಏನೋ ಸಪ್ಪಳವಾಯಿತು ! ಅಲ್ಲಿ ಬಾಗಿಲ ಮರೆಗೆ ನಿಂತುಕೊಂಡು ಯಾರೊ ನಮ್ಮ ಮಾತನ್ನು ಕೇಳುತ್ತಿದ್ದಾರೆ

ಶೇಖರ— ಆ ಖೋಲಿಯಲ್ಲಿ ಯಾರೂ ಇಲ್ಲ.

ಅವಿನಾಶ— ಅಲ್ಲಿ ಯಾರಾದರೂ ಇರಲಿಕ್ಕೇಬೇಕು ಅಹೋ, ಬಾಗಿಲು ಸ್ವಲ್ಪ ತೆರೆದಿದೆ. ಕೋಣೆಯಲ್ಲಿ ದೀಪ ಉರಿಯುತ್ತಿದೆ ಶೇಖರ, ನಾನು ಆಡಿದ ಪ್ರತಿಯೊಂದು ಮಾತನ್ನೂ ಯಾರೋ ಕೇಳುತ್ತಿದ್ದಾರೆ. ಏನು ಇದರ ಅರ್ಥ ?

ಶೇಖರ— ಅವೀ, ಎಂಥ ಮಾತಿದು? ನೀನು ಹೀಗೆ ಸುಮ್ಮನೆ ತಪ್ಪು ತಿಳಿದುಕೊಳ್ಳಬೇಡ. ನಾನು ಹೇಳುತ್ತೇನೆ, ಕೇಳು, ಅಲ್ಲ ಯಾರೂ ಇಲ್ಲ.

ಅವಿನಾಶ— ನೀನು ಸುಳ್ಳು ಹೇಳುವದಿಲ್ಲವೆ? ನಿನ್ನ ಮಾತನ್ನು ನಾನು ನಂಬಬಹುದೆ ?

ಶೇಖರ— ನಿನ್ನ ಗೆಳೆಯನಾದ ನನ್ನ ಮಾತಿನಲ್ಲಿ ನಿನಗೆ ನಂಬಿಗೆ ಯಿಲ್ಲವೆ ?

ಅವಿನಾಶ— ನಂಬಿಗೆ ಇದೆ, ಶೇಖರ! ಆದರೆ .. .ಆದರೆ ನಾನು ಒಳಗೆ ಹೋಗಿ ನೋಡುತ್ತೇನೆ, ಅದರ ಹೊರತು ನನ್ನ ಮನಸ್ಸಿಗೆ ಸಮಾಧಾನವಾಗದು

ಶೇಖರ— ಅತ್ತ ಕಡೆಗೆ ಹೋಗಬೇಡ, ಅವಿನಾಶ !

ಅವಿನಾಶ— ಯಾಕೆ ಹೋಗಬಾರದು? ಅಲ್ಲಿ ಯಾರೂ ಇಲ್ಲವೆಂದ ಬಳಿಕ ನಾನು ಅಲ್ಲಿ ಹೋದರೆ ಏನು ಅಡ್ಡಿಯಿದೆ ?

ಶೇಖರ— ನನ್ನ ಮಾತನ್ನು ನಂಬು, ಅವಿನಾಶ ! ಅಲ್ಲ ಹೋಗಬೇಡ.

ಅವಿನಾಶ— ನಿನ್ನ ಮಾತಿನಲ್ಲ ನನಗೆ ನಂಬಿಕೆಯಿದೆ ಆದರ ನನ್ನ ಮನಸ್ಸಿನ ಸಮಾಧಾನಕ್ಕಾಗಿ ನಾನು ಹೋಗಿ ನೋಡಿದರೆ, ನೀನು ನನ್ನನ್ನು ಯಾಕೆ ತಡೆಯಬೇಕು? ನನ್ನ ಈಗಿನ ಪರಿಸ್ಥಿತಿ ಹೇಗಿದೆಯೆಂಬುದನ್ನು ಸ್ವಲ್ಪ ವಿಚಾರಿಸು, ಶೇಖರ! ನನ್ನ ಬಾಳಿನ ದೊಡ್ಡ ಗುಟ್ಟನ್ನು ನಾನು ಹೂರಗೆಡವಿದ್ದೇನೆ. ಅದರ ಪರಿಣಾಮವೇನಾದೀತೆಂಬುದರ ಕಲ್ಪನೆಯಾದರೂ ನಿನಗಿದೆಯೆ ?

ಶೇಖರ— ಅಲ್ಲಿ ಯಾರೂ ಇಲ್ಲವೆಂದು ನಿನಗೆ ನಾನು ಮತ್ತೆ ಒತ್ತಿ ಹೇಳುತ್ತೇನೆ ಅಷ್ಟಕ್ಕೆ ಈ ವಿಷಯವನ್ನು ನೀನು ನಿಲ್ಲಿಸಬೇಕು.

ಅವಿನಾಶ-- ಅದು ಶಕ್ಯವಿಲ್ಲ. ನಾನು ಒಳಗೆ ಹೋಗಲೇಬೇಕು.

[ಎದ್ದು ಬಾಗಿಲ ಕಡೆಗೆ ಹೋಗುತ್ತಾನೆ]

ಶೇಖರ— ಅವಿನಾಶ, ಮುಂದೆ ಹೋಗಬೇಡ! ಆ ಕೋಣೆಯಲ್ಲಿ ಯಾರೋ ಇದ್ದಾರೆಂಬುದು, ನಿಜ.

ಅವಿನಾಶ— ಹೌದೇ? ನನಗನಿಸಿತ್ತು ನೀನು ಏನನ್ನೋ ಬಚ್ಚಿಡುತ್ತಿದ್ದೀಯೆಂದು

ಶೇಖರ— ಆದರೆ ಅವಿನಾಶ, ನಿನ್ನನ್ನು ನಾನು ಆ ಕೋಣೆಯಲ್ಲಿ ಹೋಗಗೊಡಲಾರೆ !

ಅವಿನಾಶ— ದೂರ ಸರಿ, ಶೇಖರ! ನನ್ನ ಬಾಳಿನ ಗುಟ್ಟು ಯಾರಿಗೆ

ಗೊತ್ತಾಗಿದೆಯೆಂಬುದನ್ನು ತಿಳಿದುಕೊಳ್ಳುವ ಅಧಿಕಾರ ನನಗಿದೆ. ಆ ಬಾಗಿಲ ಹಿಂದೆ ನನ್ನ ಜೀವನದ ನಾಶವೇ ಅಡಗಿಕೊಂಡಿದೆ

[ಅವಿನಾಶ ಬಾಗಿಲು ತೆರದು ಒಳಗೆ ನುಗ್ಗಿ ಹೋಗುತ್ತಾನೆ.]

ಶೇಖರ— [ಕುರ್ಚಿಯ ಮೇಲೆ ಕುಸಿದುಕೊಂಡು] ತನ್ನ ಹೆಂಡತಿ ಇಲ್ಲಿ ಈ ಅವರಾತ್ರಿಯಲ್ಲಿ ಹೀಗೆ ಅಡಗಿಕೊಂಡಿದ್ದನ್ನು ನೋಡಿದರೆ ಅವಿನಾಶನಿಗೆ ಏನೆನಿಸಬಹುದು?

[ಅವಿನಾಶ ಬರುತ್ತಾನೆ, ಸಿಟ್ಟಿನಿಂದ ಅವನ ದೇಹ ನಡುಗುತ್ತದೆ.]

ಅವಿನಾಶ— ನನ್ನ ಬಾಳಗುಡಿಯನ್ನು ಮುರಿದು ಹೊಲೆಗೆಡಿಸಿದ ಮಾರಿ ನಿನ್ನ ಆಶ್ರಯಕ್ಕೆ ಬಂದಿದ್ದಾಳೆಯೆ? ಅವಳನ್ನು ನೀನು ಬಚ್ಚಿಡುತ್ತಿದ್ದೆಯಾ?

ಶೇಖರ— ಅವಿನಾಶ, ನಾನು ದೇವರ ಆಣೆಯಿಟ್ಟು ಹೇಳುತ್ತೇನೆ ಅವಳನ್ನು ಬಚ್ಚಿಡುವ ಪ್ರಯತ್ನವನ್ನು ನಾನು ಮಾಡಲಿಲ್ಲ. ಅದರಲ್ಲಿ ಬಚ್ಚಿಡು ವಂಥಾದ್ದೇನೂ ಇಲ್ಲ.

ಅವಿನಾಶ— ನಾಚಿಕೆಯಿಲ್ಲದ, ನೀತಿಯನ್ನರಿಯದ ಹೆಣ್ಣು ಅವಳು ಅವಳ ಸ್ತುತಿಯನ್ನು ನೀನು ಮಾಡಬೇಡ, ಶೇಖರ!

ಶೇಖರ— ಹಾಗೆ ಆಡಬೇಡ, ಅವಿನಾಶ! ನನ್ನನ್ನು ನಂಬು ನಿನ್ನ ನಲುವಾಗಿ, ನಿನ್ನನ್ನು ಈ ಸಂಕಟದೊಳಗಿಂದ ಪಾರುಮಾಡಬೇಕೆಂದು ಅವಳು ಇಲ್ಲಿ ಬಂದಿದ್ದಾಳೆ ನಿನ್ನ ಮೇಲೆ ಅವಳ ಅಚಲವಾದ ಪ್ರೇಮವಿದೆ.

ಅವಿನಾಶ— ನನ್ನ ಮೇಲೆ ಅವಳ ಪ್ರೇಮವೆ? ಅವಳ ಉನ್ಮಾದಕ ಪ್ರೀತಿ ನಿನ್ನ ತಲೆಗೇರಿದ ಹಾಗೆ ಕಾಣಿಸುತ್ತದೆ ನೀನು ಏನು ಬಡಬಡಿಸು ತ್ತಿರುವೆಯೆಂಬುದು ನೀನಗೇ ತಿಳಿಯದು. ಅವಳು ನಿನ್ನ ಮನೆಯನ್ನು ನಿರಂ ತರವಾಗಿ ಅಲಂಕರಿಸಿದರೂ ನನಗೆ ದುಃಖವಿಲ್ಲ. ನೀವಿಬ್ಬರೂ ಪರಸ್ಪರರಿಗೆ ಯೋಗ್ಯರಾಗಿದ್ದೀರಿ. ಆ ನಿರ್ಲಜ್ಜ ಹೆಂಗಸಿಗೆ ಮಿತ್ರದ್ರೋಹಿಯಾದ ನೀನು ಯೋಗ್ಯ ವರನಾಗಿರುವೆ, ಶೇಖರ ನಂಬಿಗೆಯಿಂದ ಹೃದಯವನ್ನು ತೆರೆದು ತೋರಿಸಿದರೆ ಅದನ್ನು ಚೂರಿಯಿಂದ ಕತ್ತರಿಸಲು ಉದ್ಯುಕ್ತನಾದ ನಿನಗೆ ಮೋಸದ ಮನೆಯಾಗಿರುವ ಆ ಕುಟಿಲ ಹೆಂಗಸೇ ಯೋಗ್ಯಳು

ಶೇಖರ— ಇದೆಲ್ಲ ಸುಳ್ಳು, ಅವಿನಾಶ! ಅವಳನ್ನು ಇಲ್ಲಿ ಕರೆದು ನಿನ್ನ ಎದುರಿಗೆ ಸಿದ್ಧಮಾಡಿ ತೋರಿಸುತ್ತೇನೆ! ನಿಲ್ಲು

ಅವಿನಾಶ— ಅಷ್ಟ್ಯಾಕೆ ನಿನಗೆ ತ್ರಾಸ? ನಿನ್ನ ನಾಲಿಗೆ ಮಾತಾಡಿದ ಪ್ರತಿಯೊಂದು ಸಾರೆ ಸತ್ಯದ ಖೂನಿ ಮಾಡುತ್ತದೆಯೆಂಬುದು ನನಗೆ ಗೊತ್ತಾ ಯಿತು, ಶೇಖರ!

[ಅವಿನಾಶ ಹೋಗುತ್ತಾನೆ. ಲಲಿತಾ ಒಳಕೋಣೆಯ ಬಾಗಿಲು ತರೆದು ನಗುತ್ತ ಪ್ರವೇಶಿಸುತ್ತಾಳೆ]

ಲಲಿತಾ— ನಮಸ್ಕಾರ, ಶೇಖರ!

ಶೇಖರ—[ಆಶ್ಚರ್ಯದಿಂದ] ಯಾರು, ಲಲಿತಾ? ಲಲಿತಾ ದೇಸಾಯಿ?

ಲಲಿತಾ— ದೇಸಾಯಿಯಲ್ಲ, ಲಲಿತಾ! ಬರೀ ಲಲಿತಾ! ನೀವು ನನಗೆ ಬರೆದ ಪತ್ರಗಳಲ್ಲಿ ನೀವು ನನ್ನನ್ನು ಕರೆಯುತ್ತಿದ್ದಿರಲ್ಲ—ಆ ನಿಮ್ಮ ಪ್ರಿಯ ಲಲಿತಾ!

ಶೇಖರ— ನೀನು ನನ್ನ ಮನೆಯಲ್ಲಿ ಏನು ಮಾಡುತ್ತಿರುವೆ? ಈ ಕೋಣೆಯಲ್ಲಿ ಕೂತು ಏನು ಮಾಡುತ್ತಿದ್ದೆ?

ಲಲಿತಾ— ಕಿವಿಗೆ ಬಿದ್ದಷ್ಟನ್ನು ಕೇಳುತ್ತಿದ್ದೆ! ಮರೆಯಲ್ಲಿ ನಿಂತು ಮಂದಿಯ ಮಾತನ್ನು ಕೇಳುವುದರಲ್ಲಿ ಏನು ಮೋಜಿದೆಯೆಂಬುದು ನಿಮಗೆ ಗೊತ್ತಿಲ್ಲ, ಶೇಖರ!

ಶೇಖರ— ಒಳ್ಳೆಯದು, ಒಂದು ದೃಷ್ಟಿಯಿಂದ ನೀನು ಇಲ್ಲಿ ಬಂದದ್ದು ನೆಟ್ಟಗೇ ಆಯಿತು ನಿನ್ನ ಹಿತದ ಕೆಲವು ಮಾತುಗಳನ್ನು ನಿನಗೆ ಹೇಳಬೇಕಾಗಿದೆ

ಲಲಿತಾ— ಹಿತದ ಮಾತು? ಮಧ್ಯರಾತ್ರಿಯ ಈ ಕಾಳಕತ್ತಲೆಯಲ್ಲಿ ಸ್ತ್ರೀಯರಿಗೆ ಹಿತಕ್ಕಿಂತಲೂ ಅಹಿತವೇ ಹೆಚ್ಚು ಸೇರುತ್ತದೆ, ಶೇಖರ!

ಶೇಖರ— ಲಲಿತಾ, ನಿನ್ನ ಸ್ವಭಾವದಲ್ಲಿ ಯಾವ ಬದಲಾವಣೆಯೂ ಆಗಿಲ್ಲ.

ಲಲಿತಾ— ಬದಲಾವಣೆಯಾಗಿಲ್ಲ, ಆದರೆ ಸುಧಾರಣೆ ಮಾತ್ರ ಬೇಕಾದಷ್ಟು ಆಗಿದೆ, ಶೇಖರ! ನನಗೆ ಜೀವನದ ಆ[illegible]ವಾದ ಅನುಭವವಾಗಿದ

ಶೇಖರ— ಅನುಭವದಿಂದ ಮನುಷ್ಯ ಜಾಣನಾಗುವದಿಲ್ಲ ಲಲಿತಾ ಆದರೆ ಅವನ ಹುಟ್ಟು ಹುಚ್ಚುತನ ಮಾತ್ರ ಬೇರುಬಿಡುತ್ತದೆ. ಇದಿರಲಿ, ನೀನು ಇಲ್ಲಿ ಯಾಕೆ ಬಂದಿರುವೆ, ಹೇಳು.

ಲಲಿತಾ—ನೀವೇ ಹೇಳಿರಿ. ನಿಮ್ಮ ತರ್ಕಶಕ್ತಿ ಎಷ್ಟಿದೆಯೆಂಬುದಾದರೂ ತಿಳಿದುಹೋಗಲಿ.

ಶೇಖರ— ಲಲಿತಾ, ನಿನ್ನನ್ನು ನಾನು ಒಂದು ಪುಸ್ತಕ[illegible]! [illegible] ಬಲ್ಲೆ. ನೀನು ಯಾಕೆ ನನ್ನ ಕಡೆಗೆ ಬಂದಿರುವೆಯೆಂಬುದನ್ನು [illegible],

ರಾವಬಹದ್ದೂರ ನಾಡಕರ್ಣಿಯವರಿಗೆ ಅವಿನಾಶ ಬರೆದ ಪತ್ರವನ್ನು ನನಗೆ ಮಾರಲಿಕ್ಕೆ ಬಂದಿರುವೆ ಹೌದಲ್ಲವೆ?

ಲಲಿತಾ—Bravo, ಶೇಖರ, ನಿಮ್ಮ ಬುದ್ಧಿ ಇಷ್ಟು ತೀಕ್ಷ್ಣವಾಗಿದೆಯೆಂದು ಅನಿಸಿರಲಿಲ್ಲ

ಶೇಖರ— ಅಂತೆಯೇ ನಾನು ನಿನ್ನ ಬಲೆಯೊಳಗಿಂದ ಪಾರಾಗಿದ್ದೇನೆ, ತಿಳಿಯಿತೇ? ಅದಿರಲಿ, ಕೊಡು ನೋಡೋಣ ಇಲ್ಲಿ, ಆ ಪತ್ರವನ್ನು.

ಲಲಿತಾ— ಅದನ್ನು ಇಲ್ಲಿ ತಂದಿಲ್ಲ, ಆದರೆ ತರಬಹುದು!

ಶೇಖರ— ಆ ಪತ್ರಕ್ಕಾಗಿ ನಿನಗೆ ಎಷ್ಟು ಹಣ ಬೇಕಾಗಿವೆಯೆಂಬುದನ್ನು ಮುನ್ನುಡಿಯಿಲ್ಲದೆ ಹೇಳಿಬಿಡು

ಲಲಿತಾ— ಹಣ? ಹಣದಿಂದ ಎಲ್ಲ ಕೆಲಸ ಈಡೇರಬಹುದೆಂದು ಭಾವಿಸಬೇಡ, ಶೇಖರ

ಶೇಖರ— ನನಗೆ ಗೊತ್ತಿದೆ ಹಣದಿಂದ ಹೆಣ ಬಾಯಿ ತೆಗೆಯುಲಿಕ್ಕಿಲ್ಲ. ಆದರೆ ನಿನ್ನ ಮುಚ್ಚಿದ ಮುಟ್ಟಿಗೆ ಮಾತ್ರ ತೆರೆಯುವುದೆಂಬ ಭರವಸ ನನಗಿದೆ.

ಲಲಿತಾ—ಆ ಹಳೆಯ ಕಾಲ ಅಳಿದುಹೋಯಿತು, ಶೇಖರ. ನಾನಿಂದು ಶ್ರೀಮಂತಳಾಗಿದ್ದೇನೆ. ನನಗೀಗ ಹಣದ ಆಕರ್ಷಣೆ ಎಳ್ಳಷ್ಟೂ ಉಳಿದಿಲ್ಲ ಹಣವೆಂಬುದು ಈಗ ನನ್ನ ಮನೆಯ ಮೂಲೆಯಲ್ಲಿ ಬಿದ್ದಿರುವ ಕಸವಾಗಿದೆ.

ಶೇಖರ— ಹಾಗಿದ್ದರೆ ನಿನಗೇನು ಬೇಕು?

ಲಲಿತಾ— ನನಗೇನು ಬೇಕು? ನಿನಗೆ ಗೊತ್ತಿದೆ, ಶೇಖರ, ನನಗೇನು ಬೇಕೆಂಬುದು.

ಶೇಖರ— ನನಗೆ ಗೊತ್ತಿಲ್ಲ. ಸುಳ್ಳೇ ನನ್ನ ಕಾಲ ಕಳೆಯಬೇಡ.

ಲಲಿತಾ— ನನ್ನನ್ನು ಪುಸ್ತಕ ಓದಿದಂತೆ ಓದುತ್ತಾನಂತೆ! ಏನು ಹೆಮ್ಮೆ!

ಶೇಖರ— ಅದು ಖರೆ! ಆದರೆ ನಿನ್ನಲ್ಲಿ ಸುಧಾರಣೆಯಾಗಿದಯಲ್ಲ

ಲಲಿತಾ— ಮೊದಲು ನೀನು ನನ್ನಿಂದ ಇಷ್ಟು ದೂರ ಕೂಡುತ್ತಿದ್ದಿಲ್ಲ.

ಶೇಖರ— ನಾನು ಆಗ ಮೂರ್ಖತನ ಮಾಡಿದೆ.

ಲಲಿತಾ— ಅದು ಮೂರ್ಖತನವಲ್ಲ, ಶೇಖರ! ಅದಕ್ಕೆ ಪ್ರೀತಿಯೆಂಬ ಸುಂದರವಾದ ಹೆಸರಿದೆ

ಶೇಖರ-- ಪ್ರೀತಿ? ಅದರ ಸೌಂದರ್ಯದ ಕಲ್ಪನೆ ನಿನಗಿಲ್ಲ, ಲಲಿತಾ!

ಲಲಿತಾ— ಆ ಪ್ರೀತಿಯ ಬಳ್ಳಿಗೆ ವಿವಾಹದ ಹೂವು ಕೂಡಿರಿತ್ತು

ಶೇಖರ— ಅದು ಕಾತು ಹಣ್ಣಾಗುವ ಮೊದಲೇ ಆ ಬಳ್ಳಿ ಬಾಡಿ ಹೋಯಿತು. ನನ್ನ ಬಾಳು ಹಾಳಾಯಿತು. ನಿನಗೆ ಬೇಕಾಗಿತ್ತು ಸಂಪತ್ತು, ಪ್ರೀತಿಯಲ್ಲ!

ಲಲಿತಾ— ದಾರಿದ್ರ್ಯದ ದುಃಖವನ್ನು ನೀನು ಕನಸಿನಲ್ಲಿಯೂ ಅನುಭವಿಸಿಲ್ಲ, ಶೇಖರ! ನನಗೆ ಹಣದ ಅವಶ್ಯಕತೆಯಿತ್ತು ದಾರಿದ್ರ್ಯದ ದೈನ್ಯವನ್ನು ನೀಗಲಿಕ್ಕೆ ನನಗೆ ಹಣ ಬೇಕಾಗಿತ್ತು

ಶೇಖರ— ಅದನ್ನೂ ನಾನು ನಿನಗೆ ಕೊಟ್ಟೆ ನೀನು ಮಾತ್ರ ನನಗೆ ಏನನ್ನೂ ಕೊಡಲಿಲ್ಲ ನನ್ನ ಪ್ರೀತಿಯನ್ನು ಕಾಲ್ಕೆಳಗೆ ತುಳಿದು, ಮತ್ತೊಬ್ಬನ

ಲಲಿತಾ— ಹಾಗೆ ನಿಮಗೆ ಸಂಶಯ ಬಂತು ಆದರೆ ನಾನು ಮತ್ತಾರನ್ನೂ ಪ್ರೀತಿಸಿಲ್ಲ ನಿಮ್ಮ ಹೊರತಾಗಿ ನನ್ನ ಜೀವನದಲ್ಲಿ ಮತ್ತಾರಿಗೂ ಸ್ಥಾನವಿಲ್ಲ

ಶೇಖರ— ನೀನು ಈ ಮಾತನ್ನು ಎಷ್ಟು ಜನರಿಗೆ ಹೇಳಿರುವೆ?

ಲಲಿತಾ— ಈಗಲೂ ನಾನು ನಿಮ್ಮನ್ನೇ ಪ್ರೀತಿಸುತ್ತೇನೆ ನಿನ್ನೆ ನಿಮ್ಮನ್ನು ಅವಿನಾಶರ ಮನೆಯಲ್ಲಿ ಕಂಡಾಗ ಮತ್ತೆ ಆ ಪ್ರೀತಿ ಉಕ್ಕಿಬಂತು

[ಶೇಖರನ ಹತ್ತಿರ ಸರಿಯುತ್ತಾಳೆ]

ಶೇಖರ-- [ಎದ್ದು] ಮತ್ತೊಮ್ಮೆ ನಾನು ನಿನ್ನ ಮೋಸದ ಬಲೆಯಲ್ಲಿ ಸಿಗಬಹುದೆಂದು ನಿನಗನಿಸಿದ್ದರೆ, ಅದು ತಪ್ಪು!

ಲಲಿತಾ— ನನಗೀ ಒಂಟಿಬಾಳುವೆ ಬೇಸರಾಗಿದೆ, ಶೇಖರ. ಬಾಲ್ಯದಿಂದಲೂ ನನ್ನ ಜೀವನವೊಂದು ಮಹಾಯುದ್ಧವಾಗಿತ್ತು. ಅದರಲ್ಲಿ ನಾನು ನನ್ನ ಸ್ವಂತದ ಸಾಮರ್ಥ್ಯದಿಂದ ಗೆಲುವನ್ನು ಪಡೆದಿದ್ದೇನೆ

ಶೇಖರ—ಇದು ಎಂಥ ಗೆಲುವು, ಲಲಿತಾ? ನಿನ್ನ ಸ್ತ್ರೀತ್ವವನ್ನು ಮಾರಿ ಪಡೆದಿರುವ ಈ ವಿಜಯ ಸಾವಿರ ಸೋಲುಗಳಿಗಿಂತಲೂ ಹೀನವಾಗಿದೆ, ಲಲಿತಾ

ಲಲಿತಾ-- ಇರಲಿ. ನಾನು ಮಾತ್ರ ಗಂಡಸಿನಂತೆ ಕಾದಾಡಿದೆ. ನನಗೀಗ ಬೇಕಾದದ್ದು ವಿಶ್ರಾಂತಿ! ಬಿರುಗಾಳಿಯಲ್ಲಿ ಸಿಕ್ಕ ನಾವೆಯಂತೆ ನನ್ನ

ಮನಸ್ಸು ಜರ್ಜರಿತವಾಗಿದೆ ಇನ್ನಾದರೂ ಅದು ಬಂದರವನ್ನು ಸೇರುವಂತೆ ನೀವು ಸಹಾಯ ಮಾಡಬೇಕು, ಶೇಖರ. ಈ ವಿಶ್ರಾಂತಿಯನ್ನು ನಿಮ್ಮ ಪ್ರೀತಿಯ ಆಶ್ರಯದಲ್ಲಿ ನಾನು ಪಡೆಯಬೇಕೆಂದಿದ್ದೇನೆ. ನನ್ನನ್ನು ದೂರ ಬೇಡಿರಿ. ನಾವೊಮ್ಮೆ ಪ್ರೀತಿಯ ಆಟವನ್ನು ಆಡಿದ್ದೇವೆ.

ಶೇಖರ— ಹೌದು, ಆಡಿ ನನ್ನ ಕೈಯನ್ನು ಸುಟ್ಟುಕೊಂಡಿದ್ದೇನೆ ಇನ್ನು ಮತ್ತೆ ಆ ಆಟವನ್ನು ಆಡುವ ಮನಸ್ಸಿಲ್ಲ

ಲಲಿತಾ— ನೀವು ನನ್ನನ್ನು ಪ್ರೀತಿಸದಿದ್ದರೂ ಚಿಂತೆಯಿಲ್ಲ.

ಶೇಖರ— ಪ್ರೀತಿಸದಿದ್ದರೂ ನಿನ್ನ ಮದಿವೆಯಾಗಬೇಕೆಂಬುದೇ ನಿನ್ನ ಬೇಡಿಕೆ. ಹೌದಲ್ಲವೆ?

ಲಲಿತಾ— ಹೌದು.

ಶೇಖರ— ಹುಂ ಆಮೇಲೆ ಅವಿನಾಶನ ಪತ್ರ?

ಲಲಿತಾ— ನಮ್ಮ ಮದಿವೆಯಾದ ಕೂಡಲೆ ನಿಮ್ಮ ಕೈಯಲ್ಲಿ ಅದನ್ನು ಕೊಟ್ಟುಬಿಡುತ್ತೇನೆ.

ಶೇಖರ— ಅಂದರೆ ಅವಿನಾಶನ ಕುತ್ತಿಗೆಯನ್ನು ಬಿಡಿಸುವದಕ್ಕಾಗಿ ನನ್ನ ಕುತ್ತಿಗೆಯನ್ನು ನಿನ್ನ ಕೈಯಲ್ಲಿ ಕೊಡಬೇಕು

ಲಲಿತಾ— ನೀವೇನೆಂದರೂ ನಡೆದೀತು. ಅದಕ್ಕೆ ನಾನು ಬೆಲೆ ಕೊಡುವದಿಲ್ಲ ನೀವು ಮದಿವೆಯ ವಚನವನ್ನು ಕೊಟ್ಟರೆ ನಿಮಗೀಗಿಂದೀಗ ಆ ಪತ್ರವನ್ನು ಕೊಡುತ್ತೇನೆ

ಶೇಖರ— ಈಗ?

ಲಲಿತಾ— ಅಂದರೆ, ನಾಳೆ.

ಶೇಖರ— ನನ್ನ ಕುಂಡಲಿಯಲ್ಲಿರುವ ಎಲ್ಲಾ ಉಚ್ಚಗ್ರಹಗಳು ಮದಿವೆಯ ಮನೆಯಲ್ಲಿ ಬಂದು ಕೂತಿರುವಂತೆ ತೋರುತ್ತದೆ.

ಲಲಿತಾ— ಅಂದರೆ ನೀವು ನನ್ನ ಮಾತನ್ನು ಒಪ್ಪುತ್ತೀರಿ

ಶೇಖರ— ಲಲಿತಾ, ಗಂಡನಾಗುವ ಯೋಗ್ಯತೆ ನನಗಿಲ್ಲ, ನಿನಗೆ ಗೊತ್ತಿದೆ.

ಲಲಿತಾ— ನಿಮ್ಮ ದುರ್ಗುಣಗಳ ಪರಿವೆ ನನಗಿಲ್ಲ ನನಗೆ ಬೇಕಾದದ್ದು ಒಳ್ಳೆಯ ಮನೆ, ಒಳ್ಳೆಯ ಸಂಸಾರ!

ಶೇಖರ— ಹೌದು, ನಿನಗೆ ಬೇಕಾದದ್ದು ನಮ್ಮ ಮನೆಯ ಪ್ರತಿಷ್ಠೆ. ಸಮಾಜದಲ್ಲಿ ನಿನಗೆ ಎಲ್ಲಾ ಇದೆ ಪ್ರತಿಷ್ಠೆಯಿಲ್ಲ. ಆ ಹಸಿವೆಯನ್ನು ಹಿಂಗಿಸುವಕ್ಕಾಗಿ ಈ ದಾರಿಯನ್ನು ತುಳಿಯುತ್ತ ನೀನು ಬಂದಿರುವೆ ನನಗೆ ಗೊತ್ತು ಲಲಿತಾ. ನಿನ್ನ ಮಹತ್ವಾಕಾಂಕ್ಷೆಯ ಪೂರ್ತಿಗಾಗಿ ನೀನು ಪ್ರೀತಿಯ ಗೀತವನ್ನು ಹಾಡತೊಡಗಿರುವೆ.

ಲಲಿತಾ— ನಿಮಗೆ ಈ ಹಾಡು ಸೇರದಿದ್ದರೆ ಅಡ್ಡಿಯಿಲ್ಲ. ನನ್ನೊಡನೆ ಮದಿವೆಯಾಗಿರಿ ನಿಮಗೆ ಅವಿನಾಶನ ಪತ್ರ ಕೊಡುತ್ತೇನೆ.

ಶೇಖರ— ಅದು ಸಾಧ್ಯವಿಲ್ಲ

ಲಲಿತಾ— ನನಗನಿಸಿತ್ತು, ನಿಮ್ಮ ಗೆಳೆಯನಾಗಿ ನೀವು ಇಷ್ಟು ಸ್ವಾರ್ಥತ್ಯಾಗವನ್ನು ಮಾಡಬಹುದೆಂದು

ಶೇಖರ— ಯಾರೂ ಯಾರ ಸಲುವಾಗಿಯೂ ಸ್ವಾರ್ಥತ್ಯಾಗ ಮಾಡಬಾರದು ಯಾರ ಸಲುವಾಗಿ ನಾವು ಸ್ವಾರ್ಥತ್ಯಾಗ ಮಾಡುತ್ತೇವೆಯೋ ಅವರ ಕಲ್ಯಾಣವಾಗುವದಿಲ್ಲ ಅವರ ನೈತಿಕ ಅಧಃಪಾತವಾಗುತ್ತದೆ ನಾನು ಸ್ವಾರ್ಥತ್ಯಾಗ ಮಾಡಿ ಮಿತ್ರದ್ರೋಹ ಮಾಡಲಾರೆ

ಲಲಿತಾ— ಅವಿನಾಶನ ಅಧಃಪಾತ ಈಮೊದಲೇ ಆಗಿಬಿಟ್ಟಿದೆಯಲ್ಲ.

ಶೇಖರ— ನಿನಗೆ ಗೊತ್ತಿಲ್ಲ, ಲಲಿತಾ ಅಧಃಪಾತವಾಗುವದು ಹೀನ ಕೃತ್ಯದಿಂದಲ್ಲ, ಹೀನ ಮನೋವೃತ್ತಿಯಿಂದ.

ಲಲಿತಾ— ನೀವು ಗಂಡಸರು, ಗಂಡಸರ ಸ್ತುತಿಯನ್ನು ಮಾಡುವುದರಲ್ಲಿ ಪ್ರವೀಣರು

ಶೇಖರ— ನೀವು ಹೆಂಗಸರು, ಹೆಂಗಸಿನ ನಿಂದೆಯನ್ನು ಮಾಡುವುದರಲ್ಲಿ ಶೂರರು.

ಲಲಿತಾ— ನಾನು ಯಾರ ನಿಂದೆಯನ್ನೂ ಮಾಡುವದಿಲ್ಲ ನನಗೆ ಜಗತ್ತಿನಲ್ಲಿ ಒಬ್ಬಳೇ ವೈರಿಯಾಗಿದ್ದಾಳೆ. ಅವಳ ನಿಂದೆಯನ್ನು ನಾನು ಮಾಡಬಹುದು.

ಶೇಖರ— ಯಾರವಳು ?

ಲಲಿತಾ— ಸುಧಾ !

ಶೇಖರ— ಸುಧಾ ? ಆ ಸಾಧ್ವಿ ನಿನಗೇನು ಮಾಡಿದ್ದಾಳೆ ?

ಲಲಿತಾ— ಬಾಲ್ಯದಿಂದಲೂ ಅವಳನ್ನು ಕಂಡರೆ ನನ್ನ ಮೈ ಉರಿಯುತ್ತದೆ. ನಿಮ್ಮ ಪ್ರೀತಿಗಾಗಿ ನನ್ನ ಸೇಡನ್ನು ಮರೆಯಬೇಕೆಂದಿದ್ದೆ. ಆದರೆ ನಿಮಗೆ ನನ್ನ ಪ್ರೀತಿಯ ಪರಿವೆಯಿಲ್ಲ ಆಗಲಿ! ನಾಳೆ ಅವಿನಾಶನ ಅಪಕೀರ್ತಿಯ ಉರಿಯಲ್ಲಿ ನನ್ನ ಸೇಡನ್ನು ನಾನು ತೀರಿಸಿಕೊಳ್ಳುತ್ತೇನೆ. ಒಳ್ಳೆಯದು. ನಮಸ್ಕಾರ. ತಿರುಗಿ ನನಗೆ ನೀವು ನಮಸ್ಕಾರವನ್ನು ಮಾಡುವದಿಲ್ಲವೆ ?

ಶೇಖರ— ನಿನ್ನ ನಮಸ್ಕಾರವನ್ನು ನಾನು ಸ್ವೀಕರಿಸಲಾರೆ ನೀನು ರೂಪದಿಂದ ಸ್ತ್ರೀಯಾಗಿದ್ದರೂ ವರ್ತನದಿಂದ ರಾಕ್ಷಸಿಯಾಗಿರುವೆ ಸುಧೆಯ ಮನೆಗೆ ಹೋಗಿ ಅವಳ ಸೌಭಾಗ್ಯದ ಮೇಲೆ ಅಂಗಾರವನ್ನಿಟ್ಟು ಬಂದಿರುವ ನಿನಗೆ ಹೆಣ್ಣೆಂದು ಯಾರು ಕರೆಯಬಹುದು ?

ಲಲಿತಾ— ಸುಧೆಯ ಮನೆಗೆ ನಾನು ಅಂಥಾ ಉದ್ದೇಶದಿಂದ ಹೋಗಿರಲಿಲ್ಲ ಅವಳು ತನ್ನ ಸೊಕ್ಕಿನಿಂದ ತನ್ನ ಸಂಸಾರವನ್ನು ಕೆಡಿಸಿಕೊಂಡಳು ನಾನು ಕಳೆದುಕೊಂಡ ರತ್ನದ ಉಂಗುರವನ್ನು ಹುಡುಕಲಕ್ಕೆ ಅವಳ ಮನೆಗೆ ಹೋಗಿದ್ದೆ.

ಶೇಖರ— ರತ್ನದ ಉಂಗುರ ?

ಲಲಿತಾ-- ಹೌದು. ನೀವು ಸುಧೆಗೆ ಬೇಕಾದರೆ ಕೇಳಿರಿ. ಅವಳಿಗೂ ಇದು ಗೊತ್ತಿದೆ

ಶೇಖರ— ನನಗೆ ಗೊತ್ತಿದೆ.

ಲಲಿತಾ— ಹೇಗೆ ?

ಶೇಖರ— ಆ ಉಂಗುರ ನನಗೆ ಸಿಕ್ಕಿತು. ಇದೇ ಅಲ್ಲವೇ ಅದು ?

[ಡ್ರಾಅರದೊಳಗಿಂದ ಹೊರದೆಗದು ತೋರಿಸುತ್ತಾನೆ.]

ಲಲಿತಾ— ಹೌದು, ಇದೇ! ನಿಮಗೆ ನಾನು ಬಹಳೇ ಆಭಾರಿಯಾಗಿದ್ದೇನೆ.

[ಕೈ ಮುಂದೆ ಮಾಡುತ್ತಾಳೆ]

ಶೇಖರ— ಅದು ನಿನಗೆ ಸಿಗಲಾರದು

ಲಲಿತಾ— ಯಾಕೆ? ನನ್ನ ಪ್ರೀತಿಯ ಕಾಣಿಕೆಯೆಂದು ಇಟ್ಟುಕೊಳ್ಳುವ ವಿಚಾರವಿದೆಯೇನು ?

ಶೇಖರ—ಹತ್ತಿರ ಇಟ್ಟುಕೊಳ್ಳುವದಕ್ಕಾಗಿ ಅಲ್ಲ, ಕೊರ್ಟಿನಲ್ಲಿ ಹಾಜರ ಮಾಡುವದಕ್ಕಾಗಿ

ಲಲಿತಾ— ಅಂದರೆ ?

ಶೇಖರ— ಇದು ನೀನು ಕಳವು ಮಾಡಿದ ಉಂಗುರ, ಲಲಿತಾ !

ಲಲಿತಾ-- ನಿಮ್ಮ ಮನೆಯಲ್ಲಿ ನನ್ನ ಅಪಮಾನ ಮಾಡುತ್ತೀರಾ ?

ಶೇಖರ— ಕಳ್ಳನಿಗೆ ಕಳ್ಳನೆಂದು ಕರೆದರೆ ಅಪಮಾನವೇನು? ನನಗೆಲ್ಲ ಗೊತ್ತಿದೆ, ಲಲಿತಾ ನನ್ನ ತಂಗಿಗೆ ಅವಳ ಮದಿವೆಯ ಕಾಲಕ್ಕೆ ನಾನು ಈ ಉಂಗುರವನ್ನು ಕಾಣಿಕೆಯಾಗಿ ಕೊಟ್ಟಿದ್ದೆ ಅವಳ ಹೆಸರು ಕೂಡ ಇಲ್ಲಿ ಒಳಗಡೆ ಇದೆ ಅದು ನಿನಗೆ ಗೊತ್ತಿಲ್ಲ ಮದಿವೆಗೆ ನೀನೂ ಬಂದಿದ್ದೆ ಮನೆಯ ಜವಾನ ಕಳವು ಮಾಡಿರಬೇಕೆಂದು ಅವನಿಗೆ ಶಿಕ್ಷೆಯಾಯಿತು. ಆದರೆ ಇಂದು ಅದರ ಶೋಧವಾಯಿತು ಕಳ್ಳನೂ ಸಿಕ್ಕ

ಲಲಿತಾ— ಸುಳ್ಳು !

ಶೇಖರ— ಸುಳ್ಳೆಂದು ಸಿದ್ಧಮಾಡುವದೂ ನಿನಗೆ ಸಾಧ್ಯವಿಲ್ಲ ಈ ಉಂಗುರ ನಿನ್ನ ಹತ್ತಿರವಿತ್ತೆಂಬುದು ಎಲ್ಲರಿಗೂ ಗೊತ್ತಿದೆ ಇದು ಯಾರ ಉಂಗುರವೆಂಬುದೂ ಗೊತ್ತಿದೆ ಇನ್ನೇನು ಬೇಕು ? ಇದು ಬಹಳ ಬೆಲೆಯುಳ್ಳ ರತ್ನದ ಉಂಗುರವಿದೆ, ಲಲಿತಾ. ಪೋಲೀಸರು ಇನ್ನೂ ಇದರ ಶೋಧವನ್ನು ಮಾಡುತ್ತಿದ್ದಾರೆ

ಲಲಿತಾ— ಈಗ ನೀವೇನು ಮಾಡಬೇಕೆಂದಿರುವಿರಿ ಶೇಖರ ?

ಶೇಖರ— ನಾನು ಈ ಗಂಟೆಯನ್ನು ಬಾರಿಸಿ ಜವಾನನನ್ನು ಕರೆಯುತ್ತೇನೆ ಅವನು ಪೋಲೀಸರನ್ನು ಕರಕೊಂಡು ಬರುತ್ತಾನೆ

ಲಲಿತಾ— ಪೋಲೀಸರೆ ?

ಶೇಖರ— ಆಮೇಲೆ ಕೋರ್ಟು, ಸೆರೆಮನೆ—ನಿನ್ನ ಈ ಬಾಳಿನ ನಾಟಕಕ್ಕೆ ಯೋಗ್ಯವಾದ ಮುಕ್ತಾಯ.

ಲಲಿತಾ— ನೀವಿಷ್ಟು ದುಷ್ಟರಿರಬಹುದೆಂದು ನನಗನಿಸಿರಲಿಲ್ಲ.

ಶೇಖರ— ನಿನ್ನಂತೆ ನಾನೂ ಮಾತಿಗೆ ಬೆಲೆ ಕೊಡುವದಿಲ್ಲ ನಿನ್ನ ಬೈಗಳಿಂದ ನನಗೇನಾಗಬೇಕಾಗಿದೆ? ನಾನು ಕರೆಯುತ್ತೇನೆ, ಜವಾನನನ್ನು.

ಲಲಿತಾ-- ಬೇಡ, ಬೇಡ, ಶೇಖರ, ಹಾಗೆ ಮಾಡಬೇಡಿರಿ. ನೀವು ಹೇಳಿದ್ದನ್ನು ನಾನು ಕೇಳಲು ಸಿದ್ಧಳಿದ್ದೇನೆ. ನಿಮಗೇನು ಬೇಕೊ ಅದನ್ನು ನಾನು ಕೊಡುತ್ತೇನೆ

ಶೇಖರ— ಅವಿನಾಶನ ಪತ್ರ.

ಲಲಿತಾ— ಅವಿನಾಶನ ಪತ್ರ ? ನನಗೆ ಸ್ವಲ್ಪ ವಿಚಾರ ಮಾಡಲು ಸಮಯ ಕೊಡಿರಿ.

ಶೇಖರ— ಇಲ್ಲ, ಪತ್ರ !

ಲಲಿತಾ— ಅದು ಈಗ ನನ್ನ ಹತ್ತಿರವಿಲ್ಲ ನಾಳೆ ಕಳಿಸಿಕೊಡುತ್ತೇನೆ.

ಶೇಖರ— ಸುಳ್ಳು ಹೇಳಬೇಡ. ಅದು ನಿನ್ನ ಹತ್ತಿರವೇ ಇದೆ. ಈಗಿಂದೀಗ ಅದು ನನ್ನ ಕೈಯಲ್ಲಿ ಬೀಳಲಿಕ್ಕೆ ಬೇಕು. ಇಲ್ಲದಿದ್ದರೆ—

[ಲಲಿತಾ ಪತ್ರ ಕೊಡುತ್ತಾಳೆ ಶೇಖರ ಅದನ್ನು ಓದಿನೋಡಿ]

ಶೇಖರ— ಇದೇ ಏನು ?

ಲಲಿತಾ-- ಹೌದು

[ಶೇಖರ ಅದನ್ನು ಹರಿದು ಹಾಕುತ್ತಾನೆ]

ಶೇಖರ— ಅವಿನಾಶನ ಜೀವನವೀಗ ನಿಷ್ಕಲಂಕವಾಯಿತು.

ಲಲಿತಾ— ಶೇಖರ, ನನಗೆ ಕುಡಿಯಲಿಕ್ಕೆ ನೀರು ಬೇಕು.

ಶೇಖರ— ಒಳ್ಳೆಯದು. [ಒಳಗೆ ಹೋಗುತ್ತಾನೆ]

[ಲಲಿತಾ ಪುಸ್ತಕದಲ್ಲಿ ಮುಚ್ಚಿಟ್ಟ ಸುಧಾನ ಪತ್ರವನ್ನು ತೆಗೆದುಕೊಂಡು ತನ್ನ ಬ್ಲೌಜಿನಲ್ಲಿ ಇಟ್ಟುಕೊಳ್ಳುತ್ತಾಳೆ.

ಶೇಖರ— [ಪ್ರವೇಶಿಸಿ] ಓದೀ ನೀರು.

ಲಲಿತಾ— [ನೀರು ಕುಡಿಯುತ್ತ] ಈಗ ನಿಮಗೆ ಸಮಾಧಾನವಾಯಿತಲ್ಲವೆ, ಶೇಖರ ?

ಶೇಖರ— ಹೌದು. ನನ್ನ ಗೆಳೆಯ ಪಾರಾದನಲ್ಲ, ನಿನ್ನ ಕೈಯಿಂದ.

ಲಲಿತಾ— ಆದರೆ ಗೆಳೆಯನ ಹೆಂಡತಿ ಮಾತ್ರ ಸಂಕಟದಲ್ಲಿ ಸಿಕ್ಕಳು, ಪಾಪ !

ಶೇಖರ— ಅಂದರೆ?

ಲಲಿತಾ-- ಇನ್ನು ನಾನು ಸುಧೆಯ ಮೇಲಿನ ಸೇಡನ್ನು ತೀರಿಸುತ್ತೇನೆ. ನಿಮ್ಮ ಮಿತ್ರದ್ರೋಹ ಎಷ್ಟು ದೀರ್ಘಕ್ಕೆ ಹೋಗಿದೆಯೆಂಬುದು ಸುಧೆಯು ನಿಮಗೆ ಬರೆದ ಪ್ರೇಮಪತ್ರದಿಂದ ಅವಿನಾಶರಿಗೆ ಗೊತ್ತಾಗಲಿ ಗೆಳೆಯನ ಹೆಂಡತಿಯೊಡನೆ .

ಶೇಖರ— Shut up ! ಏನಂತೀ ಲಲಿತಾ ?

ಲಲಿತಾ-- ನೀವು ಓದಿಲ್ಲವೇ ಈ ಪತ್ರವನ್ನು, ಇಕಾ, ನಾನೇ ಓದಿ ತೋರಿಸುತ್ತೇನೆ .

ಶೇಖರ— ಲಲಿತಾ, ಆ ಪತ್ರವನ್ನು ಕೊಡು.

[ಅವಳ ಹತ್ತಿರ ಹೋಗುತ್ತಾನೆ]

ಲಲಿತಾ— ದೂರ ಸರಿಯಿರಿ [ಗಂಟೆ ಬಾರಿಸುತ್ತಾಳೆ] ಜವಾನ, ನನಗೆ ಹೊರಗೆ ಹೋಗಬೇಕಾಗಿದೆ ಆಗಲಿ . ನಮಸ್ಕಾರ, ಶೇಖರ

[ಶೇಖರ ಸ್ತಂಭಿತನಾಗಿ ನಿಲ್ಲುತ್ತಾನೆ ಪರದೆ ಬೀಳುತ್ತದೆ]

ದೃಶ್ಯ ೪

[ಅವಿನಾಶನ ಮನೆ. ದಿವಾಣಖಾನೆ. ಸಮಯ ಪ್ರಾತಃಕಾಲ]

[ಶೇಖರ ಪ್ರವೇಶಿಸುತ್ತಾನೆ.]

ಶೇಖರ-- ಮನೆಯವರೆಲ್ಲ ಎಲ್ಲಿ ಹೋಗಿದ್ದಾರೊ ಏನೋ? ಅಡಿಗೆಯ ಮನೆಯ ವರೆಗೆ ಹೋಗಿ ಬಂದೆ ಒಬ್ಬರ ಸುಳಿವೂ ಇಲ್ಲ ನನಗಂತೂ ಇನ್ನು ತಡೆಯುವದು ಸಾಧ್ಯವಿಲ್ಲ ಬಿಸಿಬಿಸಿ ಸುದ್ದಿಯಿಂದ ನನ್ನ ತಲೆ ಕಿಕ್ಕಿರಿದು ತುಂಬಿದೆ ವರ್ತಮಾನ ಪತ್ರವನ್ನು ಮಾರುವ ಹುಡಗನ ಹಾಗೆ ಒದರಿ ಹೇಳ ಬೇಕೆಂದು ನನ್ನ ನಾಲಗೆ ಒದ್ದಾಡತೊಡಗಿದೆ.

[ಕಾಸೀಮನ ಪ್ರವೇಶ]

ಶೇಖರ— ಯಾಕೊ, ಮನೆಯವರೆಲ್ಲ ಎಲ್ಲ ಹೋಗಿದ್ದಾರ?

ಕಾಸೀಮ— ಸಾಹೇಬರು ಆಫೀಸಿನಲ್ಲಿ ಇದ್ದಾರೆ.

ಶೇಖರ— ಬಾಯಿಯವರು?

ಕಾಸೀಮ— ಈಗ ಬರಬಹುದು ಚಿಕ್ಕ ಬಾಯವರು ಈಗ ಬಂದ್ರು ಅವರು ತಮ್ಮ ಖೋಲೀವಳಗ ಇದ್ದಾರ್ರಿ

ಶೇಖರ— ಅಂತೂ ಮನೆಯಲ್ಲಿ ಯಾರಾದರೂ ಇದ್ದಾಂಗ ಆಯ್ತು

ಕಾಸೀಮ— ರಾಮರಾಯರು ಇದೀಗ ಬಂದು ಲಾಯಬ್ರರಿಗೆ ಹೋದ್ದಾಂಗ ಕಾಣಸ್ತದ

ಶೇಖರ— ಬಹಳ ನೆಟ್ಟಗಾಯ್ತು ನೀ ಆಕಡೆ ಹೋದರೆ ನಾ ಇಲ್ಲಿ ಇದ್ದೀನಿ ಅಂತ ಮಾತ್ರ ಅವರಿಗೆ ಹೇಳಬೇಡ.

ಕಾಸೀಮ— ಇಲ್ಲರಿ.

ಶೇಖರ— ತಂದೆಯಿಂದ ಮಗ ಎಷ್ಟು ದೂರ ಇರ್ತಾನ ಅಷ್ಟು ಅವನ ಕಲ್ಯಾಣ ಆಗತದ.

ಕಾಸೀಮ—ರಾಮರಾಯರು ಇಲ್ಲೇ ಬರಲಿಕ್ಕೆ ಹತ್ತ್ಯಾರ್ರಿ.

ಶೇಖರ— ದೈವದ ಎದುರು ನಾವು ಬಾಗಲೇಬೇಕು.

ಕಾಸೀಮ— ನಾನು ಹೋಗತೇನ್ರಿ.

[ರಾಮರಾಯರ ಪ್ರವೇಶ]

ರಾಮರಾಯ— ಬೆಳಗಾದ ಕೂಡಲೆ ಇಲ್ಲಿಗೆ ಬಂದಿದ್ದೀರಿ ನಿಮ ಗಂತೂ ವೇಳೆಯ ಮಹತ್ವ ಇಲ್ಲ. ಹೆಂಗಸರು ಕೈಯಲ್ಲಿ ಬಳಿ ತೊಡುವಂತೆ ನೀವು ಗಡಿಯಾರ ಕಟ್ಟಿಕೊಂಡಿದ್ದೀರಿ, ಅಷ್ಟೆ

ಶೇಖರ— ಕೈಯಲ್ಲಿ ಗಡಿಯಾರವಿರಬೇಕು. ಆದರೆ ಮನುಷ್ಯ ಗಡಿ ಯಾರವಾಗಬಾರದು

ರಾಮರಾಯ— ನೀವು ಗಡಿಯಾರವಾಗಿದ್ದರೆ ಎಷ್ಟು ಒಳ್ಳೆಯದಾಗು ತ್ತಿತ್ತು? ನಿಮ್ಮನ್ನು ಅಂಗಡಿಗೆ ಒಯ್ದು ರಿಪೇರಿ ಮಾಡಿಸಿಯಾದರೂ ತರಬಹು ದಾಗಿತ್ತು ಆದರೆ ಆಗದ ಮಾತಿಗೆ ಉತ್ತು ಪ್ರಯೋಜನವೇನು? ನಾನು ನಿನ್ನೆ ಹೇಳಿದ ಮಾತಿನ ಬಗ್ಗೆ ಏನಾದರೂ ವಿಚಾರ ಮಾಡಿರುವಿರೇನು ?

ಶೇಖರ— ನೀವು ಹೋದಮೇಲೆ ನನಗೆ ನಿದ್ದೆಯೇ ಬರಲಿಲ್ಲ ಮದಿ ವೆಯ ವಿಚಾರ ತಲೆಯಲ್ಲಿ ಸೇರಿದ ಕೂಡಲೆ ಉಳಿದ ಎಲ್ಲಾ ವಿಚಾರಗಳು ಅಲ್ಲಿಂದ ತಳಕಿತ್ತು ಓಡಿಬಿಟ್ಟವೆ

ರಾಮರಾಯ-- ಬಹಳ ಒಳ್ಳೆಯದಾಯಿತು ಆದರೆ ಬರಿಯ ವಿಚಾರ ಮಾಡಿದರೆ ಮದಿವೆಯಾಗುವದಿಲ್ಲ

ಶೇಖರ--ನನಗೆ ಗೊತ್ತಿದೆ, ಮದಿವೆಯೆಂದರೆ ವಿಚಾರವಲ್ಲ, ಅದೊಂದು ಅವಿಚಾರವೆಂದು

ರಾಮರಾಯ— ನಾಯಿಯ ಬಾಲದಂತೆ ನಿಮ್ಮ ನಾಲಗೆಯೂ ಡೊಂಕಾಗಿದೆ

ಶೇಖರ— ನಾಲಗೆ ಡೊಂಕಾಗಿದ್ದರೂ ಮಾತು ಡೊಂಕಾಗಿಲ್ಲ "ಕಬ್ಬಿನ ಗಣೆ ಡೊಂಕು, ಅದರ ಹಾಲು ಡೊಂಕೆ? "

ರಾಮರಾಯ— ಛೀ! ನಿಮ್ಮೊಡನೆ ಮಾತನಾಡಿ ಪ್ರಯೋಜನವಿಲ್ಲ

ಶೇಖರ— ಹಾಗೆ ಸಿಟ್ಟಿಗೇಳಬೇಡಿರಿ, ಕಾಕಾಸಾಹೇಬ! ನಿಮಗೆ ನಾನು ಮಾತು ಕೊಟ್ಟಿದ್ದೇನೆ. ಇಂದು ಸಂಜೆಯಾಗುವದರೊಳಗಾಗಿ ನಾನು ನನ್ನ ಮದಿವೆಯನ್ನು ನಿಶ್ಚಯಿಸುತ್ತೇನೆ

ರಾಮುರಾಯ— ಶಾಬಾಶ! ನಿಮಗೆ ನಾಳೆ ಮುಂಜಾನೆಯ ವರೆಗೆ ಸಮಯ ಕೊಡುತ್ತೇನೆ.

ಶೇಖರ— ಅಷ್ಟಾದರೆ ಒಂದೇ ಯಾಕೆ, ಹತ್ತು ಮದಿವೆಗಳನ್ನು ರಚಾಯಿಸಬಹುದು.

ರಾಮುರಾಯ— ಒಂದರ ಬೆಳಕಂತೂ ಬೀಳಲಿ. ಆಮೇಲೆ ನೋಡೋಣಂತೆ. ನೀವು ಇಂದಿನ "ಸ್ವತಂತ್ರ ಭಾರತ"ವನ್ನು ಓದಿದ್ದೀರೇನು?

ಶೇಖರ— ಛೀ, ಛೀ, ಇಲ್ಲ. ನಾನು ಆ ಪಾಪವನ್ನು ಮಾಡಲಿಲ್ಲ. ಭಾರತ ಸ್ವತಂತ್ರವಾದಂದಿನಿಂದ ನಾನು ಒಂದೂ ವರ್ತಮಾನ ಪತ್ರವನ್ನು ಓದಿಲ್ಲ

ರಾಮುರಾಯ— ಈ ಮಾತನ್ನು ಮುಂದಿಗೆ ಹೇಳಬ್ಯಾಡ್ರಿ ಅಂತೂ ನೀವು ಆ ಪತ್ರದ ಅಗ್ರಲೇಖವನ್ನು ಓದಿಲ್ಲ ಅಂದಮೇಲೆ ನಿಮ್ಮೊಡನೆ ನಾನೇನು ಮಾತಾಡಬೇಕು?

ಶೇಖರ— ಖರೇ ಹೇಳಬೇಕಾದರೆ ನಾನು ವರ್ತಮಾನ ಪತ್ರದ ಪುಟಗಳನ್ನು ತಿರುವಿ ಹಾಕುತ್ತೇನೆ, ಆದರೆ ಓದುವದಿಲ್ಲ ಒಮ್ಮೊಮ್ಮೆ ಆಕರ್ಷಕವಾದ ಜಾಹೀರಾತುಗಳನ್ನು ಓದುತ್ತೇನೆ

ರಾಮುರಾಯ— ನಿಮ್ಮ ಈ ಮಾತುಗಳನ್ನು ಕೇಳಿದವರು ನೀವು ಬ್ಯಾರಿಸ್ಟರರಾಗಿದ್ದೀರಿ ಎಂದು ಹೇಳಿದರೆ ನಂಬಲಿಕ್ಕಿಲ್ಲ.

ಶೇಖರ— ಅದಿರಲಿ, "ಸ್ವತಂತ್ರ ಭಾರತ"ದ ಅಗ್ರಲೇಖದಲ್ಲಿ ಏನಿದೆ ?

ರಾಮುರಾಯ— ಅಂದರೆ ಓದುವ ಲವಲವಿಕೆಯಿಲ್ಲದಿದ್ದರೂ ಕೇಳುವ ಕುತೂಹಲವಿದ್ದ ಹಾಗಾಯಿತು. ಇಂದಿನ ಅಗ್ರಲೇಖವೆಂದರೆ ಅವಿನಾಶರನ್ನು ಹಾಡಿ ಹೊಗಳುವ ಸ್ತುತಿಕಾವ್ಯವಾಗಿದೆ ಅವರು ಲೋಕಸಭೆಯಲ್ಲಿ ಮಾಡಿದ ಭಾಷಣವನ್ನು ಕೇಳಿದವರಿಗೆ ಸುರೇಂದ್ರನಾಥ ಬ್ಯಾನರ್ಜಿಯವರ ನೆನಪಾಯಿತಂತೆ!

ಶೇಖರ— ಸುರೇಂದ್ರನಾಥ ಬ್ಯಾನರ್ಜಿ? ಯಾರ್‍ರಿ ಇವ' ಕ್ರಿಕೆಟ ಆಟದಲ್ಲಿ ಹೆಸರು ಗಳಿಸಿದ ಆ ಬ್ಯಾನರ್ಜಿನೇ ಏನು ಮತ್ತೆ ?

ರಾಮುರಾಯ— ಛೀ, ಛೀ, ಛೀ! ನಿಮ್ಮ ಅಜ್ಞಾನಕ್ಕಂತೂ ಮಿತಿಯೇ ಇಲ್ಲ ಹ್ಯಾಂಗರಿ ನೀವು ಇಷ್ಟೆಲ್ಲಾ ಪರೀಕ್ಷಾ ಪಾಸಾದಿರಿ ?

ಶೇಖರ—ಪರೀಕ್ಷಕರನ್ನು ಮೆಚ್ಚಿಸಲೆಂದು ಏನೋ ಸ್ವಲ್ಪ ಸಿದ್ಧತೆ ಮಾಡಿ ಪಾಸಾದವನು, ನಾನಪ್ಪ ಅಭಿನಂದನಾಪತ್ರ ಏಕೆ, ಸಂ . . ವನವು ಇರಲಿ, ಅವಿನಾಶನೇನು ಆ ನವಭಾರತ ಪತ್ರಿಕೆಯಲ್ಲಿ ಏನೋ ಬರೆದಿ ದ್ದಾನೇನು ?

ರಾಮರಾಯ— ಅವಿನಾಶರು ಈ ಕಾರ್ಯ ಸಂಬಂಧಕ್ಕೆ ಬೇರೆ ಬರೆದಿರ ಬಹುದೆ? ಅವರು ಅದನ್ನು ತೀವ್ರವಾಗಿ ಖಂಡಿಸಿ ನಿಮ್ಮ ಹೋರಾಟದ ರೀತಿಯ ಅದ್ಭುತ ರೀತಿಯನ್ನು ವಿವರಿಸಿ ಸಮಾಜದ ಕಣ್ಣು ತೆರೆದರು. ಅವರ ಈ ಭಾಷಣದಿಂದ ಕೇಂದ್ರದ ವರೆಗೆ ಅವರ ಕೀರ್ತಿ ಹಬ್ಬಿದೆ. ಕೇ . . ನಿನ್ನ ಬಗ್ಗೆ ಸ್ವತಂತ್ರ ಭಾರತ ಏನು ಹೇಳುತ್ತದೆಯೆಂಬುದನ್ನು ಕೇಳು. “ಭಾರ ತದ ಉದಯೋನ್ಮುಖ ತರುಣ ನಾಯಕರಾದ ಅವಿನಾಶರು - ಗಾಂಧೀಜಿ ಯವರ ತ್ಯಾಗ, ಸುರೇಂದ್ರನಾಥರ ಮಾತುಗಾರಿಕೆ, ನೆಹರೂ ಅವರ ಕರ್ತವ್ಯ ನಿಷ್ಠೆ, ರಾಜಾಜಿಯವರ ಚಾತುರ್ಯ—ಎಲ್ಲವೂ ಅವಿನಾಶರಲ್ಲಿ ಮುಪ್ಪುರಿಗೊಂಡಿ ವೆಯೋ ಏನೋ ಎನ್ನುವಷ್ಟು ಭವ್ಯವಾಗಿದೆ ಅವರ ವ್ಯಕ್ತಿತ್ವ” ಯಾವುದೇ ವರ್ತಮಾನಪತ್ರ ನಿಮ್ಮ ವಿಷಯಕ್ಕೆ ಇಂಥಾ ಮಾತುಗಳನ್ನು ಹೇಳ ಬಹುದೆ?

ಶೇಖರ— ಛೇ, ಛೇ. ಅದೆಂದಿಗೂ ಸಾಧ್ಯವಿಲ್ಲ ತಂದೆಯೇ ನಾನವ ರಿಗೆ ಕೃತಜ್ಞನಾಗಿದ್ದೇನೆ ಪ್ರಶಂಸೆಯಿಂದ ನನಗೆ ಒಮ್ಮೊಮ್ಮೆ ಮುಜುಗರವಾಗು ತ್ತದೆ.

ರಾಮರಾಯ - ನೀವು ರಾಜಕಾರಣದಲ್ಲಿ ಸೇರಬಹುದೆಂಬ ಆಸೆ ಯಿತ್ತು ನನಗೆ

ಶೇಖರ— ನಿಮ್ಮ ಆಶಾಭಂಗ ಮಾಡಿದೆ ನಾನು ನನ್ನನ್ನು ಕ್ಷಮಿಸಿರಿ. ರಾಜಕಾರಣದಲ್ಲಿ ಸೇರುವವರು ಅತ್ಯಂತ ಕುಶಾಗ್ರಬುದ್ಧಿಯವರಾಗಲಿ, ಬುದ್ಧಿಯಿಲ್ಲದ ಮೂರ್ಖರಾಗಲಿ ಇರಬೇಕು. ಸ್ವಾರ್ಥಸಾಧಕರಿಗೆ ಅದು ಸುವರ್ಣಸಂಧಿಯಾಗಿರುವಂತೆ, ತ್ಯಾಗಿಗಳಿಗೆ ತಮ್ಮ ಭೂಮಿಯಂತಿದೆ ಸುವರ್ಣ ಮಧ್ಯವನ್ನು ಸಾಧಿಸುವ ನಮ್ಮಂತಹ ಸಾಮಾನ್ಯರಿಗೆ ರಾಜಕಾರಣದಲ್ಲಿ ಯಶಸ್ಸು ದೊರೆಯಲಾರದು.

ರಾಮರಾಯ ನಿಮಗೆ ಯಾತರಲ್ಲಿಯೂ ಯಶಸ್ಸು ದೊರೆಯಲಾ ರದು. ಯಾವ ಕೆಲಸವನ್ನೂ ಮಾಡದೆ ಆಲಸ್ಯದಲ್ಲಿ ಹೊರಳಾಡುವುದೇ ನಿಮ್ಮ

ಸುವರ್ಣಮಧ್ಯವಾಗಿದೆ [ಒಪ್ಪೆರೆ] ಅಲ್ಲ, ನೀವು ಮಂದಾನ್ನ ಯಾಕೆ ಮದಿವಿ ಆಗಬಾರದು! ಅವಳು ನಮ್ಮ ಮನೆಗೆ ಯೋಗ್ಯ ಸೊಸೆಯಾಗಬಹುದು.

ಶೇಖರ— ಕಾಕಾಸಾಹೇಬ, ನೀವು ನನ್ನ ಮನಸ್ಸಿನ ಮಂಡಿಗೆಯನ್ನೇ ಒಡೆದು ಹೇಳಿದಿರಿ ನಾನು ಅವಳನ್ನೇ ಕೇಳಬೇಕೆಂಬುವ ವಿಚಾರದಲ್ಲಿದ್ದೇನೆ.

ರಾಮರಾಯ— ಹಾಗಿದ್ದರೆ ಆ ವಿಚಾರವನ್ನು ಈಗಿಂದೀಗ ನಿಮ್ಮ ಮನಸ್ಸಿನೊಳಗಿಂದ ತಳ್ಳಿಬಿಡಿರಿ ಅವಳು ನಿಮ್ಮಂಥ ನಿರುಪಯೋಗಿ ಮನುಷ್ಯನೊಡನೆ ಮದಿವೆಯಾಗುವದು ಸಾಧ್ಯವಿಲ್ಲ. ಹುಡಿಗಿ ಬಹಳ ಹುಶಾರಾಗಿದ್ದಾಳೆ

ಶೇಖರ—ಹುಡಿಗೆಯರು ಎಷ್ಟು ಹುಶಾರಾಗಿದ್ದರೂ ಮದಿವೆಯ ವಿಷಯದಲ್ಲಿ ಅವರು ಮತಿಹೀನರೆಂದೇ ನಾವು ತಿಳಿಯಬೇಕು

ರಾಮರಾಯ—ಅವಳ ಕೈಹಿಡಿಯುವ ಯೋಗ್ಯತೆ ನಿಮ್ಮಲ್ಲಿ ಎಳ್ಳಷ್ಟೂ ಇಲ್ಲ ಅವಳು ನಿಮ್ಮನ್ನು ಮದಿವೆಯಾಗಲು ಒಪ್ಪಿದರ ನಾನಂತೂ ಅವಳು ಮೂರ್ಖಳೆಂದು ತಿಳಿಯುತ್ತೇನೆ

ಶೇಖರ-- ನನ್ನೊಡನೆ ಮದಿವೆಯಾಗುವದು ಒಳ್ಳೆಯದಲ್ಲವೆಂದು ತಿಳಿಯುವಷ್ಟು ಬುದ್ಧಿ ಅವಳಲ್ಲಿದ್ದರೆ ನಾನೂ ಅವಳೊಡನೆ ಮದಿವೆಯಾಗುವದಿಲ್ಲ ಬುದ್ಧಿಯಿದ್ದ ಹೆಂಗಸು ಗೆಳತಿಯಾಗಿರಬೇಕು, ಬುದ್ಧಿಯಿಲ್ಲದ ಹೆಂಗಸು ಹೆಂಡತಿಯಾಗಿರಬೇಕು ಇದು ನನ್ನ ಜೀವನದ ತತ್ವಜ್ಞಾನವಾಗಿದೆ ಅದೋ ಅವಳೇ ಬಂದಳು.

[ಮಂದಾ ಪ್ರವೇಶಿಸುತ್ತಾಳೆ]

ಮಂದಾ—ನಮಸ್ಕಾರ, ಕಾಕಾಸಾಹೇಬ! [ಶೇಖರನನ್ನು ನೋಡಿಯೂ ನೋಡ ಹಾಗೆ] ಕಲ್ಲಳ್ಳಿಯ ಗೌಡರು ನಿಮ್ಮನ್ನು ಕಾಣಬೇಕಂತನ್ನತಿದ್ದರು.

ರಾಮರಾಯ— ಟೆನಸ್ಸಿಯ ಭೂತವೊಂದು ಅವನ ಬೆನ್ನು ಹತ್ತಿದೆಯಲ್ಲ!

ಶೇಖರ-- ಮಂದಾ, ಈ ಹೊತ್ತು ಮುಂಜಾನೆ ....

ಮಂದಾ—[ಅವನ ಮಾತನ್ನು ದುರ್ಲಕ್ಷಿಸಿ] ಹೌದು, ಟೆನಸ್ಸಿ ಕಾಯದೇದ ಸಲುವಾಗಿಯೇ ನಿಮ್ಮ ಸಲಹೆಯನ್ನು ಪಡೆಯಬೇಕಾಗಿದೆಯಂತೆ ಅವರಿಗೆ

ಶೇಖರ— ಮಂದಾ, ಈಹೊತ್ತು ಮುಂಜಾನೆ ನನಗೆ

ಮಂದಾ— ಇಂದಿನ ನರಕಾರದ ಘೋರಣ ಎಷ್ಟು ಅನಿಶ್ಚಿತವಾಗಿದೆ ಯೆಂದು ಅವರು ಹೇಳುತ್ತಿದ್ದರು

ರಾಮರಾಯ— ನರಕಾರದ ಘೋರಣ ಅನಿಶ್ಚಿತವಾಗಿಲ್ಲ, ಮಂದಾ, ಹೊಲದ ಮೇಲಿನ ಗೌಡರ ಒಡೆತನ ಅನಿಶ್ಚಿತವಾಗಿದೆ

ಶೇಖರ— (ಕೂಗಿ) ಮಂದಾ

ಮಂದಾ— ಓಹೋ, ನೀವೂ ಇಲ್ಲಿಯೇ ಇದ್ದೀರೇನು? ಆದರೆ ನಿಮ್ಮೊಡನೆ ಮಾತನಾಡಲು ಯಾವ ಕಾರಣವೂ ಇಲ್ಲ

ಶೇಖರ— ಮಾತಿಗೆ ಕಾರಣ ಬೇಕಾಗುತ್ತದೆಯೇ, ಮಂದಾ?

ಮಂದಾ— ಮಾತನಾಡದೆ ಇರುವದಕ್ಕೆ ಕಾರಣ ಬೇಕಾಗುತ್ತದೆ ಸಂಜೆಗೆ ಆಡಿದ ಮಾತನ್ನು ಬೆಳಗಾಗುವ ಮೊದಲು ಮರೆಯುವಂಥ ಮನುಷ್ಯನೊಡನೆ ಮಾತನಾಡದೆ ಇರುವದೇ ಒಳ್ಳೆಯದು

ಶೇಖರ—ಎಷ್ಟೊತ್ತಾಯಿತು, ನಾನು ಅದರ ಬಗ್ಗೆ ಹೇಳಲು ಪ್ರಯತ್ನಿಸುತ್ತಿದ್ದೇನೆ. ಈ ಹೊತ್ತು ಮುಂಜಾನೆ

ಮಂದಾ— ಈ ಹೊತ್ತು ಮುಂಜಾನೆ ನೀವು ಇಲ್ಲಿಗ ಬರುವೆನೆಂದು ಮಾಡಿದ್ದಿರಿ, ಬರಲಿಲ್ಲ ಅದಕ್ಕಾಗಿ ನೀವು ಒಂದು ಕುಂಟು ನೆವ ಹೇಳಬಹುದು. ಅದನ್ನು ಕೇಳುವ ಮನಸ್ಸಿಲ್ಲ ನನಗೆ, ಯಾಕಂದರ ಅದೆಲ್ಲ ಸುಳ್ಳಾಗಿರುತ್ತದೆ

ಶೇಖರ— ನಾನು ಹೇಳುವದು ನೆವವಲ್ಲ, ಮಂದಾ, ಅದು ಕಾರಣವಾಗಿದೆ.

ಮಂದಾ— ನಿಮ್ಮ ಮಾತೆಂದರೆ ಭಾಷೆಯ ದುರುಪಯೋಗವಾಗಿದೆ

ರಾಮರಾಯ — ಖರೇ ನೋಡು, ಮಂದಾ, ನಮ್ಮ [illegible] ಮಾತೆಂದರ ಭಾಷೆಯ ದುರುಪಯೋಗವಾಗಿದೆ ಒಂದು ಸ್ವಲ್ಪ ಕೇ[illegible]

ಮಂದಾ— ಕಾಕಾಸಾಹೇಬ, ನಿಮ್ಮ ಸ್ವಭಾವದಲ್ಲಿಯೂ ಇವರ ಸ್ವಭಾವದಲ್ಲಿಯೂ ಎಷ್ಟು ಅಂತರವಿದೆ! ನೀವು ತಂದೆ ಮಕ್ಕಳೆಂದು ಯಾರೂ ಹೇಳಲಾರರು. ಮಾವಿನ ಮರಕ್ಕೆ ಬೇವು ಬೆಳೆದ ಹಾಗಾಗಿದೆ. ನೀವು ಇವರಿಗೆ ಒಳ್ಳೆಯ ನಡತೆಯನ್ನು ಕಲಿಸುವ ಪ್ರಯತ್ನವನ್ನು ಯಾಕೆ ಮಾಡುವದಿಲ್ಲ?

ರಾಮರಾಯ—ಕಲ್ಲು ಸೀಳಿ ನೀರು ತೆಗೆಯಬಹುದು, ಉಸುಕು ಹಿಂಡಿ ಎಣ್ಣೆ ತೆಗೆಯಬಹುದು. ಆದರೆ ಇವನಿಗೆ ಒಳ್ಳೆಯ ಸಭ್ಯತೆಯನ್ನು ಕಲಿಸುವದು ಸರ್ವಥಾ ಸಾಧ್ಯವಿಲ್ಲ, ಮಂದಾ !

ಮಂದಾ— ಅದೂ ಖರೆ, ಸ್ವಭಾವೋ ದುರತಿಕ್ರಮಃ ಅಂತ ಹೇಳುವದು ಸುಳ್ಳಲ್ಲ

ಶೇಖರ— ನಾನಿಲ್ಲಿಯೇ ನಿಮ್ಮ ಎದುರಿಗೆ ನಿಂತಿದ್ದೇನೆಂಬುದನ್ನು ನೀವಿಬ್ಬರೂ ಮರೆತಹಾಗೆ ತೋರುತ್ತದೆ. ನನ್ನ ಬೆನ್ನ ಹಿಂದೆ ಹೇಳಬೇಕಾದ ಮಾತನ್ನು ನೀವು ನನ್ನೆದುರಿಗೆ ಹೇಳುತ್ತಿದ್ದೀರಿ

ರಾಮರಾಯ— ಜನರು ನಿಮ್ಮ ಬೆನ್ನ ಹಿಂದೆ ನಿಮ್ಮ ವಿಷಯಕ್ಕೆ ಏನು ಆಡುತ್ತಾರೆಂಬುದರ ಕಲ್ಪನೆಯಾದರೂ ಬರಲಿ !

ಶೇಖರ— ಅದನ್ನು ತಿಳಿದುಕೊಳ್ಳಬೇಕೆಂಬ ಹಂಬಲ ನನಗಿಲ್ಲ. ಅದರಿಂದ ನನ್ನ ಅಹಂಕಾರ ಬೆಳೆದೀತೆಂಬ ಹೆದರಿಕೆ ನನಗಿದೆ.

ರಾಮರಾಯ— ನಾಯಿಯ ಬಾಲ ಡೊಂಕು ಮಂದಾ, ನಾನು ಹೋಗುತ್ತೇನೆ ನನಗೊಂದು ಮಹತ್ವದ ಕೆಲಸವಿದೆ.

[ರಾಮರಾಯರು ಹೋಗುತ್ತಾರೆ]

ಶೇಖರ— ಮಂದಾ, ನಿನ್ನೊಡನೆ ಸ್ವಲ್ಪ ಮಾತಾಡಬೇಕಾಗಿದೆ.

ಮಂದಾ— ನಿಮ್ಮ 'ಸ್ವಲ್ಪ' ಎಂಬ ಶಬ್ದದ ಕೆಳಗೆ ನಾನು ಗೆರೆಯನ್ನೆಳೆಯುತ್ತೇನೆ

ಶೇಖರ— ಚೇಷ್ಟೆ ಸಾಕುಮಾಡು, ಮಂದಾ, ಸ್ವಲ್ಪ ಗಂಭೀರಳಾಗಿ ನನ್ನ ಮಾತನ್ನು ಕೇಳು.

ಮಂದಾ— ಎಂಥಾ ಗಂಭೀರವಾದ ವಿಷಯವದು?—ನನ್ನ ಮದುವೆಯೆ ?

ಶೇಖರ— ಹೌದು, ನಿನ್ನ ಮದುವೆ, ನನ್ನ ಮದುವೆ— ನಮ್ಮಿಬ್ಬರ ಮದುವೆ !

ಮಂದಾ— ನನ್ನ ಇಂದಿನ ಗ್ರಹಗಳ ಗತಿಯೇ ಬೇರೆಯಾಗಿರುವಂತೆ ತೋರುತ್ತದೆ. ಯಾಕಂದರೆ ಈ ಹೊತ್ತು ಬೆಳಗಿನಿಂದ ನನ್ನ ಮದುವೆಯ ಮಾತನ್ನೆತ್ತದವರಲ್ಲಿ ನೀವೇನೂ ಮೊದಲನೆಯವರಲ್ಲ.

ಶೇಖರ—ನಿನ್ನನ್ನು ಮದಿವೆಯಾಗಬೇಕೆನ್ನುವ ಮೂರ್ಖ ಯಾರು?

ಮಂದಾ— ಕಲ್ಲಳ್ಳಿಯ ಗೌಡರು ಅವರ ಮೊದಲನೆಯ ಹೆಂಡತಿಗೆ ಇಂಗ್ಲೀಷು ಬರುವದಿಲ್ಲವಂತೆ ಇಂಗ್ಲೀಷು ಆಡುವ ಹೆಂಡತಿಯಿಂದಲೇ ಸ್ವರ್ಗ ಸಿಕ್ಕೀತೆಂಬ ಭರವಸೆ ಅವರಿಗಿದೆ ಅವರು ಮತ್ತೊಂದು ಮದಿವೆಯಾಗಿ ರಾಜಕಾರಣದಲ್ಲಿ ಸೇರಬೇಕೆಂದಿದ್ದಾರೆ

ಶೇಖರ— ನೀನು ಅವರಿಗೆ ಏನು ಹೇಳಿದೆ?

ಮಂದಾ— ನಾನೇನು ಹೇಳಿರಬಹುದು?

ಶೇಖರ— "ತಥಾಸ್ತು" ಎಂದು ಹೇಳಿರಬಹುದು

ಮಂದಾ— ನಾನು ಅವರಿಗೆ "ಇಲ್ಲ" ಎಂದು ಹೇಳಿದೆ

ಶೇಖರ— ನೀನು ತಪ್ಪು ಮಾಡಿದೆ, ಮಂದಾ

ಮಂದಾ— ನಾನು ಮತ್ತೊಮ್ಮೆ ತಪ್ಪು ಮಾಡಬೇಕೆಂದಿದ್ದೇನೆ

ಶೇಖರ— ನನಗೆ "ಇಲ್ಲ" ಅಂತ ಹೇ...

ಮಂದಾ-- ಇಲ್ಲ, [ನಸುನಾಚಿಕೆಯಿಂದ ತನ್ನ ... ಜಡೆಯೊಂದಿಗೆ ಆಟವಾಡುತ್ತ] ನಿಮಗೆ ತಥಾಸ್ತು ಎಂದು ಹೇಳಿ

ಶೇಖರ— [ಅವಳ ಕೈ ಹಿಡಿದು] ಮಂದಾ! ಇಂದು ನನ್ನ ಭಾಗ್ಯದ ಬಾಗಿಲು ತೆರೆದಂತಾಯಿತು ನಿನ್ನ ಪ್ರೀತಿಯನ್ನು ಪಡೆದೇನೆಂಬ ಧೈರ್ಯ ನನಗಿರಲಿಲ್ಲ ಅದೊಂದು ಅಸಾಧ್ಯವಾದ ಆದರ್ಶವೆನಿಸಿತ್ತು

ಮಂದಾ— ನಿಮಗೆ ಬ್ಯಾರಿಸ್ಟರ ಪದವಿಯನ್ನು ಯಾರು ಕೊಟ್ಟರೊ, ಅಂತೀನಿ. ನಾನೊಬ್ಬ ಹುಚ್ಚಿಯಂತೆ ನಿಮ್ಮನ್ನು ಪ್ರೀತಿಸುತ್ತೇನೆಂಬುದು ಜಗಜ್ಜಾಹೀರವಾಗಿದೆ. ನಿಮಗೆ ಮಾತ್ರ ಅದರ ಅರಿವೂ ಇಲ್ಲ ನಾನು ಹೋಗುತ್ತೇನೆ ಸುಧಕ್ಕ ಬರುತ್ತಿದ್ದಾಳೆ.

[ಸುಧಾನ ಪ್ರವೇಶ]

ಸುಧಾ — ನೀವು ಯಾವಾಗ ಬಂದಿರಿ?

ಮಂದಾ— ಅವರು ಬಂದು ಬಹಳ ಹೊತ್ತಾಯಿತು. ನಿನಗೇನೋ ಮಹತ್ವದ ಮಾತು ಹೇಳಬೇಕಾಗಿದೆಯಂತೆ! ನಾನು ಹೋಗುತ್ತೇನೆ. [ಮೆಲ್ಲಗೆ ಶೇಖರನಿಗೆ] ಒತ್ತಲವಷ್ಟೆ ನಾನು ಮಾಡಿದ ... ತಪ್ಪಿದ ...ತ್ತೇನೆ

ಶೇಖರ— ಅಚ್ಛಾ! [ಮಂಚಾ ಮೋಪಮೇಲೆ, ಸುಧೆಗೆ] ಹೌದು, ನಿಮಗೊಂದು ಮಹತ್ವದ ಸುದ್ದಿಯನ್ನು ತಿಳಿಸಬೇಕಾಗಿದೆ ನಿನ್ನೆ ರಾತ್ರಿ ನಾನು ಲಲಿತಾಬಾಯಿಯ ಹತ್ತಿರವಿದ್ದ ಆ ಪತ್ರವನ್ನು ತೆಗೆದುಕೊಂಡು ಹರಿದುಹಾಕಿದೆ. ಇನ್ನುಮೇಲೆ ಅವಿನಾಶನಿಗೆ ಯಾವ ಭಯವೂ ಇಲ್ಲ.

ಸುಧಾ— ನೀವು ಆ ಪತ್ರವನ್ನು ಹರಿದುಹಾಕಿದಿರಿ? [ಕೋಚಿನಮೇಲೆ ಕುಸಿದುಕೊಳ್ಳುತ್ತಾಳೆ] ನಿಜವೇ, ಶೇಖರ? ಎಂಥಾ ಆನಂದದ ಸುದ್ದಿಯನ್ನು ತಂದಿದ್ದೀರಿ? ನೀವು ನಮ್ಮ ಮೇಲೆ ಮಾಡಿದ ಉಪಕಾರವನ್ನು ನಾವೆಂದಿಗೂ ಮರೆಯುವ ಹಾಗಿಲ್ಲ

ಶೇಖರ—ಅವಿನಾಶನನ್ನು ಒಂದು ಸಂಕಟದೊಳಗಿಂದ ಪಾರುಮಾಡಿದೆ ಆದರೆ ಸುಧಾತಾಯಿ, ನಿಮ್ಮನ್ನು ನಾನು ಮತ್ತೊಂದು ಸಂಕಟದಲ್ಲಿ ದೂಡಿದೆ.

ಸುಧಾ— ನನ್ನನ್ನು? ನನ್ನನ್ನು ಸಂಕಟದಲ್ಲಿ ದೂಡಿದಿರಾ? ನನಗರ್ಥ ವಾಗಲಿಲ್ಲ ಶೇಖರ

ಶೇಖರ— ನೀವು ನಿನ್ನೆ ಇಷ್ಟು ವಿಶ್ವಾಸದಿಂದ ನನಗೆ ಪತ್ರ ಬರೆದಿರಿ. ಆದರೆ ಆ ಪತ್ರವನ್ನು ಲಲಿತಾಬಾಯಿ ಕಳವು ಮಾಡಿದಳು.

ಸುಧಾ— ಇಷ್ಟೇ ಹೌದಲ್ಲೋ? ಆದರೆ ಇದರಲ್ಲಿ ಸಂಕಟವೇನಿದೆ? ಆ ಪತ್ರವನ್ನು ತೆಗೆದುಕೊಂಡು ಏನು ಮಾಡುವವಳಿದ್ದಾಳೆ ಅವಳು?

ಶೇಖರ— ಸುಧಾತಾಯಿ, ನಿಮಗೆ ಅದನ್ನು ಹೇಗೆ ತಿಳಿಸಿ ಹೇಳಲಿ? ಆ ಪತ್ರವನ್ನು ಅವಳು ಅವಿನಾಶನಿಗೆ ಕಳಿಸಬೇಕೆಂದಿದ್ದಾಳೆ. ಅದನ್ನು ನೋಡಿ ಅವಿನಾಶನಿಗೆ ನಿಮ್ಮ ವಿಷಯಕ್ಕೆ .. ..

ಸುಧಾ-- ಏನು, ನೀವು ಅನ್ನುವುದಾದರೂ ಏನು?

ಶೇಖರ—ನಿಮ್ಮ ವಿಷಯಕ್ಕೆ ಸಂಶಯ ನಿರ್ಮಾಣವಾಗಬಹುದು ಅವರ ಮನಸ್ಸಿನಲ್ಲಿ

ಸುಧಾ— ಅದು ಶಕ್ಯವಿಲ್ಲ ಹಾಗೆ ಅವರು ನನ್ನ ವಿಷಯವಾಗಿ ಇಲ್ಲದ ಸಲ್ಲದ ಸಂಶಯವನ್ನು ತಾಳುವದು ಶಕ್ಯವಿಲ್ಲ ಶೇಖರ, ನೀವು ಅವಿನಾಶರ ಜೀವದ ಗೆಳೆಯರು, ನಿಮ್ಮಿಂದ ಸಹಾಯವನ್ನು ಪಡೆಯಬೇಕೆಂಬ ಶುದ್ಧ ಭಾವನೆಯಿಂದ ನಾನು ನಿಮಗೆ ಪತ್ರ ಬರೆದೆ.

ಶೇಖರ— ಹೌದು, ಆದರೆ.... . ..

ಸುಧಾ— ಆ ಪತ್ರ ಅವಳ ಕೈಯಲ್ಲಿ ಹೇಗೆ ಹೋಯಿತು, ಶೇಖರ? ನೀವೇನು ಮಾಡಿದಿರಿ ಇದನ್ನು?

ಶೇಖರ— ನಿಮ್ಮ ಪತ್ರ ಬಂದಮೇಲೆ ನೀವು ಬರಬಹುದೆಂಬ ಅಪೇಕ್ಷೆಯಿಂದ ನಾನು ನಮ್ಮ ಆಚಾರಿಗೆ ಹೇಳಿದೆ— ಯಾರಾದರೂ ಹೆಂಗಸರು ಬಂದರೆ ಅವರನ್ನು ಒಳಗಿನ ಕೋಣೆಯಲ್ಲಿ ಕೂಡಿಸು ಅಂತ. ಆದರೆ ನೀವು ಬರಲಿಲ್ಲ, ಲಲಿತಾ ಬಂದಳು. ಅವಳು ಒಳಗಿನ ಕೋಣೆಯಲ್ಲಿ ಕೂತಿರುವಾಗ ಅವಿನಾಶ ಬಂದ. ನಾವು ಮಾತಾಡುತ್ತಿರುವಾಗ ಒಳಗೆ ಏನೋ ಬಿದ್ದ ಸಪ್ಪಳವಾಯಿತು ಅವಿನಾಶನು ಒಳಗಿನ ಕೋಣೆಯಲ್ಲಿ ಹೋಗಿ ನೋಡಿದ ನನಗನಿಸಿತು, ನೀವೇ ಅಲ್ಲಿರಬಹುದೆಂದು. ಅವನು ಸಿಟ್ಟಿನಿಂದ ನನ್ನನ್ನು ತೆಗಲಿ ಹೋಗಿಬಿಟ್ಟ. ಆಮೇಲೆ ಲಲಿತಾ ಹೊರಗೆ ಬಂದ [illegible] ಯಿಂದ ನಾನು ಅವಿನಾಶನ ಪತ್ರವನ್ನು ತಗೆದುಕೊಂಡೆ [illegible] ಹರಿದುಹಾಕಿದೆ. ಆದರೆ ಲಲಿತಾಬಾಯಿ ನಿಮ್ಮ ಪತ್ರವನ್ನು [illegible] ಮಾಡಿದ್ದಳು. ಅದನ್ನು ಪಡೆಯುವದು ನನ್ನಿಂದ [illegible] ತಾಯಿ

ಸುಧಾ— ಇದೆಲ್ಲ ನಡೆದದ್ದು ಯಾವಾಗ, ಶೇಖರ?

ಶೇಖರ— ಆಗ ರಾತ್ರಿಯ ಹನ್ನೊಂದು [illegible] ಸುಧಾತಾಯಿ, ಈ ವಿಷಯವನ್ನು ನಾವು ಅವಿನಾಶನಿಗೆ ತಿಳಿಸಬೇಕು.

ಸುಧಾ— [ಭೀತಿಯಿಂದ] ನಿನ್ನೆ ರಾತ್ರಿ ಹನ್ನೊಂದು ಗಂಟೆಗೆ ನೀನು ನನ್ನ ದಾರಿ ಕಾಯುತ್ತ ಕುಳಿತಿದ್ದಿರೆಂದು ನಾನು ಹೇಳಬೇಕೆ? ನೀವು ನಿನ್ನೆ ಲಲಿತಾಬಾಯಿಯನ್ನಲ್ಲ, ನನ್ನನ್ನು ಬಚ್ಚಿಡುವ ಪ್ರಯತ್ನ ಮಾಡುತ್ತಿದ್ದಿರೆಂದು ನಾನು ಹೇಳಬೇಕೆ? ಅದನ್ನು ಆವರಿಗೆ ನಾನು ಹೇಗೆ ಹೇಳಲಿ, ಶೇಖರ?

ಶೇಖರ-- ನಿಜವಾದ ಸಂಗತಿಯನ್ನು ಅವನಿಗೆ ತಿಳಿಸುವದೇ ಒಳ್ಳೆಯದು.

ಸುಧಾ-- ಇಲ್ಲ, ಇಲ್ಲ, ಶೇಖರ, ನಾನು ಈ ಮಾತನ್ನು [illegible] ಸರ್ವಥಾ ತಿಳಿಸಲಾರೆ.

ಶೇಖರ— [illegible] ಆ ಪತ್ರವನ್ನು ಅವನ ಕೈಗೆ [illegible] ನಾವು ನೋಡಿಕೊಳ್ಳಬೇಕು. ನಾನು [illegible] ಹೋಗಿ [illegible]

[ಅಷ್ಟರಲ್ಲಿ ಅವಿನಾಶ ಕೈಯಲ್ಲಿ [illegible] ಪ್ರವೇಶಿಸುತ್ತಾನೆ.]

ಶೇಖರ— ಇನ್ನೇನೂ ಉಪಯೋಗವಿಲ್ಲ, ಸುಧಾಬಾಯಿ

ಸುಧಾ— ಅಯ್ಯೋ, ನಾನಿನ್ನೇನು ಮಾಡಲಿ ?

ಅವಿನಾಶ— [ಆನಂದದಿಂದ] "ನಿಮ್ಮ ಹೊರತಾಗಿ ನನಗೆ ಬೇರೆ ಯಾರ ಆಧಾರವೂ ಇಲ್ಲ—ಸುಧಾ" ಸುಧಾ, ನಿನ್ನ ಈ ಮುತ್ತಿನಂತಹ ಮಾತುಗಳನ್ನು ಓದಿ ನಾನು ಸಾವಿರ ಪ್ರಾಣಗಳಾಚೆಗಿದ್ದರೂ ನಿನ್ನ ಕಡೆಗೆ ಧಾವಿಸಿ ಬರುತ್ತಿದ್ದೆ. ಸುಧಾ, ನೀನು ನನ್ನ ತಪ್ಪನ್ನು ಕ್ಷಮಿಸುವೆಯಾ"

[ಶೇಖರ ಹೋಗುತ್ತಾನೆ.]

ಸುಧಾ— ಹೌದು, ಅವಿನಾಶ !

ಅವಿನಾಶ— ಸುಧಾ, ಇದರಿಂದ ನನಗೆಷ್ಟು ಆನಂದವಾಗಿದೆಯೆಂದು ಹೇಳಲಿ ? ನಾನಿನ್ನು ಸಮಾಜಬಾಹಿರನಾದರೂ ಅಡ್ಡಿಯಿಲ್ಲ. ನಿನ್ನ ಪ್ರೀತಿಯೊಂದಿದ್ದರೆ ನನಗಿನ್ನೇನೂ ಬೇಡ.

ಸುಧಾ— ನೀವಿನ್ನು ಹೆದರುವ ಕಾರಣವಿಲ್ಲ, ಅವಿನಾಶ ! ಶೇಖರರು ಲಲಿತಾಬಾಯಿಯ ಕಡೆಯಿಂದ ಆ ಪತ್ರವನ್ನು ಪಡೆದು ಹರಿದುಹಾಕಿದ್ದಾರೆ

ಅವಿನಾಶ— ಹರಿದುಹಾಕಿದ್ದಾರೆ ? ನಿನಗಿದನ್ನು ಯಾರು ಹೇಳಿದರು ?

ಸುಧಾ— ಶೇಖರ, ಅವರೇ ಸ್ವತಃ ಈ ಸುದ್ದಿಯನ್ನು ಹೇಳಿದರು.

ಅವಿನಾಶ— ಹಾಂ, ನಾನಿನ್ನು ಮುಕ್ತನಾದೆ ದುಃಖದಂತೆ ಸುಖವೂ ಹಿಂಡುಗಟ್ಟಿ ಬರುತ್ತಿರಬೇಕು ನನ್ನ ಸಂಸಾರವನ್ನೆಲ್ಲ ಹಾಳುಗೆಡವಲು ಹೊರಟಿರುವ ಭೂತವೊಮ್ಮೆ ತೊಲಗಿತು. ಎಲ್ಲಿದ್ದಾನೆ, ಶೇಖರ ?

ಸುಧಾ— ಎಲ್ಲಿಯಾದರೂ ಹೊರಗೆ ಹೋಗಿರಬೇಕು.

ಅವಿನಾಶ— ನಾನು ನಿನ್ನೆ ಲೋಕಸಭೆಯಲ್ಲಿ ಆ ಭಾಷಣ ಮಾಡಿದ್ದೇ ಒಳ್ಳೆಯದಾಯಿತು ಆ ಭಾಷಣದ ಕೊನೆಯ ಮಾತನ್ನು ನಾನು ಆಡುವ ಪೂರ್ವದಲ್ಲಿಯೇ ನನ್ನ ದೈವ ನನ್ನ ಸಾಮಾಜಿಕ ಪ್ರತಿಷ್ಠೆಯ ಮೃತ್ಯುಪತ್ರ ಬರೆಯತೊಡಗಿದೆಯೆಂಬ ಕಲ್ಪನೆಯಾಗಿತ್ತು

ಸುಧಾ— ಆದರೆ ಆ ಭಾಷಣ ನಿಮ್ಮ ಮುಂದಿನ ಯಶಸ್ಸಿಗೆ ನಾಂದಿಯಾಗಬಹುದು

ಅವಿನಾಶ— ಆ ಯಶಸ್ಸಿನ ಮೇಲೆ ನನ್ನ ಅಧಿಕಾರವಿಲ್ಲ, ಸುಧಾ! ನನ್ನ ಪಾಪದ ಕ್ರೂರಾವೆ ಸುಟ್ಟು ಬೂದಿಯಾಯಿತು, ಆದರೆ ಅದರ ನೆನಪು ನನ್ನ ಹೃದಯದಲ್ಲಿ ಆರದ ಉರಿಯಾಗಿ ಧಗಧಗಿಸತೊಡಗಿದೆ. ನಾನಿನ್ನು ಮೇಲೆ ಜನರನ್ನು ಮೋಸ ಮಾಡಲಾರೆ ಸುಧಾ, ಈ ರಾಜಕಾರಣವನ್ನು ಬಿಟ್ಟು ಎಲ್ಲಿಯಾದರೂ ದೂರ ಹೋಗಬೇಕೆಂದು ನನಗನಿಸತೊಡಗಿದೆ

ಸುಧಾ— ಹೌದೇ? ನನಗೂ ಹಾಗೆಯೇ ಅನಿಸುತ್ತದೆ ನಿಮ್ಮ ಮಂತ್ರಿಪದದ ರಾಜೀನಾಮೆಯನ್ನು ನೀವು ಕೊಡಬೇಕು ಇದು ನಿಮ್ಮ ಕರ್ತವ್ಯವಾಗಿದೆ.

ಅವಿನಾಶ— [ಸ್ವಲ್ಪ ಹೊತ್ತು ಸುಮ್ಮನಿದ್ದು, ಆಮೇಲೆ] ಎಷ್ಟು ಭಯಂಕರ ತ್ಯಾಗ! ನನ್ನ ರಕ್ತ ಮಾಂಸಗಳಿಂದಲೇ ಕಟ್ಟಿದ ಈ ಸ್ಮಾರಕ ವನ್ನು ನಾನು ಹೇಗೆ ಮುರಿಯಲಿ? ರಾಜಕಾರಣದಲ್ಲಿರುವ ನನ್ನ ನಾನಾ ಸ್ವಪ್ನ ಅವಿಶ್ರಾಂತ ದುಡಿತದ ಪ್ರತೀಕವಾಗಿದ ನನ್ನ ಮಹತ್ವಾಕಾಂಕ್ಷೆಯ ಸಾಫಲ್ಯದ ಫಲವಾಗಿದ ಅದನ್ನು ನಾನು ಹೇಗೆ ತ್ಯಜಿಸಲಿ?

ಸುಧಾ— ಇದು ನಿಮ್ಮ ಪಾಪದ ಫಲವಾಗಿದೆ, ಅವಿನಾಶ! ಈ ಪಾಪದ ದಿಂದ ನಿಮ್ಮ ಬಿಡುಗಡೆಯಾಗಲೇಬೇಕು

[ಅವಿನಾಶ ಅಸ್ವಸ್ಥನಾಗಿ ಅತ್ತಿಂದಿತ್ತ ತಿರುಗಾಡುತ್ತಾನೆ.]

ಅವಿನಾಶ— [ಸುಧಾಳ ಹತ್ತಿರ ಕೂತುಕೊಂಡು] ಆಗಲಿ ಸುಧಾ, ನೀನು ಹೇಳಿದಂತೆಯೇ ಆಗಲಿ. ನಿನ್ನ ಪ್ರೀತಿಯ ಸ್ನಿಗ್ಧ ಛಾಯೆಯ ಹಾಗೆ ಇದ್ದರೆ, ನಾನು ಏನನ್ನೂ ಮಾಡಲು ಸಿದ್ಧನಿದ್ದೇನೆ ನಾವಿಬ್ಬರೂ ಎಲ್ಲಿಯಾದರೂ ರಮ್ಯವಾದ ಏಕಾಂತದಲ್ಲಿ ಒಂದು ಪುಟ್ಟ ಮನೆಯಲ್ಲಿ ಇದ್ದುಬಿಡೋಣ. ನೀನು ಈ ನಗರದ ವೈಭವವನ್ನು ತೊರೆದು ನನ್ನೊಡನೆ ಹಳ್ಳಿಯಲ್ಲಿ ಸುಖದಿಂದ ಇರಬಲ್ಲೆಯಾ?

ಸುಧಾ— ಹೌದು, ಇರಬಲ್ಲೆ!

ಅವಿನಾಶ- ನನ್ನ ಹಿರಿಯನಾಗಿ ನೀನು ಕಷ್ಟದ ಕನಸುಗಳೆಲ್ಲ ಕರಗಿ ಹೋಗುತ್ತವೆ. ಅದರಿಂದ ನಿನಗೆ ದುಃಖವಾಗಲಿಕ್ಕಿಲ್ಲವೆ?

ಸುಧಾ— ಇಲ್ಲ; ಸತ್ಯದಿಂದ ಸಿಗುವ ಸಮಾಧಾನ ಸಲ್ಲಿದ ಮನಸ್ಸಿಗೆ

ಕಾಂಕ್ಷೆಯುಳ್ಳರುವದಿಲ್ಲ, ಅವಿನಾಶ! ಪಾಪದ ಮೇಲೆ ನಿಂತ ಅರಮನೆಗಿಂತಲೂ ಪುಣ್ಯದ ಗುಡಿಸಲಿನಲ್ಲಿಯೇ ನಮ್ಮ ಸ್ವರ್ಗವಿದೆಯೆಂದು ನಾನು ನಂಬಿದ್ದೇನೆ.

ಅವಿನಾಶ— ಸುಧಾ, ನೀನು ನನ್ನ ಪತ್ನಿಯಲ್ಲ, ನನ್ನನ್ನು ಸೋತದಿಂದ ಬಿಡುಗಡೆ ಮಾಡಲು ಬಂದಿರುವ ದೇವತೆಯಾಗಿರುವೆ!

[ಶೇಖರನ ಪ್ರವೇಶ]

Thank you very much, ಶೇಖರ! ನಾನು ನಿನಗೆ ಎಂದೆಂದಿಗೂ ಋಣಿಯಾಗಿದ್ದೇನೆ. ಈ ಜನ್ಮದಲ್ಲಿಯಂತೂ ನನಗೆ ಈ ಋಣದಿಂದ ಬಿಡುಗಡೆಯಿಲ್ಲ.

ಶೇಖರ— ಇದೆ, ಅವಿನಾಶ, ನೀನು ನನ್ನ ಒಂದು ಮಾತನ್ನು ನಡೆಸಿಕೊಟ್ಟರೆ—

[ರಾಮರಾಯರು ಪ್ರವೇಶಿಸುತ್ತಾರೆ]

ಬಂದಿರಾ, ನಿಮ್ಮ ದಾರಿಯನ್ನೇ ನಾವು ಕಾಯುತ್ತಿದ್ದೇವೆ.

ರಾಮರಾಯ— Congratulations, ಅವಿನಾಶ! ನಿನ್ನೆ ಲೋಕಸಭೆಯಲ್ಲಿ ನೀವು ಮಾಡಿದ ಭಾಷಣ ಅದ್ವಿತೀಯವಾಗಿತ್ತು. ನಿಮ್ಮ ಸ್ವಂತದ ದೃಷ್ಟಿಯಿಂದಲೂ ಅದು ಲಾಭದಾಯಕವಾಗಿದೆ. ನಾನೊಂದು ನಿಮಗೆ ಅತ್ಯಂತ ಆನಂದದ ಸುದ್ದಿಯನ್ನು ತಂದಿದ್ದೇನೆ.

ಸುಧಾ— ಆನಂದದ ಸುದ್ದಿ?

ರಾಮರಾಯ— ಉದ್ಯೋಗದ ಮಂತ್ರಿಯಾಗಿರುವ ನಿಮ್ಮ ಅವಿನಾಶರು ಇನ್ನು ಪ್ರಾಂತದ ಮುಖ್ಯ ಮಂತ್ರಿಗಳಾಗುವವರಿದ್ದಾರೆ.

ಸುಧಾ
ಅವಿನಾಶ } —ಮುಖ್ಯ ಮಂತ್ರಿ?

ರಾಮರಾಯ— ಹೌದು, ಮುಖ್ಯ ಮಂತ್ರಿ! ಈಗಿನ ಮುಖ್ಯ ಮಂತ್ರಿಗಳಲ್ಲಿಯೂ ನಮ್ಮ ಪಾರ್ಟಿಯ ನಾಯಕರಲ್ಲಿಯೂ ಅನೇಕ ಮತಭೇದಗಳಿದ್ದುವೆಂದು ನಿಮಗೆ ಗೊತ್ತೇ ಇದೆ. ನಿನ್ನೆ ಅದು ಪರಾಕಾಷ್ಠೆಯನ್ನು ಮುಟ್ಟಿತೋ ಏನೋ, ಮುಖ್ಯ ಮಂತ್ರಿಗಳು ರಾಜೀನಾಮೆಯನ್ನು ಕಳಿಸಿದರಂತೆ! ಅದನ್ನು ಸ್ವೀಕರಿಸಿ ಅವರ ಸ್ಥಳದಲ್ಲಿ ಅವಿನಾಶರ ಯೋಜನೆಯಾಗಬೇಕೆಂಬ ನಿಶ್ಚಯ

ವನ್ನು ಪಾರ್ಟೀ ನಾಯಕರು ಮಾಡಿದ್ದಾರೆ ಅವರ ಪತ್ರವನ್ನು ನಾನೇ ತಿಗೆದು ಕೊಂಡು ಬಂದಿದ್ದೀನೆ, ಹಿಡಿಯಿರಿ.

ಅವಿನಾಶ— [ಅತ್ಯಂತ ಆನಂದದಿಂದ] ನಾನು ಮುಖ್ಯಮಂತ್ರಿ!

ರಾಮರಾಯ-- ನಿಮ್ಮ ಅನುಮತಿಯನ್ನು ಪಡೆಯಬೇಕೆಂದು ಈ ಪತ್ರವನ್ನು ಬರೆದಿದ್ದಾರ.

ಅವಿನಾಶ— ನನಗಿನ್ನೂ ಈ ಮಾತಿನಲ್ಲಿ ನಂಬಿಗೆಯುಂಟಾಗಿದೆ. ನನ್ನನ್ನು ಮಂತ್ರಿಮಂಡಲದಲ್ಲಿ ತೆಗೆದುಕೊಂಡಾಗಲೆ ಅನೇಕರು ಅದಕ್ಕೆ ವಿರೋಧ ಮಾಡಿದ್ದರು.

ರಾಮರಾಯ— ಆದರೆ ಆಗಿನ ನಿನ್ನ ವಿರೋಧಕರೇ ನಿನ್ನ ಗೆಳೆಯ ರಾಗಿದ್ದಾರ ನಿನ್ನ ತತ್ವನಿಷ್ಠೆ, ನಿನ್ನ ತ್ಯಾಗಬುದ್ಧಿ, ನಿನ್ನ ನಿಸ್ವಾರ್ಥ ಜೀವನ, ಅದಕ್ಕೂ ಹೆಚ್ಚಾಗಿ, ನಿನ್ನ ಮಾತುಗಾರಿಕೆ ಜನರನ್ನು ಮುಗ್ಧಗೊಳಿಸಿದೆ. ನಿನ ಗಿದ್ದ ವಿರೋಧವೆಲ್ಲ ಮಂಜಿನಂತೆ ಕರಗಿಹೋಗಿದೆ. ಅವಿನಾಶ, ನೀನಿಂದು ನಿಜವಾಗಿಯೂ ಜನನಾಯಕನಾಗಿರುವೆ

[ಅವಿನಾಶ ಪತ್ರವನ್ನೋದುತ್ತಿದ್ದಾಗ, ಶೇಖರನು ಬರುವನು]

ನೀವ್ಯಾಕೆ ಸುಮ್ಮನೆ ನಿಂತುಕೊಂಡಿರುವಿರಿ? ಅವಿನಾಶನಲ್ಲಿ ಒಂದು ಗುಣವೂ ನಿಮ್ಮದಿಲ್ಲ!

ಶೇಖರ— ಹೌದು, ಅಂತಹ ಗುಣಗಳು ನನ್ನಲ್ಲಿಲ್ಲ - ಅವರ ಕಾಲಕೆ ಬೆಲೆಯುಳ್ಳ ದುರ್ಗುಣಗಳು ಮಾತ್ರ ನಾಕಷ್ಟಿವೆ ಎಂತಲೇ ನಾನು ಕೆಲವ ಜನರಿಗೆ ಬೇಕಾದವನಾಗಿದ್ದೇನೆ.

ರಾಮರಾಯ — ನಾಲಿಗೆಯು ಬಾಲ ದೊಂಕು ಎಂಬುದೇನು ಸುಳ್ಳು.

[ಅವಿನಾಶನು ಆನಂದದಿಂದ ಪತ್ರವನ್ನು ಕಿಸೆಯಲ್ಲಿ ಇಟ್ಟುಕೊಳ್ಳುತ್ತಾನೆ.]

ಅವಿನಾಶ — ರಾಮರಾಯರೆ, ನೀವು ಹೇಳುವುದು ನಿಜವಾಗಿದೆ. ಇಂದು ಪಾರ್ಟಿ ಮೀಟಿಂಗ್ ಆಗುವುದಿದೆ. ಆಗ ನಾನು ಮುಖ್ಯಮಂತ್ರಿ ಯಾಗಬೇಕೆಂದು ಎಲ್ಲರೂ ನನ್ನನ್ನು ಬೇಡಿಕೊಳ್ಳುವರು? [ಅವನ ದೃಷ್ಟಿ ಹೆಂಡತಿಯ ಕಡೆಗೆ ಹೋಗುತ್ತದೆ ಅವಳು ಅವನನ್ನು ಘೃಣಾದೃಷ್ಟಿ ಯಿಂದ ನೋಡುತ್ತಿದ್ದಾಳೆ]. ಅವರ . .. ರಾಮರಾಯ, ನನಗಿವನ್ನು ಸ್ವೀಕರಿ

ಸುವದು ಸಾಧ್ಯವಿಲ್ಲ ನಾನು ರಾಜಕಾರಣದಿಂದ ನಿವೃತ್ತನಾಗಬೇಕೆಂದು ನಿಶ್ಚಯಿಸಿದ್ದೇನೆ.

ರಾಮರಾಯ—[ಸಿಟ್ಟಿನಿಂದ] ಏನು ? ಶುದ್ಧಿಯಮೇಲೆ ಇರುವಿರೇನು? ತಲೆ ಕೆಟ್ಟವರ ಹಾಗೆ ಏನು ಮಾತಾಡುತ್ತಿದ್ದೀರಿ! ಕ್ಷಮಿಸಿರಿ, ಅವಿನಾಶ ನಿಮ್ಮ ಈ ವಿಚಿತ್ರ ಮಾತನ್ನು ಕೇಳಿ ನನಗಂತೂ ತಡೆಯಲಾರದಷ್ಟು ಸಿಟ್ಟು ಬಂದಿದೆ. ಸುಧಾ ಕೇಳಿದಿಯೇನು, ನಿನ್ನ ಗಂಡನ ಮಾತನ್ನು ?

ಸುಧಾ— ಹುಂ. ಕೇಳಿದ್ದೇನೆ, ಕಾಕಾಸಾಹೇಬ ಅವರು ಹೇಳುವದೇ ಯೋಗ್ಯವಾಗಿದೆ

ರಾಮರಾಯ— ಏನು ?—ಕತ್ತಿ ಇದ್ದೀರಿ, ಕತ್ತಿ, ನೀವಿಬ್ಬರೂ ಈ ಮನೆಯೆಂದರೆ ಹುಚ್ಚರ ಆಸ್ಪತ್ರೆಯಾಗಿಬಿಟ್ಟಿದೆ

ಸುಧಾ— ಅವಿನಾಶರ ಈ ಮನೋಧೈರ್ಯವನ್ನು ನೋಡಿ ನನಗೆ ಹಿಡಿಸಲಾರದಷ್ಟು ಆನಂದವಾಗಿದೆ. ಮುಖ್ಯಮಂತ್ರಿಪದದ ಸ್ವೀಕಾರಕ್ಕಿಂತಲೂ ಅದರ ತ್ಯಾಗದಿಂದಲೇ ಅವರು ತಮ್ಮ ದೊಡ್ಡಿಸ್ತನವನ್ನು ತೋರಿಸಿದ್ದಾರ

ಅವಿನಾಶ— ನಾನು ಈಗಲೇ ಪತ್ರಕ್ಕೆ ಉತ್ತರ ಬರೆಯುತ್ತೇನೆ

[ಅವಿನಾಶ ಹೋಗುತ್ತಾನೆ.]

ರಾಮರಾಯ-- ನಾನು ಇಲ್ಲಿಂದ ಹೋಗುವದೇ ಒಳ್ಳೆಯದು ಈಗ ನಿನ್ನೊಡನೆ ಮಾತಾಡಿ ಯಾವ ಪ್ರಯೋಜನವೂ ಇಲ್ಲ

ಶೇಖರ— ನೀವು ಹಿತ್ತಲಕ್ಕೆ ಹೋಗಿ ಮಾವಿನ ಮರದ ಕೆಳಗೆ ವಿಶ್ರಮಿಸಿಕೊಳ್ಳಿರಿ.

ರಾಮರಾಯ— ಯಾಕೆ, ನಿಮಗೂ ಹುಚ್ಚು ಹಿಡಿಯಿತೇನು?

[ರಾಮರಾಯ ಹೋಗುತ್ತಾನೆ.]

ಶೇಖರ— ಸುಧಾತಾಯಿ, ನಿನ್ನೆ ಪ್ರಾರಂಭವಾದ ನಾಟಕದಲ್ಲ ಈ ಕೊನೆಯ ಅಂಕಿನಲ್ಲಿ ನೀವು ಮರೆತು ಲಲಿತೆಯ ಪಾತ್ರವನ್ನೇ ಅಭಿನಯಿಸುತ್ತಿದ್ದೀರಿ ? ಇದರ ಅರಿವು ನಿಮಗಿದೆಯೆ ? ಲಲಿತೆಯನ್ನು ನೀವು ಮನೆಯಿಂದ ಹೊರಗೆ ಹಾಕಿದಿರಿ ಆದರೆ ಅವಳು ನಿಮ್ಮ ರೂಪದಿಂದ ಇಲ್ಲಿಯೇ ಸುಳಿಯುತ್ತಿದ್ದಾಳೆ.

ಸುಧಾ— ಶೇಖರ, ನೀವು ಅನ್ನುವುದಾದರೂ ಏನು ?

ಶೇಖರ— ಲಲಿತಾ ಇಲ್ಲಿ ಯಾತಕ್ಕೆ ಬಂದಿದ್ದಳು? ಅವಿನಾಶನನ್ನು ರಾಜಕಾರಣದಿಂದ ಹೊರಗೆ ಹಾಕುವದೇ ಅವಳ ಮುಖ್ಯ ಉದ್ದೇಶವಾಗಿತ್ತು ಅದು ಅವಳಿಗೆ ಸಾಧ್ಯವಾಗಲಿಲ್ಲ ಆದರೆ ನೀವು ಮಾತ್ರ ಅದನ್ನು ಆನಂದ ದಿಂದ ಮಾಡಲು ತೊಡಗಿದ್ದೀರಿ ಯಶಸ್ಸಿನ ಅತ್ಯುಚ್ಚ ಶಿಖರದ ಮೇಲಿಂದ ನೀವು ಅವಿನಾಶನನ್ನು ಆಳವಾದ ಕಂದರದಲ್ಲಿ ನೂಕಲು ಹೊರಟಿದ್ದೀರಿ.

ಸುಧಾ— ನಾನೇನು ಮಾಡುತ್ತಿದ್ದೇನೆ, ಶೇಖರ?

ಶೇಖರ— ನೀವು ನಿಮ್ಮ ಗಂಡನ ಬೆನ್ನೆಲುಬನ್ನೇ ಮುರಿಯುತ್ತಿದ್ದೀರಿ ರಾಜಕಾರಣವೇ ಅವನ ಕರ್ತೃತ್ವದ ಕ್ಷೇತ್ರ ಅಲ್ಲಿಂದ ಅವನನ್ನು ಹೊರಗೆ ಹಾಕಬೇಡಿರಿ, ಸುಧಾತಾಯಿ ಅವನು ಎಂದೋ ತಪ್ಪಿ ಇಟ್ಟ ಹೆಜ್ಜೆಗೆ ಇಷ್ಟು ...ಂಕರವಾದ ಶಿಕ್ಷೆಯೇ!

ಸುಧಾ— ... ಅದು ತಮ್ಮ ಕರ್ತವ್ಯವೆಂದು ... ನಿಗೆ ಶಿಕ್ಷೆಯನ್ನು ವಿಧಿಸಿಲ್ಲ, ಶೇಖರ! ... ರೇ

ಶೇಖರ— ಯಾಕಂದರೆ ಹಾಗೆ ಮಾಡಲು ... ವನ್ನು ತಾನು ಕಳೆದುಕೊಳ್ಳಬಹುದೆಂಬ ಹೆದರಿಕೆಯಿದೆ ಅವನಿಗೆ. ... ಪ್ರೇಮಕ್ಕಾಗಿ ತನ್ನ ಸರ್ವಸ್ವದ ಆಹುತಿಯನ್ನು ಕೊಡಲು ಅವನು ಸಿದ್ಧನಿದ್ದಾನೆ.

ಸುಧಾ— ಶೇಖರ, ನನಗೇನೂ ತೋಚದಂತಾಗಿದೆ ನಾನೇನು ಮಾಡಬೇಕು, ನೀವೇ ಹೇಳಿರಿ

ಶೇಖರ— ಅವಿನಾಶನು ಈಗ ಬರೆಯುತ್ತಿರುವ ಪತ್ರವನ್ನು ಹರಿದು ಹಾಕಿರಿ ಅವನು ಮುಖ್ಯಮಂತ್ರಿಯಾಗುವಂತೆ ಅವನ ಮನಸ್ಸನ್ನು ಒಲಿಸಿರಿ. ಅವನು ಹಿಂದೆ ಮಾಡಿದ ಪಾಪವನ್ನು ಮರೆತು, ಭೂತಕಾಲವನ್ನೇ ಹೂಳಿಬಿಟ್ಟು, ನೀವಿಬ್ಬರೂ ಜೊತೆಯಾಗಿ ಸುಂದರವಾದ ಭವಿಷ್ಯತ್ತನ್ನು ಕಟ್ಟಿರಿ. ರಾಜಕಾರಣದ ಸನ್ಯಾಸವೆಂದರೆ ಅವನಿಗೆ ಜೀವಂತ ಸಮಾಧಿಯೆಂಬುದನ್ನು ಮರೆಯಬೇಡಿರಿ.

[ಅಷ್ಟರಲ್ಲಿ ಅವಿನಾಶ ಬರುತ್ತಾನೆ.]

ಅವಿನಾಶ— ಸುಧಾ, ಓದಿನೋಡು ಈ ಪತ್ರವನ್ನು.

[ಸುಧಾ ಪತ್ರವನ್ನು ಓದಿ ಹರಿದುಹಾಕುತ್ತಾಳೆ.]

ಅವಿನಾಶ— ಇದೇನು, ಸುಧಾ, ಇದೇನು ಮಾಡಿದೆ?

ಸುಧಾ— ನಿಮ್ಮನ್ನು ರಾಜಕಾರಣದಿಂದ ಹೊರಗೆ ಹಾಕುವ ಅಧಿಕಾರ ನನಗಿಲ್ಲ, ಅವಿನಾಶ! ನೀವು ಗರುಡನ ಹಾಗೆ ಆಕಾಶದಲ್ಲಿ ಹಾರಾಡಬೇಕು ಕೈಕಾಲು ಮುರಿದುಕೊಂಡು ಮನೆಯಲ್ಲಿ ಬಿದ್ದಿರಬಾರದು ಕರ್ತವ್ಯತ್ವವೇ ನಿಮ್ಮ ಜೀವನ, ಅದನ್ನು ಕಳದುಕೊಂಡರೆ ಮರಣ

ಅವಿನಾಶ— (ಆನಂದದಿಂದ) ಸುಧಾ, ಸುಧಾ!

ಸುಧಾ— ನೀವು ಮಾಡಿದ ತಪ್ಪಿಗೆ ಶಿಕ್ಷೆ ಕೊಡುವ ಅಧಿಕಾರ ನನಗಿಲ್ಲ. ಅದೆಲ್ಲವನ್ನೂ ನಾನು ನನ್ನ ಮನಸ್ಸಿನಿಂದ ಅಳಿಸಿಬಿಟ್ಟಿದೇನೆ.

ಅವಿನಾಶ— ಸುಧಾ, ಕೃತಜ್ಞತೆಯಿಂದ ನನ್ನ ಹೃದಯ ತುಂಬಿ ಬಂದಿದೆ ಅದನ್ನು ವರ್ಣಿಸಲು ನನಗೆ ಬಾಯಿಯಿಲ್ಲ ನನಗೆ ಪುನರ್ಜನ್ಮವನ್ನು ಕೊಟ್ಟಿರುವ ದೇವತೆ ನೀನು

ಸುಧಾ— ಇದಕ್ಕಾಗಿ ನೀವು [redacted] ಗೆ ಆಭಾರಿಯಾಗಿರಬೇಕು, ನನಗಲ್ಲ!

[redacted]— ನಿನ್ನ ಋಣವನ್ನು ನಾನು ಹೇಗೆ ತೀರಿಸಲಿ? ಕಾಕಾ ಸಾಹೇಬರು ಬಂದರಲ್ಲ, ಆಗ ನೀನು ನನಗೇನೋ ಹೇಳಬೇಕೆಂದಿದ್ದೆ, ಹೇಳು

ಶೇಖರ— ನಾನು ಮತ್ತು ಮಂದಾಕಿನಿ ಮದುವೆಯಾಗಬೇಕೆಂದಿದ್ದೇವೆ- ನಿನ್ನ ಸಮ್ಮತಿಯಿದ್ದರೆ!

ಸುಧಾ— ನಾನು ಅದನ್ನೇ ಯೋಚಿಸುತ್ತಿದ್ದೆ; ನನ್ನ ಮನಸ್ಸಿನಂತೆಯೇ ಆಯಿತು

ಅವಿನಾಶ— ಆದರೆ ಅದು ಸಾಧ್ಯವಿಲ್ಲ, ಶೇಖರ. ನೀನು ನನ್ನನ್ನು ಕ್ಷಮಿಸು. ನೀನು ಲಲಿತಾಬಾಯಿಯನ್ನು ಪ್ರೀತಿಸುತ್ತಿರುವಾಗ . . ...

ಶೇಖರ— ಅದು ಸುಳ್ಳು.

ಅವಿನಾಶ— ಸುಳ್ಳು ಹೇಳಬೇಡ, ಶೇಖರ. ನಿನ್ನ ಮನೆಯಲ್ಲಿ ಒಳಗಿನ ಕೋಣೆಯಲ್ಲಿ ಮಧ್ಯರಾತ್ರಿಯ ಸಮಯಕ್ಕೆ ನೀನು ಅವಳನ್ನು ಅಡಗಿಸಿದ್ದೆ ಯೆಂಬುದನ್ನು ನಾನು ನೋಡಿಲ್ಲವೆ?

ಸುಧಾ— ಅವಿನಾಶ, ಆ ಕೋಣೆಯಲ್ಲಿ ಲಲಿತಾ ಇದ್ದದ್ದು ಶೇಖರನಿಗೆ ಕೂಡ ಗೊತ್ತಿರಲಿಲ್ಲ. ಅವರು ಮತ್ತೊಬ್ಬ ಹೆಂಗಸಿನ ಪ್ರತೀಕ್ಷೆ ಮಾಡುತ್ತಿದ್ದರು

ಅವಿನಾಶ— ಮತ್ತೊಬ್ಬ ಹೆಂಗಸು? ನಿನಗೇನು ಗೊತ್ತು ?

ಸುಧಾ— ಆ ಕೋಣೆಯಲ್ಲಿ ನಾನೇ ಇರಬೇಕೆಂದು ಅವರು ಭಾ ಸಿದ್ದರು ನಿನ್ನೆ ನಮ್ಮ ಜಗಳವಾದ ನಂತರ ನಾನು ಅವರಿಗೆ ಪತ್ರ ಕಳಿಸಿ ಅವರ ಸಹಾಯವನ್ನು ಪಡೆಯಲು ಅವರ ಮನೆಗೆ ಹೋಗಬೇಕೆಂದೆ. ಆದ ಆಮೇಲೆ ನನಗೇನನಿಸಿತೋ ಏನೋ, ನಾನು ಹೋಗಲಿಲ್ಲ

ಶೇಖರ— ಆ ಪತ್ರವನ್ನು ನಾನು ನನ್ನ ಟೇಬಲ್ಲಿನ ಮೇಲೆ ಇಟ್ಟಿದ್ದೆ.

ಸುಧಾ— ಅದನ್ನು ಲಲಿತಾ ಕಳವು ಮಾಡಿದಳು

ಅವಿನಾಶ-- ಮತ್ತು ಅದನ್ನು ನನ್ನ ಕಡೆಗೆ ಕಳಿಸಿದಳು—ನಮ್ಮಿಬ್ಬ ಮಧ್ಯದಲ್ಲಿ ಸಂಶಯ ನಿರ್ಮಾಣವಾಗಬೇಕೆಂದು ಈ ಪತ್ರದ ಜೊತೆಯ ಅವಳು ತನ್ನ ಸಹಿಯಿಂದ ಮತ್ತೊಂದು ಪತ್ರವನ್ನು ಕಳಿಸಿದ್ದಳು. ಅದನ ನಾನು ಒಡೆದು ಹರಿದುಹಾಕಿದೆ

ಸುಧಾ— ನಾವೀ ಎರಡು ದಿನಗಳಲ್ಲಿ ಎಷ್ಟು ಸಂಕಟಗಳನ್ನು ಎದುರಿ ಬೇಕಾಯಿತು!

ಅವಿನಾಶ— ಅವರ ನಿನ್ನಮೇಲೆ ಸಂಶಯ ಬರುವದು ನನ ಸಾಧ್ಯವೆ ?

ಸುಧಾ-- ಕೊಡಿರಿ ಆ ಪತ್ರವನ್ನು ಇದರ ಮೇಲೆ ನಿಮ್ಮ ಹೆಸರನ್ನು ಹಾಕಿಕೊಡುತ್ತೇನೆ.

ಶೇಖರ— ಅದು ನನಗೆ ಬರೆದ ಪತ್ರ ? ನೀವದನ್ನು ನನಗೇ ಕೊ ಬೇಕು.

ಸುಧಾ— ಇಲ್ಲ, ನಿಮಗೆ ಈ ಪತ್ರವನ್ನು ಕೊಡುವದಿಲ್ಲ ನಿಮ ನಮ್ಮ ಮಂದಾಕಿನಿಯನ್ನು ಕೊಡುತ್ತೇವೆ.

ಶೇಖರ— ಆದರೆ ಅವಳು ನನಗೀಗ ಸಿಗಬಹುದೋ ? ಅವಳು ಒಪ್ಪಿ ಯಿತ್ತು ಈಗ ಇಪ್ಪತ್ತು ನಿಮಿಷಗಳಾಗಿ ಹೋದವು.

[ಮಂದಾ, ರಾಮರಾಯರು ಬರುತ್ತಾರೆ.]

ರಾಮರಾಯ— ಇಲ್ಲ ಮಂದಾ, ನಾನಿನ್ನು ಹೋಗಬೇಕು. ಬಹ ಕೆಲಸವಿದೆ ನಮ್ಮ ಚಿರಂಜೀವರಿಗೆ ಅವರು ಕೊಟ್ಟ ಮಾತಿನ ನೆನಪನ್ನು ಮಾ ಕೊಟ್ಟು ಹೋಗುತ್ತೇನೆ.

ಶೇಖರ— ನೀವು ನೆನಪು ಕೊಡುವ ಕಾರಣವಿಲ್ಲ.

ರಾಮರಾಯ— ಅಂದರೆ ನಿನ್ನ ಮದುವೆ ನಿರ್ಧಾರವಾಯಿತೆ?

ಶೇಖರ— ಚಿತ್ರಲಿಖಿತ ನರ್ತಕಿಯ ರೂಪದ ಹುಡುಗಿ ನೀವು ನಿಮ್ಮ ಸೊಸೆಯ ಜೊತೆಯಲ್ಲಿ ಮಾತಾಡುತ್ತಿದ್ದಿರಿ

ರಾಮರಾಯ - ಸುಂದರಿ ನಿನ್ನನ್ನು ಮದುವೆಯಾಗಲು ಒಪ್ಪಿರುವಳೆ? ಭೇಷ್, ನೀವು ಹುಟ್ಟಿದ್ದು ಸಾರ್ಥಕವಾಯಿತು.

ಶೇಖರ - ನಿಮಗೆ ಮತ್ತೊಂದು ಸಂತೋಷದ ಸುದ್ದಿಯನ್ನು ಹೇಳಬೇಕಾಗಿದೆ

ಸುಧಾ - ಅಂದರೆ ನಿನ್ನ ಚಿಕ್ಕ [illegible] ಮದುವೆಯಾಗುತ್ತದೆ

ಅವಿನಾಶ - ಸುಷ್ಮ ಮಂತ್ರಿಯಾಗಲು ನನ್ನ ಒಪ್ಪಿಗೆಯಿದೆ

ರಾಮರಾಯ - ಸಂತೋಷ, ಸಂತೋಷ! ನಿನ್ನನ್ನು ನಾನು [illegible] ಮಗುವನ್ನು ಮಂತ್ರಿಯಾಗುವ [illegible] ಮಂತ್ರಿಯಾಗ [illegible]

ಅವಿನಾಶ - [illegible]

ಸುಧಾ [illegible] ನನ್ನ ಸೊಸೆಯು [illegible]

ರಾಮರಾಯ— ಸೊಸೆಯ ಜೇಟಕೆ, ಜೇಡಿಕೆಯು, ಸುಧಾ! ಅದು ಆಜ್ಞೆ! ಇನ್ನುಮೇಲೆ ನಾನು ಅವಳ ಹತ್ತಿರವೇ ಇದ್ದುಬಿಡುತ್ತೇನೆ

ಶೇಖರ— ಅಂದರೆ ನನ್ನ ಗತಿ?

ರಾಮರಾಯ— ಮದುವೆಯಾದರೂ ನಿನ್ನ ಹುಡುಗಾಟಿಕೆ ಹೋಗಲಿಲ್ಲ

ಅವಿನಾಶ— ಹುಡುಗರಾಗುವ ವರೆಗೆ ಹುಡುಗಾಟಿಕೆ ಹೇಗೆ ಹೋಗಬೇಕು?

ಶೇಖರ— ಒಳ್ಳೆಯದು, ಇನ್ನು ಮಾತು ಸಾಕು ಒಳಗೆ ನಡೆಯಿರಿ ನನಗಂತೂ ಹಸಿವೆಯಾಗಿದೆ.

ಸುಧಾ— ನಿಮಗೆ ಹೆಂಡತಿ ಸಿಕ್ಕಳೆಂತಲೋ?

ಶೇಖರ— ಇಲ್ಲ, ಅವಿನಾಶನಿಗೆ ಅವನ ಹೆಂಡತಿ ಮತ್ತೆ ಸಿಕ್ಕಳೆಂದು.
